ವಿಶ್ವವಿದ್ಯಾಲಯ ಆಡಳಿತ ಮಂಡಳಿಗೆ ಒಬ್ಬ ವಿಧಾನಸಭಾ ಸದಸ್ಯರನ್ನು ಚುನಾಯಿಸಬೇಕೆಂದು ಸೂಚಿಸುತ್ತೇನೆ.

ಅಧ್ಯಕ್ಷರು: ಪ್ರಸ್ತಾಪ ಮಂಡಿಸಲಾಯಿತು.

6. ನಿಯಮ 69ರ ಮೇರೆಗೆ ನಡೆದ, ಚರ್ಚೆಗೆ ಉತ್ತರ:

ವಿಶೇಷ ಆರ್ಥಿಕ ವಲಯದ (Special Economic Zone) ಬಗ್ಗೆ

ಶ್ರೀ ಹೆಚ್.ಡಿ.ಕುಮಾರಸ್ವಾಮಿ(ಮುಖ್ಯಮಂತ್ರಿಗಳು): ಸನ್ಮಾನ್ಯ ಅಧ್ಯಕ್ಷರೇ, ನಿನ್ನೆಯಿಂದ ಸದನದಲ್ಲಿ ಹಲವಾರು ಜನ ವಿರೋಧ ಪಕ್ಷದ ಪ್ರಮುಖ ಸದಸ್ಯರು S.E.Z. ಅಂದರೆ ವಿಶೇಷ ಆರ್ಥಿಕ ವಲಯದ ಬಗ್ಗೆ ಬಹಳ ವಿವರವಾದ ಚರ್ಚೆಯನ್ನು ಮಾಡಿದ್ದಾರೆ. ನಮ್ಮ ಸರ್ಕಾರದ ಬಗ್ಗೆ ಆಕ್ರೋಶ ವ್ಯಕ್ತಪಡಿಸಿದ್ದಾರೆ, ಭಂಡ ಸರ್ಕಾರ ಎಂದೆಲ್ಲಾ ಹೇಳಿದ್ದಾರೆ. ಇವತ್ತು ರೈತರನ್ನು ಕಗ್ಗೊಲೆ ಮಾಡಲಿಕ್ಕೆ ಹೊರಟಿದ್ದಾರೆ. ರೈತರನ್ನು ನಿರ್ಗತಿಕರನ್ನಾಗಿ ಮಾಡಲು ಹೊರಟಿದ್ದಾರೆ, ಈ ರೀತಿಯ ಚರ್ಚೆಗಳು ಆಗಿವೆ. ಈ ವಿಶೇಷ ಆರ್ಥಿಕ ವಲಯದ ಬಗ್ಗೆ ಸದನದಲ್ಲಿ ನಿನ್ನೆ ಚರ್ಚೆಯಾದರೂ, ಇದು ಸುಮಾರು ಎರಡು ತಿಂಗಳಿಂದ ಸದನದ ಹೊರಗೆ ಹಲವಾರು ಸಂದರ್ಭಗಳಲ್ಲಿ ಚರ್ಚೆಗೆ ಗ್ರಾಸವಾಗಿರತಕ್ಕಂಥ, ಪ್ರಮುಖವಾಗಿರತಕ್ಕಂಥಾದ್ದಾಗಿದೆ. ಸರ್ಕಾರದ ನಿರ್ಣಯಗಳ ಬಗ್ಗೆ ನನಗೂ ಗಾಬರಿಯಾಗತಕ್ಕಂಥ ಹೇಳಿಕೆಗಳು ಬರುತ್ತಿವೆ. ನನಗೂ, ಎಲ್ಲೋ ಒಂದು ಕಡೆ ನಾವು ತಪ್ಪು ಎಸಗಿದ್ದೇವೇನೋ ಎನ್ನುವ ರೀತಿಯಲ್ಲಿ ಗಾಬರಿಯಾಯಿತು. ಇತ್ತೀಚೆಗೆ ಕಾಂಗ್ರೆಸ್ ಪಕ್ಷದ ವತಿಯಿಂದ ಒಂದು ಸತ್ಯ ಸಂಶೋಧನಾ ಸಮಿತಿಯನ್ನು ಮಾಡಿ, ಅವರ ಪಕ್ಷ ಪ್ರಮುಖರುಗಳನ್ನು ಆ ಸಮಿತಿಗೆ ಆಯ್ಕೆ ಮಾಡಿ, ಅವರು ಬೆಂಗಳೂರು ಗ್ರಾಮಾಂತರ ಜಿಲ್ಲೆ ಹಾಗೂ ಬೆಂಗಳೂರು ನಗರ ಜಿಲ್ಲೆಯ ವ್ಯಾಪ್ತಿಯಲ್ಲಿ ಬರತಕ್ಕಂಥ ಪ್ರದೇಶಗಳಿಗೆ ಭೇಟಿ ಕೊಟ್ಟು, ಆ ಸಮಿತಿ ವರದಿಯನ್ನು ನಿನ್ನೆ ಕಾಂಗ್ರೆಸ್ ಪಕ್ಷದ ಅಧ್ಯಕ್ಷರಿಗೆ ತಲುಪಿಸಿದ್ದಾರೆ. ಆ ವರದಿಯ ಆಧಾರದ ಮೇಲೆ ನಿನ್ನೆಯಿಂದ ಇಲ್ಲಿ ಹಲವಾರು ಸದಸ್ಯರುಗಳ ಚರ್ಚೆಯನ್ನು ಮಾಡಿರತಕ್ಕಂಥಾದ್ದನ್ನು ನಾನು ಗಮನಿಸಿದ್ದೇನೆ. ಎಲ್ಲಾ ಸದಸ್ಯರ ಭಾವನೆಗಳೇನವೆ, ರೈತರ ಬಗ್ಗೆ ಅವರು ವ್ಯಕ್ತಪಡಿಸಿರತಕ್ಕಂಥ ಕಾಳಜಿ, ಕಳಕಳಿ ಏನಿದೆ, ಅದರಲ್ಲೂ ಪ್ರಮುಖವಾಗಿ ಕಾಂಗ್ರೆಸ್ ಪಕ್ಷದ ಸದಸ್ಯರು ಇತ್ತೀಚಿನ ದಿನಗಳಲ್ಲಿ ರೈತರ ರಕ್ಷಣೆಯ ಬಗ್ಗೆ ಏನು ಚರ್ಚೆ ಮಾಡುತ್ತಿದ್ದಾರೆ, ರೈತರ ಜಮೀನನ್ನು ಉಳಿಸತಕ್ಕಂಥಾದ್ದರ ಬಗ್ಗೆ ಏನು ಚರ್ಚೆ ಮಾಡುತ್ತಿದ್ದಾರೆ, ಇದು ನಿಜಕ್ಕೂ ರಾಜ್ಯದಲ್ಲಿ ನಾವು ಒಂದು ಹೊಸ ಬೆಳವಣಿಗೆಯನ್ನು ಕಾಣುತ್ತಿದ್ದೇವೆ. ಅದಕ್ಕಾಗಿ

ನಾವು ಈ ಸಂದರ್ಭದಲ್ಲಿ ವಿಶೇಷವಾಗಿ ಅಭಿನಂದನೆಗಳನ್ನು ಸಲ್ಲಿಸಬೇಕಾಗುತ್ತದೆ. ಏಕೆಂದರೆ ನಮಗೆ ಎಚ್ಚರಿಕೆಯನ್ನು ಕೊಡತಕ್ಕಂಥ ಕೆಲಸವನ್ನು ಮಾಡುತ್ತಿದ್ದೀರಿ. ಈ ಭೂಮಿಯ ವ್ಯವಹಾರಗಳ ಬಗ್ಗೆ ಹಿಂದಿನ ಸರ್ಕಾರ ತೆಗೆದುಕೊಂಡಂಥ ನಿರ್ಣಯಗಳ ಆಧಾರದ ಮೇಲೆ ಕಳೆದ ಸಾರ್ವಜನಿಕ ಚುನಾವಣೆಯಲ್ಲಿ ಮತದಾರರು ಕಾಂಗ್ರೆಸ್ ಪಕ್ಷವನ್ನು ಬಹುಶಃ ಆ ಭಾಗಕ್ಕೆ ಕಳುಹಿಸಿದ್ದಾರೆ ಎನ್ನುವುದು ನನ್ನ ತಲೆಯಲ್ಲಿದೆ ಎನ್ನುವುದನ್ನು ಹೇಳುವುದಕ್ಕೆ ಬಯಸುತ್ತಿದ್ದೇನೆ. ಅದನ್ನು ನಾನು ಮರೆತಿಲ್ಲ. ಸರ್ಕಾರ ತೆಗೆದುಕೊಳ್ಳತಕ್ಕಂಥ ನಿರ್ಣಯಗಳ ಮೂಲಕ ನಾವು ತಪ್ಪು ಹೆಜ್ಜೆಯನ್ನು ಇಟ್ಟಾಗ ಈ ರಾಜ್ಯದ ಮತದಾರರು ಯಾವ ನಿರ್ಣಯಗಳನ್ನು ಮಾಡುತ್ತಾರೆ ಎನ್ನುವ ಬಗ್ಗೆ ಹಿಂದಿನ ಅನುಭವಗಳಿಂದಲೇ ಈ ಮಾತನ್ನು ಹೇಳುತ್ತಿದ್ದೇನೆ. ನಾವು ಕೆಲವು ಜಮೀನುಗಳನ್ನು ಭೂಸ್ವಾಧೀನ ಮಾಡಿರತಕ್ಕಂಥಾದ್ದರ ಬಗ್ಗೆ ವಾಸ್ತವಾಂಶಕ್ಕೆ ದೂರವಾಗಿ ಕೆಲವು ಮಾಹಿತಿಗಳನ್ನು ಸದಸ್ಯರು ನೀಡಿದ್ದಾರೆ. ಅದನ್ನು ಅವರು ಸದನದ ಮುಂದೆ ಮಂಡಿಸತಕ್ಕಂಥ ಸಂದರ್ಭದಲ್ಲಿ ಕಾಂಗ್ರೆಸ್ ಪಕ್ಷದ ಸತ್ಯ ಶೋಧನಾ ಸಮಿತಿ ಕೊಟ್ಟಿರತಕ್ಕಂಥ ಆಧಾರದ ಮೇಲೆ ಚರ್ಚೆ ಮಾಡಿದ್ದು, ಅದಕ್ಕೆ ನಾನು ನಂತರ ಬರುತ್ತೇನೆ. ಬೆಳಗ್ಗೆ ಶ್ರೀರಾಮರೆಡ್ಡಿಯವರು ಮಾತನಾಡತಕ್ಕಂಥ ಸಂಧರ್ಭದಲ್ಲಿ, S.E.Z ವಿಷಯದಲ್ಲಿ ಯಾವ ಯಾವ ಹಂತಗಳಲ್ಲಿ ತೀರ್ಮಾನಗಳಾಯಿತು ಎನ್ನುವ ಬಗ್ಗೆ ಅವರು ಚರ್ಚೆ ಮಾಡಿದ್ದಾರೆ. S.E.Z. ಎನ್ನತಕ್ಕಂಥಾದ್ದು ಯಾವ ಸಂದರ್ಭದಲ್ಲಿ ಬಂತು, ಕೇಂದ್ರ ಸರ್ಕಾರಗಳು ಯಾವ ಒಂದು ದೃಷ್ಟಿಯಿಂದ ನಿರ್ಣಯಗಳನ್ನು ತೆಗೆದುಕೊಂಡಿದ್ದಾರೆ, ಅವರಲ್ಲಿ ಆಗ ಕಲ್ಪನೆಗಳೇನದ್ದವು ಎನ್ನುವ ಬಗ್ಗೆ ನಾನು ಒಂದೆರಡು ವಿಷಯಗಳನ್ನು ಈ ಸದನದ ಮುಂದಿಡಲು ಬಯಸುತ್ತಿದ್ದೇನೆ. ಈ ವಿಶೇಷ ಆರ್ಥಿಕ ವಲಯದ ಬಗ್ಗೆ ಸಾರ್ವಜನಿಕವಾಗಿ, ಇಡೀ ದೇಶದಲ್ಲೇ ಪ್ರತಿಭಟನೆಗಳು, ಹೋರಾಟಗಳು ಪ್ರಾರಂಭವಾಗಿವೆ. India was one of the first in Asia to recognize the effectiveness of the export processing zone, model in promoting exports with Asia's first E.P.Z. set up in khandla in 1965. With a view to overcome the shortcomings experienced on accoutnt of the multiplicity of controls and clearances. Absence of world class infrastructure and an unstable fiscal regike and with a view to attract larger foreign investments in India, the Special Economic Zone Policy was announced in April 2000. This policy was intend to make S.E.Z.s an engine for economic growth supported by quality infrastructure, complimented by an attractive fiscal package, both at the center and the state level, with the minimum

possible regulations. S.E.Z.s in India function from 1-11-2000 to 9-02-2006 under the provisions of the foreign trade policy and fiscal incentives were made effective to the provisions of relavent statues. ಯಾವ ಒಂದು ಉದ್ದೇಶದಿಂದ ಈ S.E.Z. Act ಅನ್ನು ತಂದರು ಎಂದರೆ, generation of additional economic activity, promotion of exports of goods and services, promotion of investment from domestic and foreign source creation of employment opportunities, development of infrastructure facilities. ಈ ಒಂದು ಉದ್ದೇಶದಿಂದ S.E.Z.ಅನ್ನು ತಂದರು. ನಮ್ಮ Planning commission ನವರೂ ಸಹ ಈ ಒಂದು S.E.Z. ನ ಅನಿವಾರ್ಯತೆ, ಅವಶ್ಯಕತೆಯ ಬಗ್ಗೆ ಏನು ವರದಿಯನ್ನು ಕೊಟ್ಟಿದ್ದಾರೆ ಎಂದರೆ, the planning commission has estimated that India needs infrastructure investments totaling about 320 billion dollars in the next five years. Out of this 320 billion dollars, about 65 billion dollars is likely to be funded by public, private partnership projects. 30% of this 65 billion dollars or roughly 20 billion dollars is expected to come in as equity and the rest as commercial debt. Therefore, private equity can play a key role in funding a large portion of the 20 billion dollars equity portion, says Executive director, Amit pandurange who is conducting study on infrastructure financing for the Finance Ministry. What is more pertinent is that infrastructure projects give private equity an avenue to deploy funds profitably in India and with surety of returns given the huge demand for new infrastructure. Central Government ನವರು ಈ ವಿಶೇಷ ಆರ್ಥಿಕ ವಲಯದ ಬಗ್ಗೆ ಏನು ಮಾಡಬೇಕು ಎಂದು ಉಪದೇಶ ಮಾಡಿದ್ದಾರೆ ಎಂದರೆ, ಎಲ್ಲಾ ರಾಜ್ಯಗಳ ಮುಖ್ಯ ಕಾರ್ಯದರ್ಶಿಗಳಿಗೆ ಮತ್ತು B.O.E.ಗಳಿಗೆ ಒಂದು ಸುತ್ತೋಲೆಯನ್ನು ಹೊರಡಿಸಿದ್ದಾರೆ. As you are aware varies issues relating to Special Economic Zones including acquisition of land were considered by the empowerd group of ministers at its meeting held on 5th April 2007. ಈ ಡೇಟ್‌ನಲ್ಲಿ ಏನು ತೀರ್ಮಾನವಾಗಿದೆ ಎಂದರೆ, the minimum procecessing area limit to be fixed uniformly at 50% for multi product S.E.Z.s as well as sectors specific S.E.Z.s. Upper limit of the area required for multi product SEZs to be fixed at 5.000 Hectares. However, the state Government may prescribe a lower limit. A Comprehensive resettlement and rehabilitation policy to be worked

out ensuring livelihood from the project to atleast 1% from each displaced family BOA will not approve any SEZs where the state Governments have carried out or proposed to carry out compulsory acquisition of land for such SEZs after 5th April 2007. However, cases in which or persons interested in the land have either not submitted any objection under Section 5(a), or have withdrawn objection submitted and have thus accessed in the proposed aquisation of land may be considered in the other cases where there are objection under section 5(a), the collector, acquiring authority may not proceed with the acquisition for the purpose of SEZ and such cases if any brought before the board of approvel may not be considered. ಇದು ಎಲ್ಲಾ ರಾಜ್ಯ ಮುಖ್ಯ ಕಾರ್ಯದರ್ಶಿಯವರಿಗೆ ಕಳುಹಿಸಿರತಕ್ಕಂಥ ಒಂದು ಉಪದೇಶ ಅಧ್ಯಕ್ಷರೆ. ಇವತ್ತೇನು SEZ ಬಗ್ಗೆ ಇಷ್ಟೊಂದು ರೀತಿಯ ಟೀಕೆಗಳು ನಡೆಯುತ್ತಿವೆ, ಜನರಿಗೆ ಏನು ಅನುಮಾನಗಳು ಪ್ರಾರಂಭವಾಗಿವೆ, ನೊಬೆಲ್ ಪಾರಿತೋಷಕವನ್ನು ಪಡೆದಂಥ ಅಮರ್ತ್ಯಸೇನ್‌ರವರು ಕನ್ನಡಪ್ರಭದಲ್ಲಿ ಏನೊಂದು ವಿಷಯವನ್ನು ಪ್ರಸ್ತಾಪ ಮಾಡಿದ್ದಾರೆ, ಅದನ್ನು ನಾನು ಸದನದ ಗಮನಕ್ಕೆ ತರುವುದಕ್ಕೆ ಬಯಸುತ್ತಿದ್ದೇನೆ. ಇದರ ಬಗ್ಗೆ ಹೇಳಿ ನಂತರ ನಿಮ್ಮ ಆಪಾದನೆಗಳ ಬಗ್ಗೆ ನಾನು ಉತ್ತರ ಕೊಡುತ್ತೇನೆ. ದಯಮಾಡಿ 10 ನಿಮಿಷ ನನಗೆ ಅವಕಾಶ ಕೊಡಬೇಕು. ನಿಮ್ಮೆಲ್ಲರ ಮಾತುಗಳನ್ನು ಸಹ ನಾನು ತಾಳ್ಮೆಯಿಂದ ಕೇಳಿದ್ದೇನೆ. "ಇಂಥ ಚಲನವಲನವನ್ನು ಸರ್ಕಾರವಾಗಲಿ, ಪ್ರತಿಪಕ್ಷವಾಗಲಿ ನಿರ್ಬಂಧಿಸುವುದು ಅಸಾಧ್ಯ ಇದಕ್ಕೆ ಕಾರಣ ಈಗ ಎಲ್ಲವೂ ರಾಜಕೀಮಯವಾಗಿರುವುದು. ಜನರು ಕೃಷಿ ವಲಯದಿಂದ ಹೇಗೆ ಹೊರ ನಡೆದರೂ ಒಟ್ಟು ಕೃಷಿ ಉತ್ಪಾದನೆ ಪ್ರಮಾಣ ಕುಸಿಯುವುದಿಲ್ಲ. ಅದರಿಂದ ತಲಾದಾಯ ಹೆಚ್ಚುತ್ತದೆ. ಔದ್ಯಮಿಕ ವಿಕಾಸನಕ್ಕಾಗಿ ಕೃಷಿ ಮತ್ತು ಆರ್ಥಿಕ ಕ್ಷೇತ್ರಗಳ ಔದ್ಯಮೀಕರಣಗೊಳ್ಳಬೇಕು. ಆದರೆ, ಯಾರಾದರೂ ರಾಜಕೀಯವಾಗಿ ಔದ್ಯಮೀಕರಣದ ವಿಕಸನಕ್ಕೆ ಅಡ್ಡಿ ಉಂಟುಮಾಡಿದರೆ ಅದರಿಂದ ಬಡವರ ಹಿತರಕ್ಷಣೆಗೆ ಅಡ್ಡಿಯಾದಂತೆಯೇ. ಆದ್ದರಿಂದ ಔದ್ಯಮೀಕರಣ ಅತ್ಯಗತ್ಯ. ಕೃಷಿ ಭೂಮಿಯನ್ನು ಔದ್ಯಮೀಕರಣಕ್ಕೆ ಬಳಸುವುದನ್ನು ನಿಷೇಧಿಸಿದಲ್ಲಿ ಅದು ಅಂತಿಮವಾಗಿ ನಾವು ನಮ್ಮನೇ ಸೋಲಿಸಿಕೊಂಡತೆಯೇ ಹೌದು. ಫಲವತ್ತಾಗಿರದ ಭೂಮಿಯಲ್ಲಿ ಕೈಗಾರಿಕಾಕರಣ ಮಾಡಿದರೆ ಔದ್ಯಮೀಕರಣ ಆಗಲೇ ಬೇಕು. ಎಲ್ಲೆಲ್ಲಿ ಉತ್ಪನ್ನ ಸೌಲಭ್ಯ ಸಾಧ್ಯವಿಲ್ಲವೋ ಅಲ್ಲೆಲ್ಲಾ ಕೈಗಾರಿಕೀಕರಣ ಆಗಲೇ ಬೇಕು. ಆಗಿಯೇ ಆಗುತ್ತದೆ. ಹಾಗಾಗಿಯೇ ಕಲ್ಕತ್ತದ ಸುತ್ತಮುತ್ತ ಇವರು ಹೇಳಿದ್ದಾರೆ. 'ಮಹಾನ್

ಕೈಗಾರಿಕೆಗಳೆಲ್ಲ ಅದು ಮ್ಯಾಂಚೆಸ್ಟರ್ ಆಗಲಿ ಅಥವಾ ಲಂಕಾಷೈರ್ ಆಗಲಿ, ಇವರು ಅತ್ಯಂತ ಫಲವತ್ತಾದ ಕೃಷಿ ಭೂಮಿಯಲ್ಲೆ. ಕೈಗಾರಿಕೆಗಳು ಯಾವಾಗಲೂ ಕೃಷಿ ವಿರುದ್ಧ ಸ್ಪರ್ಧಿಸಿಯೇ ತೀರುತ್ತವೆ.' ಇದು ಅವರು ಮಾಡಿರತಕ್ಕಂಥ ವಿಶ್ಲೇಷಣೆ. ನಮ್ಮ ವಿರೋಧ ಪಕ್ಷದ ನಾಯಕರುಗಳು ಕಳೆದ 2–3 ತಿಂಗಳುಗಳಿಂದ ಈ ಸರ್ಕಾರ ಸುಮಾರು ಈಗಾಗಲೇ 1.60,000 ಎಕರೆ ಜಮೀನನ್ನು ಭೂಸ್ವಾಧೀನ ಮಾಡಿಕೊಂಡುಬಿಟ್ಟಿದೆ, ಹಂಚಿಬಿಟ್ಟಿದ್ದಾರೆ ಎಂದು ಮಾನ್ಯ ವಿರೋಧ ಪಕ್ಷದ ನಾಯಕರಾದ ಶ್ರೀ ಧರ್ಮಸಿಂಗ್‌ರವರು ಮಾಡಿದ ಭಾಷಣವನ್ನು ನಾನು ನೋಡಿದ್ದೇನೆ. ಕೆ.ಸಿರೆಡ್ಡಿಯವರಿಂದ ಹಿಡಿದು, ಸನ್ಮಾನ್ಯ ಧರ್ಮಸಿಂಗ್‌ರವರು ಮುಖ್ಯಮಂತ್ರಿಗಳಾಗಿದ್ದ ಅವಧಿವರೆಗೆ ಕೇವಲ 16.000 ಎಕರೆಗಳನ್ನು ಮಾತ್ರ ಈ ರಾಜ್ಯದಲ್ಲಿ ಕೈಗಾರಿಕೆಗಳಿಗೆ ನಾವು ಭೂಸ್ವಾಧೀನ ಮಾಡಿದ್ದೇವೆ, ಈ ಸರ್ಕಾರ ಬಂದ ನಂತರ 18 ತಿಂಗಳಲ್ಲಿಯೇ 1,60,000 ಎಕರೆ ಭೂಸ್ವಾಧೀನ ಮಾಡಿ ಹಂಚಿಬಿಟ್ಟಿದ್ದಾರೆ, ಈಗಾಗಲೇ ಪ್ರಕ್ರಿಯೆ ಪ್ರಾರಂಭವಾಗಿಬಿಟ್ಟಿದೆ, Real Estate agent ಗಳು ಈಗಾಗಲೇ ಬೀದಿ ಬೀದಿಯಲ್ಲಿ ಸುತ್ತುತ್ತಿದ್ದಾರೆ, ಇತ್ಯಾದಿಗಳನ್ನು ಹೇಳಿರುವ ಭಾಷಣವನ್ನು ನಾನು ಓದಿದ್ದೇನೆ, ಕೇಳಿದ್ದೇನೆ. ಈ ವಿಶೇಷ ಆರ್ಥಿಕ ವಲಯದಡಿಯಲ್ಲಿರಬಹುದು, ಈ ಭೂಮಿಯನ್ನು ಭೂಸ್ವಾಧೀನ ಮಾಡತಕ್ಕಂಥ ಪ್ರಕಿಯೆ ಪ್ರಾರಂಭವಾಗಿರತಕ್ಕಂಥದ್ದು area-wise 2–3 ರಾಜ್ಯಗಳ ವಿಷಯವನ್ನು ಪ್ರಸ್ತಾಪ ಮಾಡಲಿಕ್ಕೆ ಬಯಸುತ್ತೇನೆ. ಹರಿಯಾಣದಲ್ಲಿ ಈಗಾಗಲೇ 44,144,34 ಹೆಕ್ಟೇರ್ ಜಮೀನಿನಲ್ಲಿ SEZ ಮಾಡುವುದಕ್ಕೆ approval ಕೊಟ್ಟಿದ್ದಾರೆ. ಮಹಾರಾಷ್ಟ್ರದಲ್ಲಿ 40,917,76 ಎಕರೆಗಳು SEZ ತರಲಿಕ್ಕೆ ಹೊರಟ್ಟಿದ್ದಾರೆ. ಗುಜರಾತ್‌ನಲ್ಲಿ 18,926,56 ಹೇಕ್ಟೇರ್ ಜಮೀನನ್ನು SEZ ವ್ಯಾಪ್ತಿಯಲ್ಲಿ ತರುತ್ತಿದ್ದಾರೆ. ಹೀಗೆ ರಾಜಸ್ಥಾನ, West Bengal, ಮಧ್ಯಪ್ರದೇಶ ಇವೆಲ್ಲ ಆದ ನಂತರ ಕರ್ನಾಟಕ ಈ SEZ ವ್ಯಾಪ್ತಿಯೊಳಗೆ approval ಕೊಡುವುದಕ್ಕೆ ನಿರ್ಣಯ ಮಾಡತಕ್ಕಂಥದ್ದಕ್ಕೆ 6411 ಹೆಕ್ಟೇರ್‌ಗೆ ಇವತ್ತು ನಾವು ಅನುಮತಿಯನ್ನು ಕೊಡತಕ್ಕಂಥದ್ದಕ್ಕೆ approval ಕೊಟ್ಟಿದ್ದೇವೆ. ನಮ್ಮ ರಾಜ್ಯ 9ನೇ ಸ್ಥಾನದಲ್ಲಿದೆ. ನಾವು ಸ್ವೇಚ್ಛಾಚಾರವಾಗಿ ಇವತ್ತು ರೈತರ ಜಮೀನುಗಳನ್ನು ಪರಭಾರೆ ಮಾಡಿಬಿಟ್ಟಿದ್ದಾರೆ. ಈಗಾಗಲೇ ಲೂಟಿ ಹೊಡೆಯಲಿಕ್ಕೆ ಹೊರಟಿದ್ದಾರೆಂದು ಪಾಪ ವಿರೋಧ ಪಕ್ಷದ ಸಾಲಿನ ಹಿಂದುಗಡೆಯಿಂದ ಹೇಳುತ್ತಿದ್ದರು. ದಿನೇಶ್ ಗುಂಡೂರಾವ್‌ರವರು ಇಲ್ಲ. ಹಾಗೆಯೇ ಹೊರಗಡೆ ಭಾಷಣಗಳಲ್ಲಿ, 20000 ಕೋಟಿ ಅವ್ಯವಹಾರ ಆಗಿದೆ, ಆಗಲೇ ತುಂಬಿಬಿಟ್ಟರು ಬಿಜೆಪಿಯವರು, ಜನತಾದಳದವರು ಎಂದು ಹೇಳುತ್ತಾರೆ.

ಶ್ರೀ ಕೆ.ಆರ್.ರಮೇಶ್ ಕುಮಾರ್: ಅದನ್ನು ಹೇಳಿದವರಿಗೆ ಪಾಪ ಲೆಕ್ಕ ಗೊತ್ತಿಲ್ಲ. ಅಂದಾಜು ಎಷ್ಟು ಎಂದು ಹೇಳಿ ಸರ್.

ಶ್ರೀ ಹೆಚ್.ಡಿ. ಕುಮಾರಸ್ವಾಮಿ: ಅವರಿಗೆ ಅನುಭವವಿದೆ. ನಿಮಗೆ ಅನುಭವವಿಲ್ಲ. ನಿಮಗೆ ಅದರ ಅನುಭವವಿಲ್ಲ. ಪಾಪ, ದಿನೇಶ್ ಗುಂಡೂರಾವ್‌ರವರಿಗೆ ಹೇಳುವುದಿಲ್ಲ. ಡಿ.ಕೆ ಶಿವಕುಮಾರ್‌ರವರೇ ಭಾಷಣ ಮಾಡಿದ್ದಾರೆ. ಏಕೆಂದರೆ ಅವರಿಗೆ ಆ ವಿಷಯದಲ್ಲಿ ನನಗಿಂತ ಹೆಚ್ಚಿಗೆ ಅನುಭವವಿದೆ.

ಶ್ರೀ ಬಿ,ಶಿವರಾಮು: ಒಟ್ಟಿನಲ್ಲಿ ಈಗ ಯಾರಿಗೆ ಅನುಭವ ಜಾಸ್ತಿ ಇದೆಯೆಂದು ಗೊತ್ತಾಗಬೇಕಲ್ಲ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ: ನಾನು 18 ತಿಂಗಳಿನಂದ ಈಗ ಇಲ್ಲಿ probationary period ನಲ್ಲಿದ್ದೇನೆ.

ಶ್ರೀ ಡಿ.ಕೆ.ಶಿವಕುಮಾರ್: ಈ ಕಡೆ ಕುಳಿತ ಅನುಭವಕ್ಕೂ ಅಲ್ಲಿ ಕುಳಿತುಕೊಳ್ಳುವ ಅನುಭವಕ್ಕೂ ಬಹಳ ವ್ಯತ್ಯಾಸವಿದೆ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ: ನಮಗೆ ಇಲ್ಲೂ ಕುಳಿತು ಅನುಭವವಿದೆ, ಆ ಕಡೆಯೂ ಬರಲಿಕ್ಕೆ ತಯಾರಾಗಿದ್ದೇವೆ.

ಶ್ರೀ ಡಿ.ಕೆ.ಶಿವಕುಮಾರ್: ಈ ಕಡೆಗೆ ಬಂದ ಮೇಲೆ ಅದರ ಕತೆ ಗೊತ್ತಾಗುತ್ತದೆ.

ಶ್ರೀ ಕೆ.ಜಯಪ್ರಕಾಶ್ ಹೆಗ್ಡೆ: ಮಾನ್ಯ ಮುಖ್ಯಮಂತ್ರಿಗಳು ಮಾತನಾಡುತ್ತಾ ನಾನು probationary period ನಲ್ಲಿದ್ದೇನೆಂದು ಹೇಳಿದರು. probationary period declare ಆಗುವುದು ಯಾವಾಗ?

ಶ್ರೀ ಕೆ.ಆರ್.ರಮೇಶ್ ಕುಮಾರ್: ನಾನು ಈಗ ಹೇಳಿದ್ದೇನೆಂದರೆ, ಹುಡುಗ, ಅವರಿಗೆ 20000 ಕೋಟಿಯೋ ಅಥವಾ ಎಷ್ಟು ಎಂದು ಅಂದಾಜು ಇಲ್ಲ, ಅನುಭವವಿಲ್ಲದೆ estimate ತಪ್ಪಾಗಿರಬಹುದು, real figure ಎಷ್ಟಿರಬಹುದೆಂದು ಸ್ವಲ್ಪ ಹೇಳಿ ಎಂದು ಕೇಳಿದ್ದೇನೆ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ: ಏಕೆಂದರೆ, ನಿಮಗೂ ಅನುಭವವಿಲ್ಲ. ಅದರ ಬಗ್ಗೆ ಈಗ ನಾನು ಯೋಚನೆ ಮಾಡಬೇಕಾಗಿದೆ. ಇದೇನು 20000 ಕೋಟಿ ಎಂದು ಹೇಳುತ್ತಿದ್ದಾರಲ್ಲ,...

ಅಧ್ಯಕ್ಷರು: ಅವರಿಗೆ ಅನುಭವವಿರುವವರು ಜೊತೆಯಲ್ಲಿಯೇ ಇದ್ದಾರಲ್ಲಾ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ: ಪಕ್ಕದ್ದಲ್ಲಿಯೇ ಇದ್ದಾರೆ. ನನಗಿಂತ ಹೆಚ್ಚಾಗಿ ಪಕ್ಕದಲ್ಲಿ ಮಾನ್ಯ ರಮೇಶ್‌ಕುಮಾರ್‌ರವರು ಅವರನ್ನು ಕೇಳಿಬಿಟ್ಟರೆ ಅನುಭವವನ್ನು ಹೇಳಿಬಿಡುತ್ತಾರೆ. ಹಿಂದೆ, ಮುಂದೆ ಎಡ ಬಲ ಎಲ್ಲವನ್ನೂ ನೋಡಿದರೆ ಒಳ್ಳೆಯದೇ ಸರ್.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ನೀವು ಈ ಕಡೆ ಎಂದು ನಮ್ಮ ಕಡೆಗೆ ಕೈತೋರಿಸುತ್ತಿದ್ದೀರಲ್ಲ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ: ಇಲ್ಲ. ನಿಮ್ಮ ಕಡೆಗೆ ಕೈ ತೋರಿಸುತ್ತಿಲ್ಲ. ನಿಮಗೆ ಅದರ ಅನುಭವವೇ ಇಲ್ಲವಲ್ಲ. ವಾಟಾಳ್ ನಾಗರಾಜ್‌ರವರಿಗೆ ಮುಂದಕ್ಕೆ ಅನುಭವ ಸಿಗುವುದಿಲ್ಲವೆಂದು ತೋರುತ್ತದೆ. ಸ್ವೇಚ್ಛಾಚಾರವಾಗಿ ತರಾತುರಿಯಲ್ಲಿ ರೈತರ ಭೂಮಿಯನ್ನು ಭೂಸ್ವಾಧೀನ ಮಾಡಿ ರೈತರನ್ನು ಒಕ್ಕಲೆಬ್ಬಿಸುವುದಕ್ಕೆ ಹೊರಟ್ಟಿದ್ದಾರೆಂದು ಬಹಳ ದೊಡ್ಡ ಮಟ್ಟದಲ್ಲಿ ಚರ್ಚೆಯಾಗುತ್ತಿದೆ. ದೇವೇಗೌಡರು ರೈತರ ಬಗ್ಗೆ ಅವರು ಸುದೀರ್ಘ ರಾಜಕಾರಣದಲ್ಲಿ ಹೋರಾಟ ಮಾಡಿದ್ದಾರೆಂದು ಮಾನ್ಯ ಮಾಧುಸ್ವಾಮಿಯವರು ನಿನ್ನೆ ಕೊಟ್ಟಂಥ ಹೇಳಿಕೆ ಏನಿದೆ, ಅದನ್ನು ನಾನು ಸ್ವಾಗತ ಮಾಡುತ್ತೇನೆ. ದೇವೇಗೌಡರೂ ಇನ್ನೂ ರೈತರ ಪರವಾಗಿಯೇ ಇದ್ದಾರೆ. ರೈತರ ಬಗ್ಗೆ ರಕ್ತ ಕೊಟ್ಟೇನೂ ಎಂದು ಹೇಳಿದಂಥವರು ಈಗ ರಕ್ತ ಬಸಿದು ಹೋಗಿದೆಯೇ ಎಂದು ಮಾನ್ಯ ಸಿದ್ದರಾಮಣ್ಣನವರು ಹೇಳಿದರು.

ಶ್ರೀ ಸಿದ್ದರಾಮಯ್ಯ: ರಕ್ತ ಇಲ್ಲವೇ ಎಂದು ಹೇಳಿದ್ದೇನೆ. ಬಸಿದು ಹೋಗಿದೆಯೇ ಎಂದು ಹೇಳಲಿಲ್ಲ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ: ಅದೇ ಹೇಳಿದ್ದೀರಿ. ನನ್ನಂಥ ರಾಜಕಾರಣಿಗಳು ದೇವೇಗೌಡರ ರಕ್ತವನ್ನು 50 ವರ್ಷಗಳಲ್ಲಿ ಬಸಿಯುವುದಕ್ಕೆ ಬಹಳ ಪ್ರಯತ್ನಪಟ್ಟಿದ್ದಾರೆ. ಅದರಿಂದ ದೇವೇಗೌಡರಿಗೆ ರಕ್ತ ಸ್ವಲ್ಪ ಕಡಿಮೆ ಆಗಿರಬಹುದು. ಕಾಂಗ್ರೆಸ್ ಪಕ್ಷದ ನಾಯಕರುಗಳು ಇವತ್ತೇನು ರೈತರ ರಕ್ಷಣೆ ಬಗ್ಗೆ ಬಹಳ ದೊಡ್ಡ ಮಟ್ಟದಲ್ಲಿ ಹೊರಟಿದ್ದಾರೆ, ನಿಜಕ್ಕೂ ನಾನು ಅಭಿನಂದನೆಯನ್ನು ಸಲ್ಲಿಸುತ್ತೇನೆ. UPA ಸರ್ಕಾರ ಇವತ್ತೇನು ಕೇಂದ್ರದಲ್ಲಿ ಅಧಿಕಾರ ನಡೆಸುತ್ತಿದ್ದಾರೆ, ಅವರು ಎಲ್ಲಾ State ಗಳಿಗೆ warning ಕೊಡುತ್ತಾರೆ. "60 days, clear SEZs or drop the idea – States warned." ಕೇಂದ್ರ ಸರ್ಕಾರ ಎಲ್ಲರಿಗೂ ಏನು ಈ ವಿಷಯದಲ್ಲಿ warning ಕೊಟ್ಟಿದೆ. ಅದರ ಬಗ್ಗೆ

ಹೇಳುತ್ತಿದ್ದೇನೆ. ಇವತ್ತು ನನ್ನ ಸರ್ಕಾರ ರೈತರನ್ನು ಒಕ್ಕಲೆಬ್ಬಿಸುವುದಕ್ಕೆ ಹೊರಟಿದೆ ಎಂದು ಹೇಳುತ್ತಾರೆ. ನಿಜ. ಯಾವ ರೀತಿ ಒಕ್ಕಲೆಬ್ಬಿಸುವುದಕ್ಕೆ ಹೊರಟ್ಟಿದ್ದೇವೆ? ನಾನೇನೂ ಲಾ ಓದಿಲ್ಲ. ನಾನೊಬ್ಬ ordikary student. ನಾನು ಬುದ್ದಿವಂತನಲ್ಲ. ಹಳ್ಳಿಯಿಂದ ಓದಿಕೊಂಡು ಬಂದಿರುವವನು ನಾನು. ಏಕೆಂದರೆ, ನಾವು ಮಣ್ಣಿನ ಮಕ್ಕಳು ಎಂದು ಹೆಸರು ಹೇಳಿಕೊಂಡು, ರೈತರ ಹೆಸರು ಹೇಳಿಕೊಂಡು ಇಲ್ಲಿ ಅಧಿಕಾರಕ್ಕೆ ಬಂದು ಕುಳಿತ್ತಿದ್ದೇವೆ, ರೈತರನ್ನು ಮರೆಯುವ ಕೆಲಸಕ್ಕೆ ಹೋಗಿಲ್ಲ. ಅದನ್ನು ಸದನದ ಸದಸ್ಯರ ಗಮನಕ್ಕೆ ತರಲು ಬಯಸುತ್ತಿದ್ದೇನೆ. ಸ್ವೇಚ್ಛಾಚಾರವಾಗಿ SEZ ನ ವಿಚಾರವಾಗಿ ಇವತ್ತು ತೀರ್ಮಾನ ಮಾಡುವುದಕ್ಕೆ ಹೋಗಿಲ್ಲ, ಹೋಗುವುದೂ ಇಲ್ಲ. ಈ ಸ್ಪಷ್ಟೀಕರಣವನ್ನು ಕೊಡಲಿಕ್ಕೆ ನಾನು ಬಯಸುತ್ತೇನೆ. ದಿ:03.03.2007ನೇ ಇಸವಿಯಲ್ಲಿ ಕಳೆದ ಮಾರ್ಚ್ ತಿಂಗಳಿನಲ್ಲಿ ನಾವೊಂದು ನಿರ್ಧಾರ ಮಾಡಿದ್ದೇವೆ, ಸುತ್ತೋಲೆ ಹೊರಡಿಸಿದ್ದೇವೆ. KIADB ವತಿಯಿಂದ ಕೈಗಾರಿಕಾ ಉದ್ದೇಶಗಳಿಗೆ ಜಮೀನುಗಳನ್ನು ಭೂಸ್ವಾಧೀನಪಡಿಸಲು ಅನುಸರಿಸಬೇಕಾದ ವಿಧಾನಗಳ ಬಗ್ಗೆ, ನಾನು ಎಲ್ಲಾ ಹೇಳುವುದಿಲ್ಲ, ಇಲ್ಲಿ ಕೆಲವು ವಿಷಯಗಳನ್ನು ತರುತ್ತೇನೆ. "ಪ್ರಾಥಮಿಕ ಅಧಿಸೂಚನೆಯನ್ನು ತಯಾರಿಸುವ ಮೊದಲು ಭೂ ಮಾಲೀಕರಿಂದ ಸರ್ವೆ ನಂಬರ್‌ವಾರು ಅಳತೆ ಮಾಡಿಸಿ, ಜಂಟಿ ಅಳತೆ ಕಾರ್ಯವನ್ನು ನಿರ್ವಹಿಸಿದ ನಂತರವೇ ಪ್ರಾಥಮಿಕ ಅಧಿಸೂಚನೆಯನ್ನು ಹೊರಡಿಸುವುದು. ದೇವಸ್ಥಾನ, ಸ್ಮಶಾನ, ಶಾಲೆ ಮತ್ತು ಆಟದ ಮೈದಾನ, ವಾಸದ ಮನೆ ಇರುವ ಪ್ರದೇಶಗಳನ್ನು ಪ್ರಾಥಮಿಕ ಅಧಿಸೂಚನೆಯಲ್ಲಿ ಸೇರಿಸಬಾರದು." ದೇವಸ್ಥಾನ, ಸ್ಮಶಾನ, ಶಾಲೆ, ಇದು ಹಿಂದೆ ಕೊಟ್ಟಿದ್ದೀರಿ. ಯಾವ ರೀತಿ ಜಮೀನುಗಳನ್ನು ಕೊಟ್ಟಿದ್ದೀರಿ ಎಂದು ಸ್ವಲ್ಪ ನೆನಪಿಸಿಕೊಂಡರೆ ಸಾಕು. "ಹಾಲಿ ನಡೆಯುತ್ತಿರುವ ವಿವಿಧ ಕೈಗಾರಿಕೆಗಳು, ರೋಗಗ್ರಸ್ತ ಕೈಗಾರಿಕಾ ಪ್ರದೇಶಗಳನ್ನು ಹೊರತುಪಡಿಸುವುದು. ಆಯಕಟ್ಟಿಗೆ ಧಕ್ಕೆ ಉಂಟಾಗದಂತೆ ಸ್ಥಳೀಯ ಯೋಜನಾ ಪ್ರಾಧಿಕಾರಗಳು, ಸಕ್ಷಮ ಪ್ರಾಧಿಕಾರಗಳು ಭೂ ಬದಲಾವಣೆಗೆ ಅನುಮತಿ ನೀಡಿರುವ ಜಮೀನುಗಳನ್ನು ಹೊರತುಪಡಿಸಬೇಕು. ಕೈಗಾರಿಕೆಗಳಿಗೆ ಪೂರಕವಾಗಿರುವ ಆಸ್ಪತ್ರೆ, ಪೆಟ್ರೋಲ್ ಬಂಕ್, ಇತರೆ ಮೂಲಭೂತ ಸೌಲಭ್ಯಗಳ ಪ್ರದೇಶಗಳನ್ನು ಹೊರತುಪಡಿಸುವುದು. ಆಯಕಟ್ಟಿಗೆ ಧಕ್ಕೆ ಉಂಟಾಗದಂತೆ ತೋಟಗಳು, ಫಲವತ್ತಾದ ಜಮೀನು ಹಾಗೂ ವರ್ಷಕ್ಕೆ 2 ಬೆಳೆ ಬೆಳೆಯುವ ಜಮೀನುಗಳು, ತರೀ ಜಮೀನುಗಳನ್ನು ಹೊರತುಪಡಿಸುವುದು. ಗ್ರಾಮ ಠಾಣಾ ಸರಹದ್ದಿನಂದ ಗ್ರಾಮದ ಸುತ್ತಲೂ ವಿಸ್ತರಣೆಗೆ 100 ಮೀಟರ್ ವ್ಯಾಪ್ತಿಯ ಜಮೀನುಗಳನ್ನು ಹೊರತುಪಡಿಸುವುದು." ನಮ್ಮ ಸರ್ಕಾರ ಮಾರ್ಚ್

ತಿಂಗಳಲ್ಲಿ ಹೊರಡಿಸಿರುವ ಸುತ್ತೋಲೆ ಇದು. ರಾಮನಗರದ ಬಗ್ಗೆ ಎಲ್ಲಾ ಚರ್ಚೆ ಮಾಡಿದ್ದಾರೆ. ಶಿವಕುಮಾರ್‌ರವರು, ಅವರ ಧೈರ್ಯವನ್ನು ಮೆಚ್ಚಿಕೊಳ್ಳಬೇಕೆಂದು ನನ್ನ ಧೈರ್ಯಕ್ಕೂ ಅಭಿನಂದನೆ ಸಲ್ಲಿಸಿದ್ದಾರೆ. ನಿಮ್ಮಷ್ಟೂ ಧೈರ್ಯ ನನಗಿಲ್ಲ. ನಿಮ್ಮ ತರಹ ಧೈರ್ಯ ಮಾಡಿ ನಾನೇನೂ ಮಾಡಲಿಕ್ಕೆ ಹೋಗಿಲ್ಲ.

ಶ್ರೀ ಡಿ.ಕೆ.ಶಿವಕುಮಾರ್: ನಿಮ್ಮಷ್ಟು ಧೈರ್ಯ ನನಗಿಲ್ಲ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ: ಏಕೆಂದರೆ, ಹೇಳಿದ್ದೀರಿ. ಉಲ್ಲಾಳದ ಚುನಾವಣೆಯಲ್ಲಿ deposit ಹೊರಟು ಹೋಯಿತೆಂದು ನಮ್ಮ ನಾಯಕರು ಪದೇ ಪದೇ ಹೇಳುತ್ತಿರುತ್ತಾರೆ. ರಾಮನಗರದಲ್ಲಿ ಮುಂದಿನ ಚುನಾವಣೆಯಲ್ಲಿ deposit ತೆಗೆಯುತ್ತೇವೆಂದು ನೀವೇ ಹೇಳಿದ್ದೀರಿ. ನಿಮಗೆ ಸ್ವಾಗತ. ಏಕೆಂದರೆ, ನಮಗೆ, ನಮ್ಮ ಕುಟುಂಬಕ್ಕೆ ಸೋತೂ ಅನುಭವವಿದೆ. ಗೆದ್ದೂ ಅನುಭವವಿದೆ. ಹೋರಾಟ ಮಾಡುವುದು ಜನಗಳ ಮುಂದೆಯೇ, ಜನರು ಆಶೀರ್ವಾದ ಮಾಡಿದರೆ ಕೆಲಸ ಮಾಡುವುದೂ ಅವರ ಜೊತೆ ಸೇರಿಕೊಂಡೇ.

ಶ್ರೀ ಡಿ.ಕೆ.ಶಿವಕುಮಾರ್: ರಾಜಕಾರಣಕ್ಕೆ ಬಂದ ಮೇಲೆ ಎಲ್ಲಿ ಸೋತಿದ್ದಾರೆ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ: ಬೇರೆ ಬೇರೆ ತರಹ ಇರುತ್ತದೆ. ನಮಗೆ ಯಾವುದೇ ಪಕ್ಷದ ಹೆಸರಿನಲ್ಲಿ ಹೋರಾಟ ಮಾಡಬೇಕಾಗಿಲ್ಲ. ನಮಗಿಲ್ಲಿ ಎಲ್ಲಾ ರೀತಿ ಹೋರಾಟ ಮಾಡತಕ್ಕಂಥ ಸಂದರ್ಭದಲ್ಲಿ ನಮ್ಮ ಹೋರಾಟವೇ ಬೇರೆ, ನಮ್ಮ ಹೋರಾಟವೇ ಬೇರೆ.

ಶ್ರೀ ಡಿ.ಕೆ.ಶಿವಕುಮಾರ್:ನಾವೂ ಆ ಕೆಲಸ ಮಾಡಿದ್ದೇವಲ್ಲ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ: ನಿಮ್ಮದು ಇತಿಹಾಸದ ಪಕ್ಷ. ನಿಮಗೆ ಇತಿಹಾಸದ ಪಕ್ಷ ಬೆಂಗಾವಲಿದೆ. ನಮಗೆ ಯಾವ ಪಕ್ಷದ ಬೆಂಗಾವಲೂ ಇಲ್ಲ.

ಶ್ರೀ ಡಿ.ಕೆ.ಶಿವಕುಮಾರ್: ನಾವು independent ಆಗಿ ನಿಂತುಕೊಂಡು....

ಶ್ರೀ ಹೆಚ್.ಡಿ. ಕುಮಾರಸ್ವಾಮಿ: ನಮಗಿರುವುದು ಯಾವ ಬೆಂಗಾವಲು? ಆ ಜನಗಳೇ ನಮಗೆ ಬೆಂಗಾವಲು.

ಶ್ರೀ ಡಿ.ಕೆ.ಶಿವಕುಮಾರ್: ನಾನು independent ಆಗಿ. . .

ಶ್ರೀ ಹೆಚ್.ಡಿ. ಕುಮಾರಸ್ವಾಮಿ: ಈ ರಾಷ್ಟ್ರೀಯ ಪಕ್ಷ, ಇತಿಹಾಸದ ಪಕ್ಷದ ಹೆಸರಿನಲ್ಲಿ ಹೋರಾಟ ಮಾಡಲಿಕ್ಕೆ ನಮಗೆ ಸಾಧ್ಯವಿಲ್ಲ.

ಶ್ರೀ ಡಿ.ಕೆ.ಶಿವಕುಮಾರ್: ಆ ಪಕ್ಷದಲ್ಲೂ ಗೆದ್ದಿದ್ದೇನೆ, ನಾನೂ independent ಆಗಿಯೂ ಗೆದ್ದಿದ್ದೇನೆ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ: ಹೇಳುತ್ತಿದ್ದೀರಿ. ಆರಗ ಜ್ಞಾನೇಂದ್ರರವರು ಹೇಳುತ್ತಿದ್ದಾಗ ನಾನು ಕೇಳಿಸಿಕೊಳ್ಳುತ್ತಿದ್ದೆ. ಇನ್ನು ಎರಡು ತಿಂಗಳು ಹೋದರೆ ಎಷ್ಟು ಜನ ಇರುತ್ತಾರೆ? ಮಂಡ್ಯದವರೋ, ಹಾಸನದವರೋ? ಒಂದೆರೆಡು, ಮೂರು ಜನ ಇರುತ್ತಾರೆಂದು ಹೇಳಲಾಗುತ್ತಿತ್ತು. ನಾನೂ ರಾಜಕೀಯದಲ್ಲಿ ಇರುತ್ತೇನೆ. ಬಿಟ್ಟು ಹೋಗುವುದಿಲ್ಲ. ರಾಮನಗರದ satellite town ಮಾಡುವ ವಿಷಯದಲ್ಲಿ ತರಾತುರಿಯಲ್ಲಿ ನಾವೇನೋ ಮಾಡಲಿಕ್ಕೆ ಹೊರಟ್ಟಿದ್ದೇವೆಂದು ಹೇಳಿದರು. ಒಂದು ವಿಷಯವನ್ನು ಇಲ್ಲಿ ಪ್ರಸ್ತಾಪ ಮಾಡಬೇಕಾಗುತ್ತದೆ. ಯಾವಾಗ satellite town ಕಲ್ಪನೆ ಪ್ರಾರಂಭವಾಗಿತ್ತು. ಯಾರು ಈ ಕಲ್ಪನೆಯನ್ನು ಪ್ರಾರಂಭ ಮಾಡಿದ್ದು? ಯಾರು ಈ ಅಧಿಕಾರಿಗಳ ಸಭೆಯಲ್ಲಿ ಚರ್ಚೆ ಮಾಡಿದ್ದು? ಆ ಸಭೆಯಲ್ಲಿ ಚರ್ಚೆ ಮಾಡಿದ ನಂತರ ಯಾರು ಅವರಿಗೆ ಹೊಗಳಿಕೆ ಮಾತನಾಡಿರತಕ್ಕಂಥದ್ದು? ಎಂಬ ಬಗ್ಗೆ, ಹೇಳಬೇಕಾಗುತ್ತದೆ. satellite town concept ಬಗ್ಗೆ ಎರಡು ವಿಷಯ ಹೇಳಬೇಕಾಗುತ್ತದೆ. ಶ್ರೀಯುತ ಎಸ್.ಎಂ.ಕೃಷ್ಣರವರು ಮುಖ್ಯಮಂತ್ರಿಗಳಾಗಿದ್ದಾಗ ಈ ಬೆಳವಣಿಗೆಯನ್ನು ನಿಯಂತ್ರಣ ಮಾಡಿ, ಹಾಗೆ ನಿಯಂತ್ರಣ ಮಾಡಿದ ಪಟ್ಟಣಗಳನ್ನು ಯೋಜಿಸಬೇಕೆಂದು ಕೆಲವು ಅಧಿಕಾರಿಗಳು ಸಲಹೆ ನೀಡಿದಾಗ ಕೃಷ್ಣರವರು ಒಂದು ಮಾತು ಹೇಳುತ್ತಾರೆ," I do not want officials who talk of freezing the growth because it is impossible to freeze the natural growth as it will be against the nature. Hence, I have directed my officials to take into account natural growth and plan accordingly for the satellite townships as well as for the orderly growth of Bangalore city," ಎಲ್ಲಾ ಸಚಿವರು, ಆಡಳಿತ ಪಕ್ಷದ ಸದಸ್ಯರು, ಮಾಧ್ಯಮಗಳ ಮುಖಾಂತರ A dynamic thinking visionary Chief Minister of 21st century" ಎಂದು ಹಾಡಿ ಹೊಗಳಿದ್ದನ್ನು ಸಹ ನೆನಪಿಸಿಕೊಳ್ಳಬೇಕಾಗುತ್ತದೆ. satellite town ನ ಕಲ್ಪನೆ ಯಾವಾಗಿನಿಂದ ಪ್ರಾರಂಭವಾಗಿತ್ತೆಂದು ಹೇಳುತ್ತೇನೆ. ನಾನು ತರಾತುರಿಯಲ್ಲಿ ಈ satellite town ಅನ್ನು ತರಲಿಕ್ಕೆ ಹೊರಟಿದ್ದಲ್ಲ. ಇವತ್ತು ಮಾತನಾಡುವ ಸಂದರ್ಭದಲ್ಲಿ ಅಧಿಕಾರಿಗಳು ವಿರೋಧ ಮಾಡಿದರು, ಇವತ್ತು ಈ ಸರ್ಕಾರ SEZ ವಿಷಯದಲ್ಲಿ ಬಹಳ ತರಾತುರಿಯಲ್ಲಿ decision ತೆಗೆದುಕೊಳ್ಳುವುದಕ್ಕೆ ಹೊರಟಿದೆ, ಇವತ್ತೂ ಎಲ್ಲಾ ಇಲಾಖೆಗಳೂ ವಿರೋಧ ಮಾಡಿದವು except KEB ಎಂದು ಹೇಳಿದರು. ನಾನು ಒಂದು example ಕೊಡಬೇಕಾಗುತ್ತದೆ, ಹಿಂದೆ ನಡೆದಿರುವ ಘಟನೆಗೆ, ನಾನು ಇದಕ್ಕೆ ದೋಷ

ಕೊಡಲಿಕ್ಕೆ ಹೇಳುವುದಿಲ್ಲ. ಈಗ ನನ್ನ ಮೇಲೇನು ಆಪಾದನೆ ಇದೆ, ಅದಕ್ಕೆ ಸಂಬಂಧಪಟ್ಟ ಹಾಗೆ ಹಿಂದೆ ತೆಗೆದುಕೊಂಡು ನಿರ್ಣಯಗಳನ್ನು ಸ್ವಲ್ಪ ಇಟ್ಟು ಆಮೇಲೆ ನಾವೇನು ಮಾಡುತ್ತಿದ್ದೇವೆನ್ನುವುದನ್ನೂ ಇಡುತ್ತೇನೆ. Vikas Telecom Limited ಎನ್ನುವ ಒಂದು ಕಂಪನಿಯವರು infrastructure project ಗೆ ಎಂದು ಅರ್ಜಿ ಕೊಡುತ್ತಾರೆ. ಅವರು ಅಂದಿನ ಮುಖ್ಯಮಂತ್ರಿಗಳಿಗೆ ಒಂದು ಲೆಟರ್ ಬರೆಯುತ್ತಾರೆ, "Under the dynamic leadership of Hon'ble Chief Minister S.M. Krishna the State Karnataka has become vibrant and transparent, especially when it comes on the encouragement to set up an industry here. We also learned that the procedures are beings streamlined and simplified. We are equally thrilled by the credential Hon'ble Chief Minister as the IT saving Chief Minister of our country. With this role objective of promoting the IT Industry, Vikas Telecom Limited came to Karnataka, especially Bangalore city which have also earned the reputation as silicon Vally of our country. We are fully aware that the captains and stalwarts of IT Industry in the country have their base in Bangalore." ಇದಕ್ಕೆ ಇವತ್ತು ನಾನು ನಮ್ಮ ರೈತರುಗಳು ದೊಡ್ಡ ಹೋರಾಟ ಮಾಡುತ್ತಿದ್ದಾರೆ, ಈ ಸರ್ಕಾರದ ವಿರುದ್ಧ ಪ್ರತಿಭಟನೆ ನಡೆಸಿದರೂ ಈ ಸರ್ಕಾರ ಸ್ವೇಚ್ಛಾಚಾರವಾಗಿ ಜಮೀನನ್ನು ಕೊಡಲಿಕ್ಕೆ ಹೊರಟಿದೆ ಇದು ನಮ್ಮ ಮೇಲಿರುವ ಆಪಾದನೆ. ರೈತರ ಹೆಸರು ಹೇಳಿಕೊಂಡು ಬಂದು ಇವತ್ತು ರೈತರನ್ನು ಮುಗಿಸಲಿಕ್ಕೆ ಹೊರಟಿದ್ದಾರೆಂದು ಹೇಳಿದರು. ಈ ಒಂದು ವಿಷಯಕ್ಕೆ ಸಂಬಂಧಪಟ್ಟ ಹಾಗೆ ಅವತ್ತೇನು ಬಂತು ಎಂದರೆ, "CM's IT Corridor eats into farm land. Villagers threatened by IT park plan." ಅದಕ್ಕೆ ಅಂದಿನ ವಿರೋಧ ಪಕ್ಷದ ನಾಯಕರಾಗಿದ್ದ ಜಗದೀಶ್ ಶೆಟ್ಟರ್‌ರವರು ಒಂದು ಲೆಟರ್ ಬರೆಯುತ್ತಾರೆ. ನಾನು ಏನೇನು ಪ್ರತಿಭಟನೆಗಳಾಯಿತು ಎಂದು ಎಲ್ಲಾ ಹೇಳಲಿಕ್ಕೆ ಹೋಗುವುದಿಲ್ಲ. "ಈ ಎಲ್ಲ ಅಂಶಗಳನ್ನೂ ಗಮನಿಸಿದಾಗ, ಒಟ್ಟಾರೆ ಈ ವ್ಯವಹಾರದಲ್ಲಿ ವ್ಯಾಪಕ ಭ್ರಷ್ಟಾಚಾರ ನಡೆದಿರುವುದು ಮೇಲ್ನೋಟಕ್ಕೆ ಸಾಬೀತಾಗಿರುತ್ತದೆ. ಬೆಂಗಳೂರು ಗ್ರಾಮದ ಹಲವಾರು ರೈತರಿಗೆ ಇಲ್ಲ ಸಲ್ಲದ ಪ್ರಲೋಭನೆಗಳನ್ನು ಒಡ್ಡಿ ಬೆದರಿಸಿ ಅತಿ ಕಡಿಮೆ ಬೆಲೆಗೆ ಖಾಸಗಿ land developers ಕಡಿಮೆ ಬೆಲೆಗೆ ಭೂಸ್ವಾಧೀನಕ್ಕಾಗಿ ಒಪ್ಪಿಗೆ ಪತ್ರವನ್ನು ಪಡೆದಿರುತ್ತಾರೆ. ಆದ್ದರಿಂದ ನಿಮ್ಮ ಅಧೀನದಲ್ಲಿರುವ ತನಿಖಾದಳದಿಂದ ಕೂಲಂಕುಷ ತನಿಖೆ ನಡೆಸಿ ತಪ್ಪಿತಸ್ಥ ಅಧಿಕಾರಿಗಳ ವಿರುದ್ಧ ಸೂಕ್ತ ಕ್ರಮತೆಗೆದುಕೊಳ್ಳುವಂತೆ ಕೋರುತ್ತೇನೆಂದು ಅವೊತ್ತಿನ ವಿರೋಧ ಪಕ್ಷದ ನಾಯಕರು ಪತ್ರ ಬರೆಯುತ್ತಾರೆ.

ಆದಾದ ನಂತರ ಕೊಟ್ಟಿರತಕ್ಕಂಥ ಲ್ಯಾಂಡ್ ಎಷ್ಟು ಎನ್ನುವುದು ಆ ದಿವಸ ಕೈಗಾರಿಕೆ ಸಚಿವರಾಗಿದ್ದಂಥ ಮಾನ್ಯ ಆರ್.ವಿ. ದೇಶಪಾಂಡೆರವರಿಗೆ ಗೊತ್ತಿರಬೇಕು ಆದರೆ ಅವರು ಹೇಳುವುದಿಲ್ಲ. ಎಲ್ಲಾ ಅಧಿಕಾರಿಗಳು ವಿರೋಧಿಸಿದರೂ ಈ ಸರ್ಕಾರ SEZ clear ಮಾಡಿದ್ದಾರೆಂದು ಎಲ್ಲಾ ಹೇಳಿದ್ದೀರಿ. KIADB ರವರು ಏನು ಟಿಪ್ಪಣಿ ಬರೆಯುತ್ತಾರೆ ಅವರ ಮೇಲೆ ಅಂದಿನ ಕೈಗಾರಿಕೆ ಸಚಿವರಾದ ತಾವೇ ಮಾಡಿದಿರಿ ಸಾರ್? Credentail Housing Infrastructure Development Limited, ಈ ಒಂದು ಸಂಸ್ಥೆಗೆ 50 ಎಕರೆ ಜಮೀನು ಕೊಡುವ ವಿಷಯದಲ್ಲಿ ಎಲ್ಲಾ ಅಧಿಕಾರಿಗಳು ವಿರೋಧ ಮಾಡಿದಾಗಲೂ ನೀವು ಅಂತಿಮವಾಗಿ ಏನು ಬರೆಯುತ್ತೀರಿ? "Investors confidence is very important. Hence, in the circumstances of the case, I here by order for issue of notification of under Section..." ಇದೆಲ್ಲಾ ಹೇಳಿದಿರಿ. Order ಮಾಡುತ್ತೀರಿ. ಅವೊತ್ತಿನ KIADB ಅಧಿಕಾರಿಗಳು ವಿರೋಧಿಸಿದರು ನನ್ನ ಸರ್ಕಾರದಲ್ಲಿ ಇವತ್ತೇನು Fact Finding Committee ಏನು ನಡೆಯುತ್ತಿತ್ತು. ನಮ್ಮ ಕೈಗಾರಿಕೆಯ ಸಚಿವರಿಗೆ ಮತ್ತು ಶಿವಕುಮಾರ್‌ರವರಿಗೆ ರಾಜೀನಾಮೆ ಸವಾಲುಗಳು ನಡೆಯುತ್ತಿತ್ತು. ನಾನು ಇಲ್ಲಿ ಕುಳಿತು ಕೇಳುತ್ತಿದ್ದೆ. 1,19,000 ಎಕರೆ ಜಮೀನನ್ನು ಈಗಾಗಲೇ ನಾವು ನೋಟಿಫೈ ಮಾಡಿದ್ದೇವೆನ್ನುವುದು ಇವರು ನಮ್ಮ ಮೇಲೆ ಮಾಡಿರುವ ಆಪಾದನೆ. ಏಕೆಂದರೆ, ಮಾನ್ಯ ಸಿದ್ದರಾಮಣ್ಣವರು, ಕೆ.ಸಿ.ರೆಡ್ಡಿಯವರ ಕಾಲದಿಂದ ಧರ್ಮಸಿಂಗ್‌ರವರ ಕಾಲದವರೆಗೆ ಕೇವಲ 16.000 ಎಕರೆಗಳನ್ನು ಮಾತ್ರ ಕೈಗಾರಿಕೆಗಳಿಗೆ ಸ್ವಾಧೀನಪಡಿಸಿಕೊಂಡಿರುವುದು ಎಂದು ಹೇಳಿದರು. ನಾನು ಅದನ್ನು ನೋಡಿದೆ. ಎಸ್.ಎಂ.ಕೃಷ್ಣ ರವರ ಗೌರ್‍ನಮೆಂಟ್ ಇದ್ದಾಗ HLCCನಲ್ಲಿ 18,000 ಎಕರೆ ಜಮೀನಿಗೆ ಅಪ್ರೂವಲ್ ಕೊಟ್ಟಿರುವುದು ಇದೆ. ಧರ್ಮಸಿಂಗ್‌ರವರು ಮುಖ್ಯಮಂತ್ರಿಗಳಾಗಿದ್ದಾಗ, ಸಿಂಧ್ಯಾರವರು ಕೈಗಾರಿಕೆ ಸಚಿವರಾಗಿದ್ದಾಗ, 18,600 ಎಕರೆಗೆ ಅಪ್ರೂವಲ್ ಕೊಟ್ಟಿರುವುದು. ಇದೆ. ನಮ್ಮ ಸರ್ಕಾರ ಬಂದು 18 ತಿಂಗಳಲ್ಲಿ Proposal ಬಂದಿರುವುದಕ್ಕೆ HLCC ನಲ್ಲಿ in principle approval ಕೊಟ್ಟಿರುವುದು 18,904 ಎಕರೆಗೆ. ಅದಕ್ಕೆ ನಾನೇ ಅಧ್ಯಕ್ಷ. ಸಿದ್ದರಾಮಣ್ಣನವರು, ನೀವು ಅದಕ್ಕೆ ಮೆಂಬರ್ ಅಲ್ಲವೇನ್ರಿ, ಕುಮಾರ ಸ್ವಾಮಿಯವರು ಅಧ್ಯಕ್ಷರಲ್ಲವೇನ್ರಿ, ಎಂದು ಜ್ಞಾಪಕ ಮಾಡುತ್ತಿದ್ದರು. ಅದು ಕೇಂದ್ರ ಸರ್ಕಾರ ಮಾಡಿರತಕ್ಕಂಥ ಗೈಡ್‌ಲೈನ್ಸ್‌ಗಳ ಆಧಾರದ ಮೇಲೆ ನಾವೇನು ಕೊಟ್ಟಿದ್ದೇವೆ ಇದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಏಕೆಂದರೆ, ನಾವೇನು 1,19,000 ಎಕರೆ ಈಗಾಗಲೇ ನೋಟಿಫಿಕೇಷನ್‌ಗೆ

ಆರ್ಡರ್ ಮಾಡಿ ಕೊಟ್ಟಿದ್ದೇವೆ ಎಂದು ಮಾನ್ಯ ಶಿವಕುಮಾರ್ ರವರ ಹೇಳಿಕೆಯಲ್ಲಿ ನೋಡಿದೆ. ಅವರು ಮಾತನಾಡಬೇಕಾದರೆ ನಾನು ಕುಳಿತಿದ್ದೆ.

ಶ್ರೀ ಡಿ.ಕೆ.ಶಿವಕುಮಾರ್: ನಾನು ನೋಟಿಫಿಕೇಷನ್ ಎಂದು ಹೇಳಲಿಲ್ಲ, ನಮ್ಮ ಚಿಂತನೆಯಿದೆ ಎಂದು ಹೇಳಿದೆ. ನಿಮ್ಮ ಚಿಂತನೆಯಿದೆ ಎಂದು ನಿಮ್ಮ KIADB letter ಓದಿದೆ.

ಶ್ರೀ ಹೆಚ್.ಡಿ.ಕುಮಾರಸ್ವಾಮಿ: ಒಂದು ನಿಮಿಷ ಸಾರ್. ನೀವು ಹೇಳಿರುವುದು ಇಲ್ಲಿ ಇದೆ.

ಶ್ರೀ ಸಿದ್ದರಾಮಯ್ಯ: ನಾವು ಎಲ್ಲರೂ ಹೇಳಿದ್ದು proposal ಎಂದು. Proposal ಗೂ acquire ಗೂ ವ್ಯತ್ಯಾಸವಿಲ್ಲವೇ?

ಶ್ರೀ ಹೆಚ್.ಡಿ.ಕುಮಾರಸ್ವಾಮಿ: ಒಂದು ನಮಿಷ ಸಿದ್ದರಾಮಣ್ಣನವರೇ ಅವರೇನು ಹೇಳಿದ್ದಾರೆನ್ನುವುದನ್ನು ಕೊಡುತ್ತೇನೆ. ಬೆಂಗಳೂರಿನ ಸುತ್ತಮುತ್ತಲಿನ ಹೊಸದಾಗಿ ನಿರ್ಮಿತವಾಗಿರುವಂಥ township ಹೆಸರಿನಲ್ಲಿ ಈಗಾಗಲೇ 13,525 ಎಕರೆ ಜಮೀನು ವಶಪಡಿಸಿಕೊಂಡಿದ್ದಾರೆ ಎಂದು ವಿರೋಧ ಪಕ್ಷದ ನಾಯಕರಾಗಿರುವ ಶ್ರೀ ಧರ್ಮಸಿಂಗ್‌ರವರು ಹೇಳಿರುವುದು. ಶಿವಕುಮಾರ್‌ರವರು ಮಧ್ಯೆದಲ್ಲಿ interfere ಆಗಿ ಹೇಳಿದ್ದಾರೆ. ಅವರು ಭಾಷಣ ಮಾಡುವಾಗ ಹೇಳಿಲ್ಲ. ಅದಕ್ಕೆ clarify ಆಗಬೇಕಲ್ಲ? ನಾವು ನಮಗೆ convince ಮಾಡಲು ಪ್ರಯತ್ನಪಡುತ್ತಿರುವುದು SEZ ಒಂದೇ ವಿಚಾರವಲ್ಲ. ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ 1,60,000 ಎಕರೆ ಈ ಸರ್ಕಾರ ಬಂದ ಮೇಲೆ acquisition ಮಾಡಿ identification ಮಾಡಿ ಅದನ್ನೆಲ್ಲಾ real estate ವ್ಯಾಪಾರ ಮಾಡುತ್ತಿದೆ ಎಂದು ಶಿವಕುಮಾರ್‌ರವರು ಹೇಳಿರುವುದು. ಚಿಂತನೆ ಎನ್ನುವ ಪದ ಇಲ್ಲ. ರೆಕಾರ್ಡನಲ್ಲಿರುವುದನ್ನು ನಾನು ಹೇಳಿದೆ.

ಶ್ರೀ ಡಿ.ಕೆ.ಶಿವಕುಮಾರ್: ನಾನು ಕೊಟ್ಟಿದ್ದೀರಿ ಎಂದು ಹೇಳಲಿಲ್ಲ.

ಶ್ರೀ ಹೆಚ್.ಡಿ.ಕುಮಾರಸ್ವಾಮಿ: clarify ಮಾಡಿದರೆ ಸರಿ. ನೀವು ಇಲ್ಲಿ ಹೇಳಿರುವುದನ್ನು ನಾನು ಹೇಳುತ್ತಿದ್ದೇನೆ.

ಶ್ರೀ ಡಿ.ಕೆ.ಶಿವಕುಮಾರ್: ಕೊಟ್ಟುಬಿಟ್ಟಿದ್ದೀರಿ ಎಂದು ನಾವು ಹೇಳಿಲ್ಲ.

ಶ್ರೀ ಹೆಚ್.ಡಿ.ಕುಮಾರಸ್ವಾಮಿ: ಇಲ್ಲಿ ಸದನದ ರೆಕಾರ್ಡ್‌ನಲ್ಲಿರುವುದನ್ನು ನಾನು ಹೇಳಿದೆ. ನಿನ್ನೆ ನೀವು ಹೇಳಿರುವುದನ್ನು ನಾನು ಹೇಳಿದೆ. ಇಲ್ಲಿ

ಚಿಂತನೆಯೆ ಪ್ರಶ್ನೆ ಬಂದಿಲ್ಲ. ಆಗಲೇ real estate ದಂಧೆ ನಡೆದು ಹೋಗಿಬಿಟ್ಟಿದೆ ಎನ್ನುವ ರೀತಿಯಲ್ಲಿ ಹೇಳಿದಿರಿ.

ಶ್ರೀ ಡಿ.ಕೆ.ಶಿವಕುಮಾರ್: ನಾನು ಆದಾದ ಮೇಲೆ clarify ಮಾಡಿ ಹೇಳಿದ್ದೇನೆ. ರೆಕಾರ್ಡನಲ್ಲಿದೆ ನೀವು ಅದನ್ನು ಓದುತ್ತಿಲ್ಲ.

ಶ್ರೀ ಹೆಚ್.ಡಿ.ಕುಮಾರಸ್ವಾಮಿ: clarify ಮಾಡಿದ್ದರೆ ಸಂತೋಷ.

ಶ್ರೀ ಎಂ.ಪಿ.ವೆಂಕಟೇಶ್: ಮಾನ್ಯ ಮುಖ್ಯಮಂತ್ರಿಗಳು ಬರುವುದಕ್ಕಿಂತ ಮೊದಲು ಉದ್ರೇಕವಾಗಿ ಹೇಳಿದಿರಿ ನಂತರ ಅವರು ಬಂದ ಮೇಲೆ ಸರಿಮಾಡಿದಿರಿ.

ಶ್ರೀ ಹೆಚ್.ಡಿ.ಕುಮಾರಸ್ವಾಮಿ: ಈ ಮಟ್ಟಕ್ಕೆ ರೈತರನ್ನು ಒಕ್ಕಲೆಬ್ಬಿಸಲಿಕ್ಕೆ ನೀವು ಹೊರಟಿದ್ದೀರಿ ಎಂದೇನು ಎಲ್ಲಾ ಸದಸ್ಯರುಗಳು ಹೇಳಿದ್ದಾರೆ, ನಾನು ಇಲ್ಲಿ ಒಂದು ವಿಷಯವನ್ನು ಹೇಳುವುದಕ್ಕೆ ಬಯಸುತ್ತೇನೆ. HLCC ನಲ್ಲಿ ನಮ್ಮ ಸರ್ಕಾರ ಬಂದ ಮೇಲೆ ಏನು ತೀರ್ಮಾನವಾಗಿದೆ ಎಂದು ಹೇಳುವುದಕ್ಕೆ ಬಯಸುತ್ತೇನೆ. Dollors Hotel Limited 17 ನೇ ತಾರೀಖಿನ HLCC meeting ನಲ್ಲಿ ಬಂದಿದೆ. Nature of approval-consent process, status of acquisition- not commenced, whether consent letter submitted-not yet, Century retirement-not yet. ಯಾವುದೇ ರೀತಿಯ ಸ್ವೇಚ್ಛಾಚಾರವಾಗಿ ತೀರ್ಮಾನಗಳು ಆಗಿಲ್ಲ, ಆಗುವುದಕ್ಕೆ ಅವಕಾಶವನ್ನು ನಾವು ಕೊಟ್ಟಿಲ್ಲ. ನಾವು ಯಾವ ರೀತಿಯಾಗಿ ಈ ವಿಷಯದಲ್ಲಿ ತೀರ್ಮಾನಿಸಿದ್ದೇವೆಂದರೆ, ಇವರೇನು ನಾವು ಈಗಾಗಲೇ ದೊಡ್ಡ ಮಟ್ಟದಲ್ಲಿ ರೈತರನ್ನು ಒಕ್ಕಲೆಬ್ಬಿಸಿದ್ದೇವೆಂದು ಹೇಳಿದ್ದಾರೆ. ನನ್ನ ಕ್ಷೇತ್ರದಲ್ಲಿ ಬಂದು ಶೋಧನೆ ನಡೆಸಿದರು. ಭೈರಮಂಗಲ, ಹೊಸೂರು, ಎಲ್ಲಾ ಕಡೆ ಸತ್ಯ ಶೋಧನೆ ಮಾಡಿದ್ದಾರೆ. ಅಲ್ಲಿ ಭಾಷಣ ಮಾಡಿದರು. ಇದೆಲ್ಲಾ ದೇವೆಗೌಡರು ಮತ್ತು ಅವರ ಮಕ್ಕಳು ಸಾವಿರಾರು ಗಟ್ಟಲೆ ದುಡ್ಡು ಮಾಡಲಿಕ್ಕೆ ಈ township proposal ಮಾಡುತ್ತಿರುವುದು ಎಂದು ಹೇಳಿದರು. ಮಾಡಲಿ ಸಂತೋಷ. ನಿರ್ದಿಷ್ಟ ಅನುಮೋದನೆ ಪಡೆದ ವಿಶೇಷ ಆರ್ಥಿಕ ವಲಯಗಳ ಜಿಲ್ಲಾವಾರು ವಿವರ. ಗುಲ್ಬರ್ಗಾಕ್ಕೆ ಹೋಗಿ, ರಾಯಚೂರಿಗೆ ಹೋಗಿ, ಎಂದು ಅವರು ಹೇಳುತ್ತಿದ್ದಾರೆ ಅದನ್ನು ನಾವು ಸ್ವಾಗತಿಸುತ್ತೇವೆ, ಬೆಂಗಳೂರು ಅರ್ಬನ್ ಜಿಲ್ಲೆಯಲ್ಲಿ 412.42 ಹೆಕ್ಟೇರ್ ಜಮೀನನ್ನು ಈ SEZ ವ್ಯಾಪ್ತಿಯಲ್ಲಿ clear ಆಗಿದೆ. ಬೆಂಗಳೂರು ರೂರಲ್‌ನಲ್ಲಿ 29.17 ಹೆಕ್ಟೇರ್, ಮಂಗಳೂರಿನಲ್ಲಿ 905 ಹೆಕ್ಟೇರ್, ಹಾಸನದಲ್ಲಿ 671.57 ಹೆಕ್ಟೇರ್, ಶಿವಮೊಗ್ಗದಲ್ಲಿ

169.6 ಹೆಕ್ಟೇರ್, ಉಡುಪಿಯಲ್ಲಿ 250.64 ಹೆಕ್ಟೇರ್, ಮೈಸೂರಿನಲ್ಲಿ 55.22 ಹೆಕ್ಟೇರ್. ಇದು ನಿರ್ದಿಷ್ಟವಾಗಿ ವಿಶೇಷ ಆರ್ಥಿಕ ವಲಯದ ಅಡಿಯಲ್ಲಿ ಕೊಟ್ಟಿರುವುದು. ಒಟ್ಟಾರೆಯಾಗಿ 2,502 ಹೆಕ್ಟೇರ್. ಮತ್ತೆ ತಾತ್ವಿಕ ಒಪ್ಪಿಗೆ ಕೊಟ್ಟಿರತಕ್ಕಂಥದರ ಬಗ್ಗೆ ಹೇಳುವುದಾದರೆ, ಬೆಂಗಳೂರು ಅರ್ಬನ್ ಜಿಲ್ಲೆಯಲ್ಲಿ 478.62 ಹೆಕ್ಟೇರ್ ಮತ್ತು ಬೆಂಗಳೂರು ರೂರಲ್‌ನಲ್ಲಿ 5946.4 ಹೆಕ್ಟೇರ್, ಉಡುಪಿಯಲ್ಲಿ 202 ಹೆಕ್ಟೇರ್, ಕೋಲಾರದಲ್ಲಿ 1326 ಹೆಕ್ಟೇರ್, ಬೆಳಗಾಂನಲ್ಲಿ 121.4 ಹೆಕ್ಟೇರ್, ಮೈಸೂರಿನಲ್ಲಿ 10.12 ಹೆಕ್ಟೇರ್ ಭೂಮಿಗೆ ತಾತ್ವಿಕ ಒಪ್ಪಿಗೆಯನ್ನು ಪಡೆದಿರತಕ್ಕಂಥ ಜಿಲ್ಲಾವಾರು ವಿವರ ಇದಾಗಿದೆ. ಬೆಂಗಳೂರು ನಗರ ಜಿಲ್ಲೆಯಲ್ಲಿ 21 ನರ್ದಿಷ್ಟ ಅನುಮೋದನೆ ಪಡೆದಿರತಕ್ಕಂಥದರಲ್ಲಿ ಈಗಾಗಲೇ 2 ತಾತ್ವಿಕ ಒಪ್ಪಿಗೆ ಪಡೆದಿರತಕ್ಕಂಥದನ್ನು ನಾನು ಹೇಳಿದ್ದೇನೆ. 412 ಎಕರೆಯಲ್ಲಿ ಯಾರ್‍ಯಾರಿಗೆ ಕೊಟ್ಟಿದ್ದೇವೆಂಬುದರ ಮಾಹಿತಿಯನ್ನು ಸದನದ ಮುಂದಿಡುವುದಕ್ಕೆ ನಾನು ತಯಾರಿದ್ದೇನೆ. ಆದರ್ಶ ಪ್ರೈಂ ಪ್ರಾಜೆಕ್ಟ್ ಪ್ರೈವೇಟ್ ಲಿಮಿಟೆಡ್‌ಗೆ ಸರ್ಜಾಪುರದಲ್ಲಿ 468.62 ಹೆಕ್ಟೇರ್ ಜಮೀನು ನೀಡಿರುವ ಬಗ್ಗೆ ಇವರು ಪ್ರಮುಖವಾಗಿ ಚರ್ಚೆ ಮಾಡಿದ್ದಾರೆ. ಮತ್ತೆ ಇನ್ನೊಂದು ರಾಮನಗರದಲ್ಲಿ ಗಾಂಧಿ ಸಿಟಿ ಎಂಬ ಕಂಪನಗೆ 504 ಎಕರೆ ಮತ್ತು ಗೋಕುಲ್‌ದಾಸ್ ಎಕ್ಸ್‌ಪೋರ್ಟ್‌ಗೆ ಕನಕಪುರದ ಹತ್ತಿರ 141 ಎಕರೆ ಮತ್ತು ಸ್ಕಿಲ್ ಕಂಪನಿಯವರಿಗೆ 5 ಸಾವಿರ ಎಕರೆ ಕೊಡುವುದರ ಬಗ್ಗೆ ನಿನ್ನೆ ದಿವಸ ಇಲ್ಲಿ ಬಹಳ ಚೆನ್ನಾಗಿ ಚರ್ಚೆ ಮಾಡಿದ್ದಾರೆ. ಮತ್ತೆ ಹಿಂದುಜಾ ಇನ್‌ವೆಸ್ಟ್‌ಮೆಂಟ್‌ನವರಿಗೆ 100 ಎಕರೆ ಭೂಮಿ ಬಗ್ಗೆ ಕೂಡ ಇಲ್ಲಿ ಚರ್ಚೆಯಾಗಿದೆ. ಇದೆಲ್ಲಾ ತಾತ್ವಿಕವಾಗಿ ಅನುಮೋದನೆ ಮಾಡಿರತಕ್ಕಂಥದಷ್ಟೆ. ಇಲ್ಲಿ ಭೂಸ್ವಾಧೀನದ ಪ್ರಕ್ರಿಯೆಗಳು ಇನ್ನು ಪ್ರಾರಂಭವಾಗಿಲ್ಲ. ಮತ್ತೆ ನಾವು consent letterಗಳನ್ನು ಇನ್ನು ಕೊಟ್ಟಿಲ್ಲ. ಯಾವ ಕಂಡೀಷನ್ ಹಾಕಿ ನಾವು ಕೊಟ್ಟಿದ್ದೇವೆಂದರೆ, ಜಮೀನನ್ನು ಅವರು ರೈತರ consent ಪಡೆದುಕೊಂಡು ತರಬೇಕೆಂದು ಹೇಳಿದ್ದೇವೆ. ರೈತರು consent ಕೊಡದೇ ಇದ್ದಾಗ ನಾವು ನೇರವಾಗಿ ಹೋಗಿ KIADB ಮೂಲಕ ಕೊಡಿಸತಕ್ಕಂಥದ್ದಕ್ಕೆ ಅವಕಾಶ ಇಲ್ಲ ಎನ್ನತಕ್ಕಂಥ ತೀರ್ಮಾನವನ್ನು ನಾವು ಮಾಡಿದ್ದೇವೆ. ಸ್ಕಿಲ್ ಕಂಪನಿ ಬಗ್ಗೆ ನಿನ್ನೆ ದಿವಸ ಚರ್ಚೆ ಚೆನ್ನಾಗಿ ನಡೆದಿದೆ. ಇವತ್ತಿನ ದಿವಸ ಕಂಪನಿಗಳ ಬಗ್ಗೆ ಚರ್ಚೆ ಮಾಡಿ ನಾನು ಬೇಡವೆಂದು ಹೇಳುವುದಿಲ್ಲ. ಇವತ್ತು ಸದನದಲ್ಲಿ ಹಿರಿಯ ಸದಸ್ಯರುಗಳಿದ್ದೀರಿ. ನಿನ್ನೆ ದಿವಸ ಅಸಲಿ-ನಕಲಿ ಬಗ್ಗೆ ಚರ್ಚೆ ನಡೆಯಿತು. ಮತ್ತೆ ಆ ವ್ಯಕ್ತಿಯ ಹೆಸರು ಹೇಳಿ ಅವರ ಬಗ್ಗೆ ಏಕ ವಚನದಲ್ಲಿಯೂ ಕೂಡ ಚರ್ಚೆ ನಡೆಯಿತು. ಅವರೇ ದೊಡ್ಡವರಿದ್ದರೆ ಏಕವಚನದಲ್ಲಿ ಮಾತನಾಡಿರಬಹುದೆಂದು

ನಾನು ತಿಳಿದುಕೊಂಡಿದ್ದೇನೆ. ನಂದಗುಡಿ SEZ ಬಗ್ಗೆ ಪ್ರಮುಖವಾಗಿ ಚರ್ಚೆ ಮಾಡಿದ್ದಾರೆ. ಇವತ್ತಿನ ದಿವಸ ಪ್ರಮುಖವಾಗಿ ನೀರಿನ ವಿಷಯದ ಬಗ್ಗೆ ಚರ್ಚೆ ಮಾಡಿದ್ದೀರಿ. ಮಾನ್ಯ ನರೇಂದ್ರಬಾಬುರವರು ಇವತ್ತು ಚರ್ಚೆ ಮಾಡುವಂಥ ಸಂದರ್ಭದಲ್ಲಿ ತಿಪ್ಪಗೊಂಡನಹಳ್ಳಿ ಜಲಾಶಯದಿಂದ ನೀರು ಬರುತ್ತಿಲ್ಲವೆಂದು ಹೇಳಿದರು. ನಾವು ಬಂದ 18 ತಿಂಗಳಲ್ಲಿ ತೆಗೆದುಕೊಂಡ ನಿರ್ಧಾರದಿಂದ ತಿಪ್ಪಗೊಂಡನಹಳ್ಳಿ ಜಲಾಶಯದಿಂದ ನೀರು ಬಾರದೆ ಇರುವಂತಾಗಿಲ್ಲ. ಹಿಂದಿನ ಸರ್ಕಾರಗಳು ತೆಗೆದುಕೊಂಡಿರತಕ್ಕಂಥ ಘಟನೆಗಳಿಂದ ಇದಾಗಿದೆ. ತಾವು ಇದನ್ನು ನೆನಪಿಸಿಕೊಳ್ಳಬೇಕೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ನಾವು 18 ತಿಂಗಳ ಅವಧಿಯಲ್ಲಿ ತೆಗೆದುಕೊಂಡಿರತಕ್ಕಂಥ ನಿರ್ಧಾರದಿಂದ ತಿಪ್ಪಗೊಂಡನಹಳ್ಳಿ ಮತ್ತು ಕಾವೇರಿಯಲ್ಲಿ ನೀರಿಲ್ಲವೆಂದು ಹೇಳುತ್ತಿದ್ದೀರಿ. ಇದರ ಬಗ್ಗೆ ಇವತ್ತು ನಾವುಗಳು ಚರ್ಚೆ ಮಾಡುತ್ತಿದ್ದೇವೆ. ಇದು ಹೇಗಿದೆಂದರೆ, ಊರು ಕೊಳ್ಳೆ ಹೊಡೆದ ಮೇಲೆ ದೊಡ್ಡಿ ಬಾಗಿಲು ಹಾಕಿದರೆಂಬ ಗಾದೆ ಇದೆ, ಆ ರೀತಿಯಾಗಿ ಇವತ್ತಿನ ದಿವಸ ಆಗಿದೆ. ಇವತ್ತಿನ ದಿವಸ ಎಲ್ಲರೂ ಚರ್ಚೆ ಮಾಡುವವರಾಗಿದ್ದಾರೆ. ಬೆಂಗಳೂರು ಈ ಮಟ್ಟಕ್ಕೆ ಬರುವುದಕ್ಕೆ ಯಾರು ಕಾರಣ? 18 ತಿಂಗಳೂ ಆಡಳಿತ ಮಾಡಿರುವ ನಮ್ಮ ಸರ್ಕಾರ ಕಾರಣವೊ? ಬೆಂಗಳೂರು ನಗರದಲ್ಲಿ ಕಾಲುವೆಗಳನ್ನು ಬಿಡದೇ ಜಾಗಗಳೆಲ್ಲವನ್ನು ತೆಗೆದುಕೊಂಡಿದ್ದಾರೆ. ಕೆರೆಕಟ್ಟೆಗಳೆಲ್ಲವನ್ನು ನುಂಗಿ ಹಾಕಿದ್ದಾರೆ. ಇದಕ್ಕೆ ನಾವು ಕಾರಣರಲ್ಲ, ಬೆಂಗಳೂರು ನಗರದಲ್ಲಿ ಉಸಿರಾಡುವುದಕ್ಕೆ ಜಾಗವಿಲ್ಲವೆಂದು ತಾವೆಲ್ಲರು ಈಗ ಹೇಳುತ್ತಿದ್ದೀರಿ. ಈ ಸರ್ಕಾರ ಬಂದ ಮೇಲೆ ಸರ್ಕಾರಿ ಭೂಮಿಯನ್ನು ವಶಪಡಿಸಿಕೊಳ್ಳತಕ್ಕಂಥ ಕೆಲಸ ಪ್ರಾರಂಭ ಮಾಡಿದೆ. ಇವತ್ತಿನ ದಿವಸ ಇಂಟರ್‌ನ್ಯಾಷನಲ್ ಸ್ಕೂಲ್ ಕಟ್ಟುವುದಕ್ಕೆ ಬೆಳಿಗ್ಗೆ ಎದ್ದು ಕೂಲಿ ಕೆಲಸಕ್ಕೆ ಹೋಗುವಂಥ ಜನರನ್ನು ಯಾವ ರೀತಿಯಾಗಿ ಎತ್ತಂಗಡಿ ಮಾಡಿ ಸ್ಕೂಲ್ ಕಟ್ಟಡವನ್ನು ಕಟ್ಟಿದ್ದಾರೆಂಬುದು ನಮಗೆ ಗೊತ್ತಿದೆ. ಅದರ ಬಗ್ಗೆ ಇಲ್ಲಿ ಚರ್ಚೆ ಮಾಡುವುದಕ್ಕೆ ಹೋಗುವುದಿಲ್ಲ. Skill Infrstructure Limited ಗೆ ಭೂಮಿ ಕೊಡತಕ್ಕಂಥದರ ಬಗ್ಗೆ ನಾವು ಸ್ವೇಚ್ಛಾಚಾರವಾಗಿ ತೀರ್ಮಾನ ಮಾಡಿದ್ದಾರೆಂದು ಹೇಳಿದ್ದಾರೆ. ನಾವು ಏನು ಕಂಡಿಷನ್ ಹಾಕಿದ್ದೇವೆಂದು ಹೇಳುವುದಕ್ಕೆ ಬಯಸುತ್ತೇನೆ. ಕಂಪನಿಯವರೆ ನೇರವಾಗಿ ರೈತರಿಂದ ಭೂಮಿಯನ್ನು ಖರೀದಿಸಬೇಕು. ರಾಜ್ಯ ಸರ್ಕಾರವೂ ಕಡ್ಡಾಯವಾಗಿ ಭೂ ಸ್ವಾಧೀನ ಮಾಡುವುದಿಲ್ಲ. ಯೋಜನಾ ಪ್ರದೇಶದಲ್ಲಿ ಬರುವ ಸರ್ಕಾರಿ ಜಮೀನನ್ನು ಮಾರುಕಟ್ಟೆ ದರದಲ್ಲಿ ಮಾತ್ರ ನೀಡಲಾಗುತ್ತದೆ. ಇವೆಲ್ಲಾ ನಾವು ಮಾಡಿರತಕ್ಕಂಥ ನಿರ್ಧಾರವಾಗಿದೆ. ಇದು SEZ ಅಥವಾ ಯಾವುದೇ

ಇರಬಹುದು. ನಾನು ಒಂದು ಸಣ್ಣ ವಿಷಯವನ್ನು ಇಲ್ಲಿ ಹೇಳುತ್ತಿದ್ದೇನೆ. ಏಕೆಂದರೆ, ಎಲ್ಲಾ ವಿಷಯವನ್ನು ನಾನು ಹೇಳುವುದಕ್ಕೆ ಹೋಗುವುದಿಲ್ಲ. ಮಾನ್ಯ ಸಿದ್ದರಾಮಣ್ಣನವರು ಉಪ ಮುಖ್ಯಮಂತ್ರಿಯಾಗಿದ್ದರು, ದೇವೇಗೌಡರು ಮತ್ತು ಅವರ ಕುಟುಂಬವನ್ನು ಕನಸಿನಲ್ಲಿಯೂ ನಿದ್ದೆಗೆಡಿಸುತ್ತೇವೆಂದು ಮೊನ್ನೆ ದಿವಸ ಯಾರೊಬ್ಬರು ಹೇಳಿಕೆಯನ್ನು ಕೊಟ್ಟಿದ್ದಾರೆ, ಅದನ್ನು ನಾನು ನೋಡಿದ್ದೇನೆ. ಈ ರಾಜ್ಯದಲ್ಲಿ ಇನ್ನು ಈ ರೀತಿಯಾಗಿ ನಡೆಯುತ್ತಿದೆ. ಮಾನ್ಯ ದೇವೇಗೌಡರು ಪ್ರಧಾನಮಂತ್ರಿಯಾಗಿ ಹೋದ ನಂತರ ಮತ್ತೆ ಏನು ಬದಲಾವಣೆಗಳಾಯಿತ್ತೆಂಬುದರ ಬಗ್ಗೆ ಗೊತ್ತಿದೆ. ಬ್ಯಾಂಕ್‌ನಲ್ಲಿ ಸಾಲ ತೆಗೆದುಕೊಳ್ಳುವುದಕ್ಕೆ 10 ರೂಪಾಯಿಗೆ ಸರ್ಕಾರಿ ಭೂಮಿಯನ್ನು ಮಾರ್ಟ್‌ಗೇಜ್ ಮಾಡಿರತಕ್ಕಂಥ ಕೆಲಸ ಈ ರಾಜ್ಯದಲ್ಲಿ ನಡೆದಿದೆ. ಇದರ ಬಗ್ಗೆ ದೀರ್ಘವಾಗಿ ಹೇಳುವುದಕ್ಕೆ ಹೋಗುವುದಿಲ್ಲ ಮತ್ತೆ ಇದು ಕೋರ್ಟ್‌ನಲ್ಲಿರುವುದರಿಂದ ಇದರ ಬಗ್ಗೆ ಚರ್ಚೆ ಮಾಡುವುದಕ್ಕೂ ಸಹ ಹೋಗುವುದಿಲ್ಲ. ನಾವು ಈ ರೀತಿಯಾಗಿ ಸ್ಕಿಲ್ ಕಂಪನಿಯ ಬಗ್ಗೆ ನಿರ್ಧಾರ ಮಾಡಿಲ್ಲ. ಅವರಿಗೆ ತೀಟೆ ಇದ್ದರೆ ಅವರು ನೇರವಾಗಿ ರೈತರ ಹತ್ತಿರ ಹೋಗಿ ಚರ್ಚೆ ಮಾಡಿ ಜಮೀನನ್ನು ತೆಗೆದುಕೊಳ್ಳಿ. ಅವರಿಗೆ ಜಮೀನು ಕೊಡಿಸುವ ಬಗ್ಗೆ ದಲ್ಲಾಳಿ ವ್ಯಾಪಾರ ಮಾಡುವುದಕ್ಕೋಸ್ಕರ ಸರ್ಕಾರ ಇಲ್ಲಿ ಕುಳಿತಿಲ್ಲ. ಪ್ರಾಜೆಕ್ಟ್ ತರಬೇಕೆಂಬ ದರ್ದು ಇದ್ದರೆ ರೈತರ ಹತ್ತಿರ ನೇರವಾಗಿ ಹೋಗಿ ಚರ್ಚೆ ಮಾಡಿ ಜಮೀನು ತೆಗೆದುಕೊಳ್ಳಲಿ. ಈ ರೀತಿಯಾಗಿ ಸರ್ಕಾರ ತೆಗೆದುಕೊಂಡಿರತಕ್ಕಂಥ ನಿರ್ಧಾರವಾಗಿದೆಯೆಂದು ಈ ಸಂದರ್ಭದಲ್ಲಿ ನಾನು ಹೇಳುವುದಕ್ಕೆ ಬಯಸುತ್ತೇನೆ. ಪರಿಹಾರ ಹಾಗು ಪುನರ್‌ವಸತಿ ಬಗ್ಗೆ ಹೇಳುತ್ತೇನೆ. ಕಂಪನಿಯವರು ಯೋಜನಾ ಪ್ರದೇಶದಲ್ಲಿ ಭೂಮಿ ಮತ್ತು ಮನೆ ಕಳೆದುಕೊಳ್ಳುವವರಿಗೆ ಹಾಗೂ ಭೂಮಿಯಿಲ್ಲದ ಕಾರ್ಮಿಕರಿಗೆ ಸಂಬಂಧಪಟ್ಟಂಥ ವಿವರವಾದ ಪುನರ್‌ವಸತಿ ಯೋಜನೆಯನ್ನು ಸರ್ಕಾರಕ್ಕೆ ಸಲ್ಲಿಸಬೇಕು. ಅಂಥ ಪುನರ್‌ವಸತಿ ಹಗೂ ಪರಿಹಾರ ಯೋಜನೆಯನ್ನು ಸರ್ಕಾರವು ಪರಿಶೀಲಿಸಿ ಅನುಮೋದನೆ ನೀಡುತ್ತದೆ. ಅದಲ್ಲದೇ, ಪುನರ್‌ವಸತಿ ಯೋಜನೆಯ ಯೋಜನಾ ಪ್ರದೇಶದಲ್ಲಿರುವ ಒಂದು ಕುಟುಂಬಕ್ಕೆ ಒಂದು ಉದ್ಯೋಗವನ್ನು ಕಡ್ಡಾಯವಾಗಿ ನೀಡಬೇಕಾಗುತ್ತದೆ. ಕಂಪನಿಯವರಿಗೆ ನೀಡಿರುವ ಅನುಮೋದನೆಯನ್ನು ಬೇರೆ ಕಂಪನಿಗೆ ಹಾಗು ತನ್ನ ಸಬ್ಸಿಡಿಯ ಕಂಪನಿಗಳಿಗೂ ಸಹ ವರ್ಗಾವಣೆ ಮಾಡುವಂತಿಲ್ಲ. ಇದೆಲ್ಲಾ ನಾವು ಹಾಕಿರತಕ್ಕಂಥ ಕಂಡಿಷನ್‌ಗಳು. ಒರಿಜಿನಲ್ ಅಗ್ರಿಮೆಂಟ್ ಆದ ಮೇಲೆ ನೈಸ್ ಕಂಪನಿಯದು ಹುಟ್ಟು ಕೊಂಡಂತಹ ರೀತಿಯ ಕೆಲಸವನ್ನು ಇಲ್ಲಿ ಮಾಡುವುದಕ್ಕೆ ನಾವು ಅವಕಾಶವನ್ನು ಕೊಟ್ಟಿಲ್ಲ. ನಂದಗುಡಿಯಲ್ಲಿ SEZ ನ

ಆಡಳಿತ ನಿಯಂತ್ರಣವನ್ನು ಬೇರೆಯವರಿಗೆ ಸಬ್ಸಿಡಿಯರಿ ಕಂಪನಿಗಳಿಗೂ ಸಹ ವರ್ಗಾವಣೆ ಮಾಡುವಂತಿಲ್ಲ. ಹಾಗೂ ಆಡಳಿತದ ನಿಯಂತ್ರಣವನ್ನು ಹಿಂತೆಗೆದುಕೊಳ್ಳುವಂತಿಲ್ಲ. ಕಂಪನಿಯಲ್ಲಿ ನಿರ್ದೇಶಕರು ಹಾಗು ಷೇರು ಹೋಲ್ಡಿಂಗ್ ಪಾರ್ಟನರ್ ಬದಲಾವಣೆಯಾಗುವಂತಿಲ್ಲ. ಬದಲಾವಣೆ ಏನಾದರೂ ಆದಲ್ಲಿ ರಾಜ್ಯಸರ್ಕಾರವು ಭಾರತ ಸರ್ಕಾರಕ್ಕೆ SEZ ಅನುಮೋದನೆಯನ್ನು ಹಿಂತೆಗೆದುಕೊಳ್ಳಲು ತಿಳಿಸಲಾಗುವುದು. ಇದು ನಾವು ಹಾಕಿರತಕ್ಕಂಥ ಕಂಡಿಷನ್‌ಗಳು. ಯೋಜನಾ ಪ್ರದೇಶಕ್ಕೆ ನೀರನ್ನು ಒದಗಿಸುವ ಬಗ್ಗೆ ಸರ್ಕಾರದ ಜವಾಬ್ದಾರಿ ಇರುವುದಿಲ್ಲ. ಇದನ್ನು ಕಂಪನಿಯವರೇ ನಿರ್ವಹಿಸಬೇಕು. ಸರ್ಕಾರದಿಂದ ನೀರು ಕೊಡತಕ್ಕಂಥ ಪ್ರಶ್ನೆಯೇ ಇಲ್ಲವೆಂಬ ಕಂಡಿಷನ್‌ನ್ನು ಹಾಕಿದ್ದೇವೆ. ಕಂಪನಿಯವರು ಯೋಜನೆಗೆ ಬೇಕಾಗಿರುವ ನೀರಿನ ಬಗ್ಗೆ ಹಾಗು ಅದರ ನಿರ್ವಹಣೆಯ ಬಗ್ಗೆ ವಿವರವಾದ ಯೋಜನೆಯನ್ನು ಸರ್ಕಾರಕ್ಕೆ ಸಲ್ಲಿಸಬೇಕು ಹಾಗು ಕಂಪನಿಯವರು ನೀರಿನ ಯೋಜನಾ ಪ್ರದೇಶದಲ್ಲಿರುವ ನೀರಿನ ಮೂಲದಿಂದಲೇ ಭರಿಸಬೇಕು, ಇತರೇ ನದಿ ಮೂಲದ ಮೇಲೆ ಅವಲಂಭಿತರಾಗಬಾರದು. ಇದೆಲ್ಲಾ ನಾವು ಕಂಡಿಷನ್ ಹಾಕಿರತಕ್ಕಂಥದು. SEZ ಜಮೀನುಗಳನ್ನು ನೀವು ಸ್ವಾಧೀನ ಮಾಡಿಕೊಳ್ಳಬೇಕಾದರೆ ಸರ್ಕಾರ ಆಕ್ಟ್‌ನಲ್ಲಿ ಗೈಡ್‌ಲೈನ್ಸ್ ಮಾಡಿಲ್ಲವೆಂದು ಮಾನ್ಯ ಶ್ರೀರಾಮರೆಡ್ಡಿಯವರು ಮತ್ತು ಕೆಲವು ಸ್ನೇಹಿತರುಗಳು ಹೇಳಿದ್ದಾರೆ. ಇದರಲ್ಲಿ 50% ಪ್ರದೇಶ, ಒಂದು ಲಕ್ಷ ಚದರ ಮೀಟರ್ ಬಿಲ್ಡಿಂಗ್, ಕನಿಷ್ಟ 50% ಪ್ರದೇಶವನ್ನು ಉಪಯೋಗಿಸಬೇಕು. ಕನಿಷ್ಟ processing ಪ್ರದೇಶ ಮತ್ತು non-processing ಪ್ರದೇಶ ಗರಿಷ್ಟ ಶೇಕಡಾ 50% ಪ್ರದೇಶವನ್ನು ಇದು IT/ITES ಕಂಪನಿಗಳಿಗೆ ಗರಿಷ್ಟ 50% ಪ್ರದೇಶವನ್ನು ಉಪಯೋಗಿಸಬಹುದು. Shopping complex ಸಾವಿರ ಚದರ ಮೀಟರ್ ಕಟ್ಟಡ, housing ಗೆ 10 ಸಾವಿರ ಚದರ ಮೀಟರ್ ಕಟ್ಟಡ, Biotechnology ಗೆ 40 ಸಾವಿರ ಚದರ ಮೀಟರ್ ಬಿಲ್ಡಿಂಗ್ ಕನಿಷ್ಟ ಶೇಕಡಾ 50 ಪ್ರದೇಶವನ್ನು ಉಪಯೋಗಿಸಬೇಕು. ಮತ್ತೆ ಮೇಲಿನಂತೆ non-processing ಪ್ರದೇಶಕ್ಕೆ gems and jewellery 50 ಸಾವಿರ ಚದರ ಮೀಟರ್, ಬಿಲ್ಡಿಂಗ್ ಕನಿಷ್ಟ ಶೇಕಡಾ 50 ಪ್ರದೇಶವನ್ನು ಉಪಯೋಗಿಸಬೇಕು. product specific SEZ ಕನಿಷ್ಟ ಶೇಕಡಾ 50ರಷ್ಟು ಪ್ರದೇಶವನ್ನು ಉಪಯೋಗಿಸಬೇಕು. Non processing ಪ್ರದೇಶದಲ್ಲಿ ಗರಿಷ್ಠ ಶೇಕಡಾ 50 ರಷ್ಟು ಪ್ರದೇಶವನ್ನು ಉಪಯೋಗಿಸಬೇಕು. Shopping complex 50 ಸಾವಿರ ಚದರ ಮೀಟರ್ ಕಟ್ಟಡ, housing 75 ಸಾವಿರ ಚದರ ಮೀಟರ್ ಕಟ್ಟಡ, hotel 10 ಸಾವಿರ ಚದರ ಮೀಟರ್, ಹೀಗೆ multi products

ಗೆ ಅದಕ್ಕೂ ಇದೇ ರೀತಿ ಏನು ನಾವು ತೀರ್ಮಾನವನ್ನು ಮಾಡಿದ್ದೇವೆ, ಇದನ್ನು ನಿಮ್ಮ ಗಮನಕ್ಕೆ ತರಲಿಕ್ಕೆ ನಾನು ಬಯಸುತ್ತಿದ್ದೇನೆ. ಕೊನೆಯದಾಗಿ ನಾನು ಒಂದು ವಿಷಯವನ್ನು ಹೇಳುವುದಕ್ಕೆ ಬಯಸುತ್ತೇನೆ. ಮಾನ್ಯ ಸಿದ್ಧರಾಮಣ್ಣನವರು ಕಾಂಗ್ರೆಸ್ ಪಕ್ಷದ ಪರವಾಗಿ ಬಹಳ ಲೀಡ್ ತೆಗೆದುಕೊಂಡಿದ್ದಾರೆ. ಮುಂದಿನ ದಿನಗಳಲ್ಲಿ ಆ ಪಕ್ಷದ ನಾಯಕರಾಗಿ ಬೆಳೆಯತಕ್ಕಂಥದ್ದಕ್ಕೆ ಅವರ ಮುಂದಿನ ಜೀವನ ಇದೆ. ಇವತ್ತು ನಮ್ಮ ಬಗ್ಗೆ ಏನು ಆಪಾದನೆ ಮಾಡಿದ್ದಾರೆ. ಒಂದು ವಿಷಯವನ್ನು ಇಲ್ಲಿ ಹೇಳುವುದಕ್ಕೆ ನಾನು ಬಯಸುತ್ತೇನೆ. 1999ರಲ್ಲಿ ಮಾಡಿದಂಥ Gazette notification ನಂತರ BMICPA ಗೆ ಶ್ರೀಮಾನ್ ಶಿವಕುಮಾರ್‌ರವರೆ ಅದಕ್ಕೆ ಅಧ್ಯಕ್ಷರು, ಒಂದು Gazette notification ನ್ನು ಹೊರಡಿಸಿದರು. ಅಧಿಕಾರದಲ್ಲಿ ಬಹಳ ನಿಪುಣತೆ ಮತ್ತು ಅನುಭವ ಇರತಕ್ಕಂಥವರು. Oxford University ನಲ್ಲಿ Doctorate ಪಡೆದುಕೊಂಡಿರತಕ್ಕಂಥವರು, ಇದರಲ್ಲಿ ಏನಾಗಿದೆ ಆ BMICPA ವ್ಯಾಪ್ತಿಯೊಳಗೆ 701 ಚದರ ಕಿ.ಮೀ.ನ್ನು ಆ ಯೋಜನೆಗೆ ಒಳಪಡಿಸಿ ಆರ್ಡರ್‌ನ್ನು issue ಮಾಡಿದ್ದಾರಲ್ಲಾ 1,75,250 ಎಕರೆ ಜಮೀನನ್ನು ಅವರು ಕೇಳಿದ ಕಡೆಗೆ ಕೊಡಬೇಕೆಂದು ಆರ್ಡರ್ ಹೊರಡಿಸಿದ್ದು ನನ್ನ ಸರ್ಕಾರವಲ್ಲ. ಬೆಂಗಳೂರು–ಮೈಸೂರು ಮಾಡಲಿಕ್ಕೆ ಹೊರಟ್ಟಿದ್ದೀರಲ್ಲಾ ಇದು ಕಾಂಗ್ರೆಸ್ ಸರ್ಕಾರದಲ್ಲಿ ನೀವುಗಳು ತೆಗೆದುಕೊಂಡಿರತಕ್ಕಂಥ ನಿರ್ಧಾರ. BMICPA ಅಧ್ಯಕ್ಷರಾಗಿದ್ದರವರು ಅವರನ್ನು ಕೇಳಿ ಅವರಿಗೆ ಬಹಳ ಚೆನ್ನಾಗಿ ಗೊತ್ತಿರಬೇಕು. Planning Authority ಮಾಡಿದರು. ಅದಕ್ಕೆ 701 ಚದರ ಕಿ.ಮೀ.ವ್ಯಾಪ್ತಿಯನ್ನು ಆ ಯೋಜನೆಗೆ ತಂದಿದ್ದಾರೆ. ಧರ್ಮಕ್ಕೆ ಈ ದೇಶದಲ್ಲಿ ಭಯ ಇದೆ ಎನ್ನುವುದು ಹಿಂದಿನಿಂದ ಏನು ನಡೆದುಕೊಂಡು ಬಂದಿದೆ, ಆ ಕಾಲವು ಬರುತ್ತಿದೆ. ಹೋರಾಟವನ್ನು ಮಾಡುತ್ತಿದ್ದಾರೆ, ಮಾನ್ಯ ದೇವೇಗೌಡರ ರಕ್ತ ಬತ್ತಿಹೋಯಿತು ಅಂದರಲ್ಲಾ ಇವತ್ತು ಅವರು ರೈತರ ಪರವಾಗಿಯೇ ಹೋರಾಟವನ್ನು ಮಾಡುತ್ತಿದ್ದಾರೆ, ಮುಂದೆಯೂ ಕೂಡ ಅವರು ರೈತರ ಪರವಾಗಿಯೇ ಹೋರಾಟವನ್ನು ಮಾಡುತ್ತಾರೆ. ಅವರು ರೈತರ ಪರವಾಗಿ ಇವತ್ತು ಹೋರಾಟ ಮಾಡುವುದರ ಬಗ್ಗೆ ಏನು ನಿನ್ನೆ ದಿನ ಚರ್ಚೆ ಮಾಡಿದ್ದೀರಲ್ಲಾ ಏನಾಯಿತು ದೇವೇಗೌಡರಿಗೆ? ಏನಾಯಿತು ಜನತಾದಳಕ್ಕೆ, ರೈತರ ಪರವಾಗಿ ಹೋರಾಟ ಮಾಡಿ ಕಣ್ಣೀರನ್ನು ಸುರಿಸಿ ಇಲ್ಲಿ ಬಂದು ಕುಳಿತಿದ್ದಿರೆಂದು ಹೇಳಿದ್ದೀರಿ, ಇಲ್ಲಿ ನಾವು ಯಾವ ರೀತಿಯಾಗಿ ತೀರ್ಮಾನವನ್ನು ಮಾಡಿದ್ದೇವೆ, ನಿಮಗೆ ಯಾವ ಆತಂಕ ಬೇಕಾಗಿಲ್ಲ. ಇವತ್ತು ಸ್ಕಿಲ್ ಇರಬಹುದು, ಮತ್ತೊಬ್ಬ ಇರಬಹುದು, ಯಾವುದೇ

ಕಂಪನಿ ಬಂದರೂ ಇವತ್ತು ಸರ್ಕಾರ ನೇರವಾಗಿ ಭೂಸ್ವಾಧೀನ ಮಾಡುವ ಪ್ರಶ್ನೆ ಇಲ್ಲ. ಇವತ್ತು ತೀರ್ಮಾನ ಮಾಡಿದ್ದೇವೆ. ಎಕರೆಗೆ 8 ಸಾವಿರ ರೂಪಾಯಿಗಳು ಏನು Square meter ಕೊಡಬೇಕೆಂದು ತೀರ್ಮಾನ ಮಾಡಿದ್ದೇವೆ 30% KIADB ಯಲ್ಲಿ ಬಿಡಿಎ ನಲ್ಲಿ 40% ಮುಂದಿನ ದಿನಗಳಲ್ಲಿ ರೈತರು ಇವತ್ತು ಭೂಸ್ವಾಧೀನಕ್ಕೆ ಒಳಗಾಗುವಂತಹ ಸಂದರ್ಭದಲ್ಲಿ ಇವತ್ತು ಆ ರೀತಿಯಾದ ಕಾರ್ಯಕ್ರಮವನ್ನು ಏನು ತಂದಿದ್ದೇವೆ ಅಧ್ಯಕ್ಷರೆ, ಇದೆಲ್ಲಾ ನಾವು ರೈತರ ನೋವನ್ನು ನೋಡಿಯೇ ತಂದಿರುವುದು. ಇವತ್ತು ಯಾವುದೇ ತೀರ್ಮಾನ ಮಾಡುವುದರಲ್ಲಿ ಏನು ಚಿಂತನೆಯನ್ನು ಯಾರು ಮಾಡಿರಲಿಲ್ಲ, ಇವತ್ತು ನಾವು ಏನು ಕೆಲಸ ಮಾಡಿದ್ದೇವೆ, ಇವತ್ತು ಯಾವುದೇ ಕಾರಣಕ್ಕೂ ಸದನದ ಸದಸ್ಯರಿಗೆ ಹೇಳುವುದಕ್ಕೆ ಬಯಸುತ್ತೇನೆ. ಇವತ್ತು ನಂದಗುಡಿ ಇರಬಹುದು ಅಥವಾ ಮಗದೊಂದು ಇರಬಹುದು. ಕೆಐಡಿಬಿಗೆ ನಾವು ಏನು ಸುತ್ತೋಲೆಯನ್ನು ಹೊರಡಿಸಿದ್ದೇವೆ. ಇವತ್ತು ಫಲವತ್ತಾದ ಭೂಮಿ ಇರಬಹುದು ಅಥವಾ ಮಗದೊಂದು ಇರಬಹುದು, ಮತ್ತು ಬಿಡದಿ ಹತ್ತಿರ, ಅದರ ಬಗ್ಗೆ ನಾನು ಹೇಳಲಿಲ್ಲ. ಇನ್ನೂ ಭೂಸ್ವಾಧೀನ ಮಾಡುವ ಬಗ್ಗೆ ನಾವು notificationನ್ನು issue ಮಾಡಿಲ್ಲ. ಕೊನೆಯ ಹಂತದಲ್ಲಿ ಒಬ್ಬರು final tender ಹಾಕಿದ್ದಾರೆ. 24 ಜನರು ಅರ್ಜಿಯನ್ನು ತೆಗೆದುಕೊಂಡು ಹೋಗಿದ್ದಾರೆ. ಕೆಐಎಡಿಬಿಯಿಂದ ನಾವು ಇನ್ನು ಯಾವುದೇ ಸೂಚನೆಯನ್ನು ಕೊಟ್ಟಿಲ್ಲ. ಅದನ್ನು ಮಾಡಬೇಕೆಂದು ಏನು ಇಂದಿನಂದ ಪ್ರಾರಂಭವಾಗಿದೆ ಇವತ್ತು ಮೊದಲನೆಯ ಹಂತದಲ್ಲಿ ಕೆಎಡಿಬಿಯಿಂದ ಅಂದರೆ ಬಿಎಂಆರ್‌ಡಿಯಿಂದ ರಾಮನಗರ ತಾಲ್ಲೂಕು ಬಿಡದಿಯಲ್ಲಿ ಏನು ಈ project ಬರಬೇಕೆಂದು ಹೇಳಿ ನಮ್ಮ ಅಧಿಕಾರಿಗಳು ಚಿಂತನೆಯನ್ನು ನಡೆಸಿದ್ದಾರೆ, ಇದರಲ್ಲಿ ರೈತರನ್ನು ಒಕ್ಕಲೆಬ್ಬಿಸಬೇಕೆಂದು ಅಲ್ಲ. ರೈತರು ಬಹಳ ಆಕ್ರೋಶದಲ್ಲಿ ಮಾತನಾಡುತ್ತಿದ್ದಾರೆಂದು ಹೇಳುತ್ತಿದ್ದರು. ನನಗೆ ಓಟು ಕೊಟ್ಟಿರುವಂತಹ ಪುಣ್ಯಾತ್ಮರು ಅವರು. ನಾನು ಅವರನ್ನು ಒಕ್ಕಲೆಬ್ಬಿಸಿ ಅವರ ಮನಸ್ಸಿಗೆ ನೋವು ಕೊಟ್ಟು ಅಲ್ಲಿ township ಮಾಡುವಂತಹ ಅವಶ್ಯಕತೆ ಇಲ್ಲ. ಇವತ್ತು ಅವರು ನನ್ನ ಹತ್ತಿರ ಚರ್ಚೆ ಮಾಡಿದ್ದಾರೆ. ಇವತ್ತು ಕೇವಲ ರಾಜಕೀಯಕ್ಕೋಸ್ಕರವಾಗಿ ಬೇರೆ ರೀತಿಯಲ್ಲಿ ಬಣ್ಣ ಕಟ್ಟಲಿಕ್ಕೆ ಹೋಗುವ ರೀತಿಯಲ್ಲಿ ಹೋರಾಟ ಮಾಡುವವರಿದ್ದರೆ ನೀವು ಹೋರಾಟವನ್ನು ಮಾಡಬಹುದು. ಏನು ಇವತ್ತು ನೀವು ಕಾಂಗ್ರೆಸ್ಸಿನ ಸತ್ಯಶೋಧನಾ ಸಮಿತಿ ವರದಿ ಮಾಡಿದ್ದೀರಿ. ಇವತ್ತು ನೀವು ವಿರೋಧಪಕ್ಷದಲ್ಲಿದ್ದೀರಿ, ನಿಮ್ಮ ಪಕ್ಷವನ್ನು ಅಧಿಕಾರಕ್ಕೆ ತರುವ ಬಗ್ಗೆ ನೀವು ಹೋರಾಟವನ್ನು ಮಾಡಲೇಬೇಕು. ನೀವು

ಇನ್ನು ಎರಡು ಸತ್ಯಶೋಧನಾ ಸಮಿತಿಯನ್ನು ಮಾಡಿ, ದೇಶದಲ್ಲಿ ನಡೆಯುತ್ತಿದೆಯಲ್ಲಾ ಇಲ್ಲಿಂದ ಅಲ್ಲಿಗೂ ಸಹ ಕಳುಹಿಸಿ. ಸತ್ಯಶೋಧನಾ ಸಮಿತಿಯಲ್ಲಿರುವ ಸದಸ್ಯರು ಯಾರ್ಯಾರು ಇದ್ದಾರೆಂದು ನಾನು ನೋಡಿದ್ದೇನೆ. ದೇಶದಲ್ಲಿ ಬೇರೆ ಬೇರೆ ಕಡೆಯಲ್ಲಿ ಸ್ವೇಚ್ಛಾಚಾರವಾಗಿ ನಡೆಯುತ್ತಿದೆಯಲ್ಲಾ, 44 ಸಾವಿರ ಎಕರೆ ಎಲ್ಲವನ್ನು ನಾನು ಹೇಳಿದ್ದೇನಲ್ಲಾ, ಅಲ್ಲಿ ಹೋಗಿ ಹೋರಾಟವನ್ನು ಪ್ರಾರಂಭ ಮಾಡಿಬಿಟ್ಟರೆ; ರೈತರನ್ನು ಉಳಿಸುವುದಕ್ಕೆ ಈಗಲಾದರೂ ಒಂದು ದೊಡ್ಡ ಹೋರಾಟವನ್ನು ಏನು ಪ್ರಾರಂಭವಾಗಿದೆ, ನಮ್ಮ ಒಂದು ಕಾಣಿಕೆಯನ್ನು ಸಲ್ಲಿಸುವುದರ ಮುಖಾಂತರ ಇವತ್ತು ಈ ರೈತರನ್ನು ಉಳಿಸಬೇಕೆಂದು ನಾನು ವಿಶೇಷವಾಗಿ ನಿಮ್ಮಲ್ಲಿ ಮನವಿಯನ್ನು ಮಾಡುತ್ತೇನೆ. ಇನ್ನು ನಿಮ್ಮ ಹೋರಾಟವನ್ನು ಮಾಡಿ, ನಾವು ನಮ್ಮ ಕೆಲಸ ಏನು ಮಾಡಬೇಕು ಅದನ್ನು ನಾವು ಮಾಡುತ್ತೇವೆ. ಇವತ್ತು ಈ ವಿಷಯದಲ್ಲಿ ರೈತರನ್ನು ಯಾವುದೋ township ಬರಬೇಕೆಂದೋ ಇಲ್ಲಾ ಯಾವುದೋ SEZ ತರಬೇಕೆಂದು ಬಲವಂತವಾಗಿ ಒಕ್ಕಲೆಬ್ಬಿಸುವಂತಹ ಕೆಲಸವನ್ನು ಮಾಡುವುದರ ಬಗ್ಗೆ ನಾವು ಸಿದ್ದರಿಲ್ಲ. ನಾವು ರೈತರ ಮನವನ್ನು ಒಲಿಸುವುದಕ್ಕೆ ಪ್ರಯತ್ನ ಪಡುತ್ತೇವೆ. ರೈತರು ಒಪ್ಪದೇ ಇದ್ದಾಗ? ನಾವು ಮೊನ್ನೆ ನೋಡಿದ್ದೇವೆ. ಆಂಧ್ರದಲ್ಲಿ ಆದಂತಹ ಗೋಲಿಬಾರ್ ಇರಬಹುದು, ವೆಸ್ಟ್ ಬೆಂಗಾಲ್‌ನಲ್ಲಿ ಆಗಿರುವಂತಹದ್ದು ಇರಬಹುದು, ಇದನ್ನು ನಾನು ಗಮನಿಸಿದ್ದೇನೆ. ಇವತ್ತು ನಾವು ರೈತರ ಹೆಸರಿನಲ್ಲಿ ಬರುತ್ತೇವೆ. ರೈತರ ಬಗ್ಗೆ ನಾವು ಯಾವ ರೀತಿಯಾಗಿ ಕೆಲಸವನ್ನು ಮಾಡಬೇಕು. ರೈತರ ಬಗ್ಗೆ ಏನು ಕಾರ್ಯಕ್ರಮವನ್ನು ಕೊಡಬೇಕು. ಕೃಷಿ ವಿಶೇಷ ವಲಯ ತನ್ನಿ ಎಂದು ಮಾನ್ಯ ಶ್ರೀನವಾಸಗೌಡರು ಹೇಳುತ್ತಿದ್ದರು. ನಮ್ಮ ಕೈಯಲ್ಲಿಯೇ ಪವರ್ ಇರುವುದು, ನಮ್ಮ ಕೈಯಲ್ಲಿ ಏನು ಇಲ್ಲ, ನೀವು ಅಲ್ಲಿಂದ ಆದೇಶವನ್ನು ಹೊರಡಿಸಿದರೆ ನಾವು ಇಲ್ಲಿ implement ಮಾಡುವ ಬಗ್ಗೆ ಪ್ರಾಮಾಣಿಕವಾಗಿ ಸಿದ್ಧರಿದ್ದೇವೆ.

ಶ್ರೀ ಕೆ. ಶ್ರೀನಿವಾಸ ಗೌಡ: ನೀವು ಇಂತಹ ತೀರ್ಮಾನಗಳನ್ನು ಇಲ್ಲಿಂದ ತೆಗೆದುಕೊಂಡು ಅಲ್ಲಿಗೆ ಕಳುಹಿಸಬೇಕು.

ಶ್ರೀ ಹೆಚ್.ಡಿ.ಕುಮಾರಸ್ವಾಮಿ: ರೈತರ ಪರವಾಗಿ ವಿಶೇಷವಾದ ಕೃಷಿ ವಲಯವನ್ನು ತನ್ನಿ ಎಂದು ಬೇಕಾದರೆ ಸದನದಿಂದ ಒಂದು resolution ಮಾಡಿ ಅಲ್ಲಿಗೆ ಕಳುಹಿಸಿಬಿಡೋಣ. ಇವತ್ತು ಸದನದ ಸದಸ್ಯರಲ್ಲಿ ಮತ್ತು ಹೊರಗಡೆ ಏನು ಪ್ರಚಾರ ನಡೆಯುತ್ತಿದೆ, ರೈತರನ್ನು ಏನು ಒಕ್ಕಲೆಬ್ಬಿಸುವುದಕ್ಕೆ ರೈತರ ಮಾರಣ ಹೋಮ ಮಾಡುವುದಕ್ಕೆ ಸ್ವೇಚ್ಛಾಚಾರವಾಗಿ, ಮನಸೋಇಚ್ಚೆ

ಈ ಸರ್ಕಾರ ತೀರ್ಮಾನಗಳನ್ನು ಮಾಡುಬಿಟ್ಟಿದ್ದಾರೆಂದು ಹೇಳುತ್ತಿದ್ದಾರೆ. ಇವೆಲ್ಲವೂ ಸತ್ಯಕ್ಕೆ ದೂರವಾದುದು, ಈ ಸರ್ಕಾರ ಎಲ್ಲಿಯವರೆಗೆ ಅಧಿಕಾರದಲ್ಲಿರುತ್ತದೆಯೋ, ಈ ಸರ್ಕಾರದಿಂದ ಯಾವುದೇ ಕಾರಣಕ್ಕೂ ರೈತರಿಗೆ ನೋವು ಕೊಟ್ಟು ಯಾವುದೇ ನಿರ್ಣಯವನ್ನು ಮಾಡತಕ್ಕಂತಹ ಪ್ರಶ್ನೆ ಇಲ್ಲವೆಂದು ಈ ಸದನದ ಸದಸ್ಯರ ಗಮನಕ್ಕೆ ತಂದು, ಇವತ್ತು ಈ ಒಂದು ವಿಷಯದಲ್ಲಿ ನನಗೆ ಮಾತನಾಡುವುದಕ್ಕೆ ತಾವು ಏನು ಅವಕಾಶವನ್ನು ಕೊಟ್ಟಿದ್ದೀರಿ ಉತ್ತರವನ್ನು ಕೊಡುವುದಕ್ಕೆ ಮತ್ತು ಇವತ್ತು ಸದಸ್ಯರುಗಳು ತಾವು ಏನು ಎಲ್ಲಾ ಕುಳಿತುಕೊಂಡು ಕೇಳಿದ್ದೀರಿ, ಇವತ್ತು ಎಲ್ಲರಿಗೂ ನನ್ನ ವಂದನೆಗಳನ್ನು ಸಲ್ಲಿಸುತ್ತೇನೆ.

ಶ್ರೀ ಎನ್.ಧರ್ಮಸಿಂಗ್(ವಿರೋಧಪಕ್ಷದ ನಾಯಕರು): ಮಾನ್ಯ ಅಧ್ಯಕ್ಷರೆ, ಇವತ್ತು ಏಕೋ ಮಾನ್ಯ ಮುಖ್ಯಮಂತ್ರಿಗಳು ಸ್ವಲ್ಪ ಬಹಳ emotional ಆಗಿ ಮಾತನಾಡುತ್ತಿದ್ದಾರೆ. Planning Commission, ಕೇಂದ್ರಸರ್ಕಾರ ಅದರ ಒಪ್ಪಿಗೆ ನನ್ನದೇನು ಅಲ್ಲವೆನ್ನುವಂತಹ ಮಾತನ್ನು ಹೇಳಿದ್ದಾರೆ. SEZ ಬಗ್ಗೆ ನಮ್ಮದೇನು ಅಭ್ಯಂತರವಿಲ್ಲವೆಂದು ನಾವು ಈಗಾಗಲೇ ವ್ಯಕ್ತ ಮಾಡಿದ್ದೇವೆ. ಕೈಗಾರಿಕೆಗಳು ಬೆಳೆಯಬೇಕು, ಮತ್ತು ವಿಶೇಷವಾಗಿ ಬೆಂಗಳೂರಿನಂತಹ ನಗರದಲ್ಲಿ ಬೆಳೆಯತಕ್ಕಂತಹ ವಿಚಾರದಲ್ಲಿ , ಇಲ್ಲಿ ಬಂದಿರುವಂತಹ ವಿಚಾರವೇನೆಂದರೆ, ನಂದಗುಡಿಯಲ್ಲಿ SEZ ಮಾಡತಕ್ಕಂತಹ ರೀತಿಯಲ್ಲಿ ಫಲವತ್ತಾದ ಜಮೀನುಗಳನ್ನು ಇವತ್ತು ಅತಿಕ್ರಮ ಏನು ತಾವು ಮಾಡಿದ್ದೀರಿ, ಅದರ ಬಗ್ಗೆ ನಾವು ಪ್ರಸ್ತಾಪ ಮಾಡಿದ್ದೇವೆ, ಅದರ ಬಗ್ಗೆ ತಾವು ಏನು ಹೇಳಲಿಲ್ಲ. ರಾಮನಗರದ ಬಗ್ಗೆ ತಾವು ಹೇಳಿದ್ದೀರಿ, 13 ಸಾವಿರ ಎಕರೆ ತಾವು ಮಾಡಿದ್ದೀರಿ, ಯಾವ ರೀತಿಯಾಗಿ ಬಿಡದಿ ಟೌನ್‌ಶಿಪ್ ಬಗ್ಗೆ ಹೇಳಿದ್ದೀರಿ. ಗೋಕುಲ್‌ದಾಸ್ ಬಗ್ಗೆ ಹೇಳಿದ್ದೀರಿ, ನಾನು ನಿನ್ನೆಯ ದಿನ ಯಾವ್ಯಾವ ಕಂಪನಿಗಳಿಗೆ ಎಷ್ಟು ಸಾವಿರ ಎಕರೆ ಜಮೀನುಗಳನ್ನು ತಾವು ಕೊಟ್ಟಿರುವ ಬಗ್ಗೆ ನಾವು ಪ್ರಸ್ತಾಪ ಮಾಡಿದ್ದೇವೆ. ಇವತ್ತು ನಂದಗುಡಿಯಲ್ಲಿ ಆಗುವಂತಹ ಏನು ಪ್ರಸ್ತಾಪವಿದೆ. ಇವತ್ತು ours is a national party ನೀವು ಅಷ್ಟು ಹಗುರವಾಗಿ ಮಾತನಾಡಬಾರದು. ನಾವು ಮಾತನಾಡುತ್ತೇವೆ. ಇವತ್ತು ಸರ್ಕಾರ ಮಾಡಿದಂತಹ ಕೆಲಸ ಎಲ್ಲಿ ಜನಾಭಿಪ್ರಾಯಗಳು ಬರುತ್ತದೆ. It is a duty to constitute a Committee ಅದರಲ್ಲೂ ಕೂಡ ಹಿರಿಯ ಸಚಿವರು ಆ ದಿಸೆಯಲ್ಲಿ ಮಾತನಾಡಿದ್ದಾರೆ. ಎಲ್ಲರೂ ಕೂಡ ಅಲ್ಲಿಗೆ ಹೋಗಿ ಬಂದಿದ್ದಾರೆ. ನಾವು ಒಂದು ಪುಸ್ತಕವನ್ನು ಸಹ ಬಿಡುಗಡೆ ಮಾಡಿದ್ದೇವೆ. ಇದರ ಬಗ್ಗೆ ತಾವು ಹಗುರವಾಗಿ ಮಾತನಾಡಬಾರದು. ಏಕೆಂದರೆ

agitation ಮಾಡುವಂತಹದ್ದು ಜನರ ಪರವಾಗಿ, ನಾವೇನು ಅಂದರೆ ಪಕ್ಷದ ಪರವಾಗಿ ಮಾಡುತ್ತೇವೆ. ತಾವು ಈ ರಾಜ್ಯದ ಮುಖ್ಯಮಂತ್ರಿಯಾಗಿ ಇವತ್ತು SKIL Companyಗೆ ಹಣಕೊಡಲು ಹೊರಟಿದ್ದೀರಿ. ಹಣ ಕೊಡಲು ಹೊರಟಿದ್ದೀರಿ. ಅಲ್ಲಿ 1500 ಕೋಟಿ ಬೇಕಾಗುತ್ತದೆ. ಅದರ ಮೇಲೆ 6 ಕೋಟಿ ರೂ.ಗಳು ಸಹ ಇಲ್ಲ. ಯಾವುದರ ಮೇಲೆ ಅವರಿಗೆ ಕೊಡುವುದಕ್ಕೆ ಹೊರಟಿದ್ದೀರಿ. ಬಹಳಷ್ಟು ಜನರಿಗೆ ಇವತ್ತಿನ ದಿವಸ ಭೂಮಿಯನ್ನು ಕೊಡುವಂತಹ ರೀತಿಯಲ್ಲಿ ಅದರ ಬಗ್ಗೆ ಮಾನ್ಯ ಸಿದ್ದರಾಮಯ್ಯನವರು ಕೂಡ ಹೇಳಿದ್ದಾರೆ. ಇವತ್ತು ನೀವು ಅಲ್ಲಿ ಫಲವತ್ತಾದ ಜಮೀನುಗಳನ್ನು ಈ ಬಗ್ಗೆ ಸುಪ್ರಿಂಕೋರ್ಟಿನ ಆಜ್ಞೆಯೂ ಕೂಡ ಇದೆ. ರೈತರ ಜೊತೆಯಲ್ಲಿ ಸಮಾಲೋಚನೆಯನ್ನು ಮಾಡಿ consent ತೆಗೆದುಕೊಂಡು ಇವತ್ತು ತಾವು ಸಾರಾ ಸಗಟಾಗಿ ಹೇಳಬೇಕು. ನಂದಗುಡಿಯಲ್ಲಿ ನಡೆಯುವಂತಹ ಚಳುವಳಿ ಏನು ಇದೆ, ಅಲ್ಲಿರುಂತಹ ಭೂಮಿಯನ್ನು acquire ಮಾಡುವುದಿಲ್ಲ. ಇವತ್ತು ಪ್ರಸ್ತಾವನೆಗಳು ಬಹಳಷ್ಟು ಇದೆ. 33 SEZ ಬಗ್ಗೆ ಪ್ರಸ್ತಾವನೆಯನ್ನು ತಾವು ಕೇಂದ್ರ ಸರ್ಕಾರಕ್ಕೆ ಕಳುಹಿಸಿದ್ದೀರಿ. ಅದರಲ್ಲಿ ಅವರು 9ಕ್ಕೆ approve ಮಾಡಿದ್ದಾರೆ. ಇವತ್ತು ನಂದಗುಡಿಯಲ್ಲಿ acquire ಮಾಡುವಂತಹ ಜಮೀನುಗಳ ಬಗ್ಗೆ ರೈತನಿಗೆ ಏನು ಅನ್ಯಾಯವಾಗುತ್ತಿದೆ ಆ ಬಗ್ಗೆ ಇವತ್ತು ನಾವು ನಮ್ಮ ಪಕ್ಷದ ವತಿಯಿಂದ ಪ್ರಧಾನಮಂತ್ರಿಯವರನ್ನು ಭೇಟಿಯಾಗುತ್ತೇವೆ, ಅಲ್ಲಿ ಕೈಗಾರಿಕಾ ಮಂತ್ರಿಯವರನ್ನು ಸಹ ಭೇಟಿಯಾಗುತ್ತೇವೆ. ಇದರಲ್ಲಿ ತಾವು ಅವಕಾಶವನ್ನು ಕೊಡಬಾರದು ಎಂದು ನಾವು ಹೇಳುತ್ತಿದ್ದೇವೆ. ಮಾನ್ಯ ಶ್ರೀರಾಮರೆಡ್ಡಿಯವರು ಕೂಡ ಸಾಕಷ್ಟು ಅದರ ಬಗ್ಗೆ ವಿವರವಾಗಿ ಹೇಳಿದ್ದಾರೆ. ತಾವು ಇವತ್ತು ಬೇರೆ ಕಡೆಗೆ ಡಿವಿಯೇಟ್ ಮಾಡಿ ಯಾರ್ಯಾರು ಏನೇನೋ ಮಾಡಿದ್ದಾರೆ, ನೀವು ಯಾಕೋ ಸ್ವಲ್ಪ ಚೆನ್ನಾಗಿದ್ರಿ, ಹೋಗುವಂತಹ ಕಾಲದಲ್ಲಿ ಯಾರೋ ಒಂದು ಆ ತರಹದ ವಿಚಾರವನ್ನು ಪ್ರಕಟ ಮಾಡಿದ್ದಾರೆ. ರಾಜ್ಯದ ಮುಖ್ಯಮಂತ್ರಿಯಾಗಿ you have to be very rational. ನಮಗೆ ಸಮಸ್ಯೆಗಳನ್ನು ಕೇಳುವಂತಹ ಅಧಿಕಾರವಿದೆ. ನಾವು ಕೇಳಿದ್ದೇವೆ. ಇವತ್ತು ನಂದಗುಡಿಯಲ್ಲಿರುವಂತಹ ಸಮಸ್ಯೆಗಳ ಬಗ್ಗೆ ತಾವು ನೇರವಾಗಿ ಉತ್ತರವನ್ನು ಕೊಡಬೇಕು ಅದನ್ನು ತಾವು ಕೊಟ್ಟಿಲ್ಲ. ಇವತ್ತು ನಾವು ಏನು ಕೇಳುತ್ತಿದ್ದೇವೆಂದರೆ, ಇದರ ಬಗ್ಗೆ ನಮ್ಮ ಸದಸ್ಯರುಗಳು clarification ನ್ನು ಕೇಳುತ್ತಾರೆ. ಈ ಬಗ್ಗೆ ಒಂದು ಸದನದ ಸಮಿತಿಯನ್ನು ಮಾಡಿ, ಸದನ ಸಮಿತಿ ಅಲ್ಲಿಗೆ ಖುದ್ದಾಗಿ ಹೋಗಲಿ, ನಾವು ಬೇರೆ enquiry ಗಳನ್ನು ಕೇಳುತ್ತಿಲ್ಲ. ನಮ್ಮ ಪಕ್ಷದವರಲ್ಲದೆ ನಾವು ಕೂಡ ಅಲ್ಲಿಗೆ ಹೋಗುತ್ತೇವೆ. ಬೇಕಾದರೆ ತಾವು

ಕೂಡ ಬನ್ನಿ. ಅಲ್ಲಿರುವಂತಹ ರೈತರ ಅರಿವು ಏನದೆ, ಅದನ್ನು ನೋಡಿ ಸರ್ಕಾರ ತೀರ್ಮಾನವನ್ನು ತೆಗೆದುಕೊಳ್ಳಬೇಕು. ಒಂದು ಸದನ ಸಮಿತಿ ಮಾಡುವ ಬಗ್ಗೆ ಸೂಕ್ತವಾದಂತಹ ತೀರ್ಮಾನವನ್ನು ತೆಗೆದುಕೊಳ್ಳಬೇಕೆಂಬ ಮಾತನ್ನು ಕೂಡ ಹೇಳುತ್ತೇನೆ.

ಶ್ರೀ ಜೆ.ಸಿ.ಮಾಧುಸ್ವಾಮಿ: ಮಾನ್ಯ ಅಧ್ಯಕ್ಷರೆ, ನಂದಗುಡಿಯಲ್ಲಿ ರೈತರ consent ಇಲ್ಲದೇ ಜಮೀನುಗಳನ್ನು ತೆಗೆದುಕೊಳ್ಳುವುದಿಲ್ಲವೆಂದು ಹೇಳಿರುವುದನ್ನು ನಾನು ಸ್ವಾಗತಿಸುತ್ತೇನೆ. ಈಗಾಗಲೇ 4700 ಎಕರೆ ಏನು ಇದೆ, ವಾಸ್ತವಿಕವಾಗಿ ಸರ್ಕಾರಿ ಜಾಗ ಅಷ್ಟು ಇಲ್ಲವೆಂದು ಒಂದು ವಾಧ ಇದೆ. ಇನ್ನೊಂದು ಆ ಜಮೀನಿನಲ್ಲಿ ಬಹಳ ಜನರು ಬಗರ್‌ಹುಕುಂ ಮಾಡಿಕೊಂಡಿದ್ದಾರೆ. ಬಗರ್‌ಹುಕುಂ ಅರ್ಜಿಗಳು ವಿಲೇ ಆಗಲಿಲ್ಲ. ಅದು ಯಾವುದನ್ನು ಅಧಿಕಾರಿಗಳು considarationಗೆ ತೆಗದುಕೊಳ್ಳುವುದಿಲ್ಲ. ಅದು ಅಷ್ಟು Government land ಎಂದು ಹೇಳಿ, 4700 ಎಕರೆಯನ್ನು ನಿಮಗೆ ಮಾಹಿತಿಯನ್ನು ಕೊಟ್ಟಿದ್ದಾರೆ. ಅದನ್ನು ತಾವು ಏನಾದರೂ ಮತ್ತೊಂದು ಸಾರಿ ಪರಿಶೀಲನೆಯನ್ನು ಮಾಡುತ್ತೀರಾ? ಎರಡನೆಯದಾಗಿ ಅಲ್ಲಿ 5000 ಎಕರೆಗಿಂತ Industrial activity ಮಾಡುವುದಕ್ಕಾಗುವುದಿಲ್ಲ, ಅದಕ್ಕಾಗಿ ಅಷ್ಟಕ್ಕೆ ಸೀಮಿತವಾಗಿ ಮಾಡಿ. ಹಿಂದುಳಿದ ವರ್ಗಗಳ ವಲಯಗಳು ಏನದೆ ಕನಷ್ಟ ಕೆಜಿಎಫ್, ಗುಲ್ಬರ್ಗಾ, ಬಿಜಾಪುರ, ತುಮಕೂರಿಗೋ SEZ ನ್ನು shift ಮಾಡುತ್ತೀರಾ ಎಂದು ಕೇಳುತ್ತಿದ್ದೇನೆ.

ಶ್ರೀ ಆರ್.ವಿ.ದೇಶಪಾಂಡೆ: ಮಾನ್ಯ ಅಧ್ಯಕ್ಷರೆ, SEZ ಬಗ್ಗೆ ಕೆಲವು ಆಪಾದನೆಗಳು ಏನು ಆದವು, ಅದರಲ್ಲಿ ಕೆಲವು ವಿಚಾರಗಳ ಬಗ್ಗೆ ಉತ್ತರವನ್ನು ಕೊಡುವ ಬಗ್ಗೆ ಪ್ರಯತ್ನ ಮಾಡಿದ್ದೇನೆ. ಇದರ ಬಗ್ಗೆ ನಾನು ಮುಖ್ಯವಾಗಿ ಸಲಹೆಯನ್ನು ಕೊಟ್ಟಿದ್ದೇನೆ. SEZ ಆಗಬೇಕು, ಅದು ಆಗಬಾರದು ಎಂದು ಯಾರೂ ಹೇಳಲಿಲ್ಲ. ನಾವು ರಾಷ್ಟ್ರೀಯ ಪಕ್ಷದಲ್ಲಿದ್ದೇವೆ, SEZ Central Act ಬಗ್ಗೆ ಅದು ಆಗಬೇಕೆಂದು ಹೇಳಿದ್ದೇವೆ. ಇದು ಆಗಬೇಕಾದರೆ ಮಾನ್ಯ ಸದಸ್ಯರಾದ ಶ್ರೀ ಮಾಧುಸ್ವಾಮಿಯವರು ಹೇಳಿದ ಹಾಗೆ, ನಾನು ಹಾಸನಕ್ಕೆ recommend ಮಾಡಿದ್ದೇನೆ. ಮಂಗಳೂರಿನಲ್ಲಿ SEZ growth ಗೆ ಜಾಗ ಇತ್ತು, ನಾನು recommend ಮಾಡಿ ಎಂದು ಹೇಳಿದ್ದೇನೆ. ಜಮೀನುಗಳನ್ನು ಕೊಡುವಾಗ land acquire ಮಾಡಿ ಎಂದು ಹೇಳಿದ್ದೇವೆ. ಅದರ ಪ್ರಕಾರ ತಾವು land acquire ಮಾಡುವುದಿಲ್ಲವೆಂದು ಹೇಳಿದ್ದೀರಿ. ಕೇಂದ್ರ ಸರ್ಕಾರದವರು ಇದರ ಬಗ್ಗೆ ಒಂದು ಸಲಹೆಯನ್ನು ಕೊಟ್ಟಿದ್ದಾರೆ. SEZನಲ್ಲಿ ಯಾವುದೋ landನ್ನು acquire ಮಾಡಬಾರದು ಅದನ್ನು consentನಂದ ಮಾಡಬೇಕೆಂದು ಕೇಂದ್ರ

ಸರ್ಕಾರದವರು ಹೇಳಿದ್ದಾರೆ. ನಂದಗುಡಿಯಲ್ಲಿ ಏನಿದೆ ಅದು fertile land. ಎರಡನೆಯದಾಗಿ ತಾವು ಹೋಸಕೋಟೆಯಲ್ಲಿ township ಮಾಡುವ ಬಗ್ಗೆ ಚಿಂತನೆಯನ್ನು ಮಾಡುತ್ತಿದ್ದೀರಿ, ಆ land ಮತ್ತು ನಿಮ್ಮ SEZ land ಅದು common. ಅದರಲ್ಲಿ ಅಧಿಕಾರಿಗಳು ಮತ್ತು ಸರ್ಕಾರದಲ್ಲಿ ಸ್ವಲ್ಪ ಗೊಂದಲವಿದೆ. ಯಾವ land ಎಂದು ಅವರಿಗೆ ಗೊತ್ತಿಲ್ಲ. ಇದಕ್ಕೂ ತಮ್ಮಿಂದ ಉತ್ತರ ಬಂದಿಲ್ಲ. ರಾಜ್ಯದಲ್ಲಿ ಬಹಳ ಕಡೆ SEZ ಬಂದಿದೆ. ಅದನ್ನು ನಾವು ಒಪ್ಪಿಕೊಂಡಿದ್ದೇವೆ. ಬೆಂಗಳೂರು ಸುತ್ತಮುತ್ತ SEZ ಏತಕ್ಕಾಗಿ ಬರಬಾರದು ಎಂದರೆ ಇಲ್ಲಿ congestion, traffic problem, pollutiom problem, power problem, drinking water problem ಇದೆ ಹಾಗಾಗಿ ನಾವು ಸಲಹೆಗಳನ್ನು ಕೊಟ್ಟಿದ್ದೇವೆ. ಈ ಬಗ್ಗೆ ತಮ್ಮಿಂದ ಉತ್ತರ ಸಿಕ್ಕಿಲ್ಲ. 17–03–2007ರಲ್ಲಿ ತಾವು ಕೆಐಡಿಬಿಗೆ ಒಂದು ಸುತ್ತೋಲೆಯನ್ನು ಕಳುಹಿಸಿದ್ದೀರಿ. ಸ್ಮಶಾನಗಳು, ಪ್ಲೇಗ್ರೌಂಡ್‌ಗಳು, ಟೆಂಪಲ್‌ಗಳು, ಗೋಮಾಳ್ ಲ್ಯಾಂಡ್ acquire ಮಾಡಬಾರದು ಎಂದು ಇದೆ. ತಾವು circularನ್ನು ಕಳುಹಿಸಿದ್ದಿರಿ ಸಂತೋಷ. Land acquisition Act pre-supposes it, KAIDB Act pre-supposes it ಇದನ್ನು ಮಾಡುವಾಗ acquisition ಬಗ್ಗೆ ವಿರೋಧ ಬಂದಾಗ ನಾನು ಸಹ action ತೆಗೆದುಕೊಂಡಿದ್ದೇನೆ.

ಶ್ರೀ ಕಟ್ಟಾಸುಬ್ರಮ್ಮಣ್ಯ ನಾಯ್ಡು: ಮಾನ್ಯ ಅಧ್ಯಕ್ಷರೆ, ಒಂದು ನಿಮಿಷ ನಾನು ಈ ಬಗ್ಗೆ ಹೇಳುತ್ತೇನೆ. ಏತಕ್ಕಾಗಿ ಮಾಡಿದ್ದೇವೆಂಬ ಬಗ್ಗೆ ನಾವು ವಿವರವನ್ನು ಕೊಡುತ್ತೇವೆ. ಇದು 1987 ರಿಂದ 96–97.....

ಶ್ರೀ ಆರ್.ವಿ.ದೇಶಪಾಂಡೆ: ಮಾನ್ಯ ಕೈಗಾರಿಕಾ ಸಚಿವರೆ ನಾನು criticize ಮಾಡಿಲ್ಲ. Land Acquistion Act ಇದೆ. KIADB Act 1966 ಇದೆ.

ಶ್ರೀ ಕಟ್ಟಾಸುಬ್ರಮ್ಮಣ್ಯ ನಾಯ್ಡು: ಏತಕ್ಕಾಗಿ ಅವಶ್ಯಕತೆ ಬಂತು ಎಂದು. ಹೇಳಬೇಕಲ್ಲ.

ಶ್ರೀ ಆರ್.ವಿ.ದೇಶಪಾಂಡೆ: ಆಯಿತು ತಾವು ಹೇಳಿ ಸಾರ್. ನಾನು ತಾವು circularನ್ನು ಕಳುಹಿಸಿದ್ದೀರಿ ಸಂತೋಷವೆಂದು ಹೇಳಿದ್ದೇನೆ. ನಾನು ಅದನ್ನು ವಿರೋಧ ಮಾಡಿಲ್ಲ. ಇಂತವುಗಳನ್ನು ಮಾಡಬಾರದು ಎಂದು ಹೇಳಿದ್ದೇನೆ. Act pre-supposes it. ಈ ಬಗ್ಗೆ ಒಂದೆರಡರಲ್ಲಿ ಕ್ರಮವನ್ನು ತೆಗೆದುಕೊಂಡಿದ್ದೇನೆ. ನಾವು ಈ ಸರ್ಕಾರವಿದ್ದಾಗ ನಾವು ಸಹ landನ್ನು acquire ಮಾಡಿದ್ದೇವೆ. ತಾವು ಒಂದು ಕೆಲಸವನ್ನು ಮಾಡಬೇಕು. ಕೈಗಾರಿಕೆಗಳ ಬಗ್ಗೆ land acquire ಮಾಡಿರುವ ಬಗ್ಗೆ ಒಂದು ಪಟ್ಟಿಯನ್ನು ಮಾಡಿ ಎಂದು ನಿಮ್ಮ

ಅಧಿಕಾರಿಗಳಿಗೆ ಹೇಳಿ. ಇದರ ಬಗ್ಗೆ ಮುಂದಿನ ಸದನದಲ್ಲಿ ವಿವರಗಳನ್ನು ಇಡಿ. ನೀವು ನೋಡಬಹುದು. 95–98% consent award ಆಗಿದೆ. KIADBಯಲ್ಲಿ consent award ಗೆ ಒಂದು provision ಇದೆ. ತಾವು ಕೈಗಾರಿಕೆಯ ಬಗ್ಗೆ ಪ್ರಸ್ತಾಪ ಮಾಡಿದ್ದೀರಿ.

ಶ್ರೀ ಡಿ.ಟಿ.ಜಯಕುಮಾರ್: ಯಾವಾಗ consent award ಆಗಿದೆ.

(ಗೊಂದಲ)

ಶ್ರೀ ಆರ್.ವಿ.ದೇಶಪಾಂಡೆ: ಮಾನ್ಯ ಜಯಕುಮಾರ್‌ರವರೆ ಸಚಿವರು ಈ ಬಗ್ಗೆ ಉತ್ತರವನ್ನು ಕೊಡುತ್ತಾರೆ. 95%land ಕೊಟ್ಟಿದ್ದಾರೆ. 70–80% contest, 5–6 ಎಕರೆ ಅದು ಕೈಗಾರಿಕೆಗಳಿಗೆ ಇರಬಹುದು, ಹಾಗಾಗಿ ರೈತರು ಸ್ವಂತ ಕೃಷಿಯಿಂದ ಜಮೀನ ಕೊಟ್ಟು, ಒಂದು ಕಡೆ SEZ ಆಗುವುದಿದ್ದರೆ ನಾವು ಏನು ಮಾಡಲಿಕ್ಕಾಗುವುದಿಲ್ಲ. ಆದರೆ ಬೆಂಗಳೂರು ಸುತ್ತಮುತ್ತ ಅದಷ್ಟು ಮಟ್ಟಿಗೆ ಏಕೆ ಮಾಡಬಾರದು ಎಂದರೆ ಇಂತಹ problem ಗಳು ಇದೆ. ಇದರ ಬಗ್ಗೆ ತಮ್ಮ ಕಡೆಯಿಂದ ಉತ್ತರವನ್ನು ಅಪೇಕ್ಷೆ ಮಾಡುತ್ತೇವೆ.

ಶ್ರೀ ಎಸ್.ಸಿದ್ಧರಾಮಯ್ಯ(ಚಾಮುಂಡೇಶ್ವರಿ): ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಟ್ಟಿದ್ದಾರೆ. ನೀವು ಉತ್ತರ ಕೊಡುವಾಗ ನೀವು ಹೇಳಿ, ಈಗ ಮಧ್ಯದಲ್ಲಿ clarification ಕೇಳುವಾಗ ಮಾತನಾಡಿದರೆ ಹೇಗೆ ನಾಯ್ದುರವರೇ? ಈಗ ಮಾನ್ಯ ಅಧ್ಯಕ್ಷರೇ, ಬಹಳ ಮುಖ್ಯವಾಗಿ ಪ್ರಸ್ತಾಪ ಮಾಡಿದದ್ದು, ಬೆಂಗಳೂರು ಸುತ್ತಮುತ್ತ ಏನು acquire ಮಾಡಲಿಕ್ಕೆ ಈ ಸರ್ಕಾರ ಏನು ಆಲೋಚನೆ ಮಾಡಿದೆ ಎಂದು ಹೇಳಬೇಕು. ಎಲ್ಲಿಯೂ ಕೂಡ ನಾನು ತಾವು ಅಕ್ವೈರ್ ಮಾಡಿದ್ದೀರಿ ಎಂಬ ಪದವನ್ನು ಉಪಯೋಗಿಸಿಲ್ಲ. I have not said it. Acquire ಮಾಡಲಿಕ್ಕೆ ಈಗಾಗಲೇ ನೀವು ಚಿಂತನೆ ನಡೆಸಿದ್ದೀರಿ. There are proposals ಎಂದು ಹೇಳಿದ್ದೀರಿ. ನಾವು ಅಕ್ವೈರ್ ಮಾಡಿಲ್ಲ, ಇನ್ನೂ ಯೋಚನೆ ಮಾಡಿದ್ದೇವೆ, ಅದನ್ನು ಅವರು ಒಪ್ಪಿಕೊಂಡಿದ್ದಾರೆ. ನಾವು, ಬೆಂಗಳೂರು ಸುತ್ತಮುತ್ತ ನೀವು ಮಾಡಲಿಕ್ಕೆ ಹೋಗಬೇಡಿ ಎಂದು ಮುಖ್ಯವಾಗಿ ಏನು ವಾದ ಮಾಡಿದ್ದೆವು. ಈಗಾಗಲೇ Greater Bangalore ಎಂದು ಮಾಡಿಬಿಟ್ಟಿದ್ದೀರಿ, ಅದರಿಂದ 226 ಚದರ ಕಿ.ಮೀ. ಇದದ್ದು 800 ಚದರ ಕಿ.ಮೀ. ಆಗಿದೆ. Tribunel Order ಪ್ರಕಾರ ನಮಗೆ ಕುಡಿಯಲಿಕ್ಕೆ ನೀರು 1.75 ಟಿ.ಎಂ.ಸಿ ದೊರೆಯುತ್ತಿದೆ. ಇಲ್ಲಿಯೂ ಕೂಡ ಎಲ್ಲಿ ನೀರು ಸಿಗುತ್ತದೆಂದು ಹೇಳಿಲ್ಲ. ಈಗ ನಿಮ್ಮ ಅಧ್ಯಕ್ಷತೆಯಲ್ಲಿ High Power Commette ಯಲ್ಲಿ ತೀರ್ಮಾನ ಮಾಡಿದ್ದೀರಿ. water supply ನವರು ನೀರು

ಕೊಡುವುದಾಗಿ ಹೇಳಿದ್ದಾರೆಯೇ? ಸ್ಕಿಲ್ ಎನ್ನುವವರು 18,500 ಎಕರೆ ಜಮೀನು ಕೇಳಿದ್ದರು. ನೀವು ಅದನ್ನು ಏತಕ್ಕೆ ರೇಟ್ ಕಡಿಮೆ ಮಾಡಿದ್ದೀರಿ. 5,000 ಹೆಕ್ಟೇರ್ ಎಂದು ಕ್ಯಾಪ್ ಹಾಕಿರುವುದರಿಂದ S.E.Z Actನಲ್ಲಿ amendment ಮಾಡಿ ಅಲ್ಲಿಗೆ ನಿಲ್ಲಿಸಿದಿರಿ. ಅಲ್ಲಿಗೆ 12,500 ಎಕರೆ ಆಯಿತು. ಅಲ್ಲಿ ನಂದಗುಡಿಯ ಭಾಗದ 36 ಹಳ್ಳಿಗಳ ಭಾಗದಲ್ಲಿ ಆ ಜಮೀನುಗಳೆಲ್ಲಾ ಬರುತ್ತವೆ. ಸುಮಾರು nearly 1.00 ಲಕ್ಷ ಜನ ಅಲ್ಲಿ ವಾಸಿಸುತ್ತಿದ್ದಾರೆ. 36 ಹಳ್ಳಿಗಳಲ್ಲಿರುವವರಿಗೆ ನೀವು ಮತ್ತೆ rehabilitation ಮಾಡುವಂಥ ಪರಿಸ್ಥಿತಿ ಬರುತ್ತದೆ. Rehabilitation ಗೆ ಪರ್ಯಾಯವಾದಂಥ ಯೋಜನೆಗಳನ್ನು ರೂಪಿಸಿಕೊಂಡಿಲ್ಲ. ಮತ್ತೆ ಎಲ್ಲಾ, fertile land, ಸಾಮಾನ್ಯವಾಗಿ ಎಲ್ಲ ಸಣ್ಣ ರೈತರು, ಈಗಂತೂ ಶ್ರೀಮಂತರು ಯಾರೂ ಇಲ್ಲ. ದೊಡ್ಡ ದೊಡ್ಡ ರೈತರುಗಳು ನೂರು, ಐವತ್ತು ಎಕರೆ ಇಟ್ಟಿರುವವರು ಯಾರೂ ಇಲ್ಲ. ಎಲ್ಲಾ partition ಆಗಿ ಒಬ್ಬೊಬ್ಬರಿಗೆ 2.3.4.5.ಎಕರೆ ಇದ್ದರೆ ಅದೇ ದೊಡ್ಡದು, ಎಲ್ಲಾ ಬಡವರು ಇದ್ದಾರೆ. Bangalore congestion ದೃಷ್ಟಿಯಿಂದ, ಕುಡಿಯುವ ನೀರಿಗೆ ತೊಂದರೆಯಿದೆ, ಟ್ರಾಫಿಕ್ ಸಮಸ್ಯೆಗಳಿವೆ, ಆರೋಗ್ಯ ಕೆಟ್ಟು ಹೋಗುತ್ತಿದೆ. ಬೆಂಗಳೂರು ಬಿಟ್ಟು ದೂರ ಹೋಗಿ ಎಲ್ಲೆಲ್ಲಿ backward districts ಇವೆ. ಅಲ್ಲಿ ಮಾಡಿ ಎಂಬುದು ನಮ್ಮ ಒತ್ತಾಯ. ಬೆಂಗಳೂರಿನಲ್ಲಿ ಕೈಬಿಡಬೇಕು. ನಿಮ್ಮ ಕ್ಷೇತ್ರವಾದ ಬಿಡದಿಯಲ್ಲಿ ಸುಮಾರು 9,600 ಎಕರೆಗೆ ಈಗಾಗಲೇ proposals ಆಗಿವೆ. ನೀವು ಟೆಂಡರ್ ಕೂಡ ಕರೆದಿದ್ದೀರಿ, ಇವೆಲ್ಲಾ ನಿಜವೇ, ನಾವೇನು ಅದನ್ನು ಉತ್ಪ್ರೇಕ್ಷೆಯಿಂದ ಹೇಳಲಿಕ್ಕೆ ಹೋಗಿಲ್ಲ. ಅಥವಾ ಸುಮ್ಮ ಸುಮ್ಮನೆ ಆರೋಪ ಮಾಡಿಲ್ಲ. ನಾವು ಹೇಳಿದ್ದು ಏನೆಂದರೆ ಜನತಾದಳ ಎಂದಿದ್ದು ನಿಜ, ದೇವೇಗೌಡರ ಹೆಸರನ್ನು ನಾವು ಇಲ್ಲಿ ಪ್ರಸ್ತಾಪಿಸಿಲ್ಲ. ಜನತಾದಳ ಎಸ್.ಎಂ. ಕೃಷ್ಣರವರು ಇದ್ದ ಕಾಲದಲ್ಲಿ ಅಷ್ಟೊಂದು ಹೋರಾಟ ಮಾಡುತ್ತಿತ್ತು. Infosys ಗೆ 800 ಎಕರೆ ಕೊಡುವಾಗ ಅಷ್ಟೊಂದು ಗಲಾಟೆ ಆಯಿತು. ಈಗೇಕೇ ಜನತಾದಳ ಸುಮ್ಮನಿದೆ ಎಂದು ಹೇಳಿದ್ದೇನೆ. ಈಗ ಏಕೆ ಮಾತನಾಡುತ್ತಿಲ್ಲ. Is it not a fact? ನಿಮ್ಮ ಅಧ್ಯಕ್ಷತೆಯಲ್ಲಿ 12,500 ಎಕರೆ ಕೊಡಬೇಕೆಂಬ proposal ಅನ್ನು clear ಮಾಡಿಲ್ಲವೇ ನೀವು? Expect K.E.B.ಇನ್ನು ಯಾವುದೇ ಇಲಾಖೆಗಳು including ಕಂದಾಯ ಇಲಾಖೆ Government land ಕೊಡಲಿಕ್ಕಾಗುವುದಿಲ್ಲವೆಂದು ಹೇಳುತ್ತಾರೆ. BMRDA, Urban Development Department ನವರು ಹೇಳುತ್ತಾರೆ. ಅರಣ್ಯ ಇಲಾಖೆಯವರು ಹೇಳುತ್ತಾರೆ. ಎಲ್ಲಾ ಇಲಾಖೆಗಳು ಕೂಡ ಹೇಳುತ್ತಾರೆ. BWSSB ಯವರು ನೀರು ಕೊಡಲಿಕ್ಕೆ ಸಾಧ್ಯವೇ ಇಲ್ಲ. ಈಗಾಗಲೇ ಬೆಂಗಳೂರು ನಗರದಲ್ಲಿರುವ

ಜನರಿಗೆ ನೀರು ಕೊಡಲಿಕ್ಕಾಗುತ್ತಿಲ್ಲ. ಹೀಗಿರುವಾಗ ಬೆಂಗಳೂರು ಪಕ್ಕ ಪಕ್ಕದಲ್ಲೇ satellite towns ಮಾಡಿದರೆ ಅದು ಕೂಡ ಬೆಂಗಳೂರಿಗೆ ಸೇರಿಕೊಂಡು ಬಿಡುತ್ತದೆ. ಆಗ ಈ Greater Bangalore ಜೊತೆಗೆ ಇನ್ನೊಂದು Additional Greater Bangalore ಆಗಿಬಿಡುತ್ತದೆ. ಇವೆಲ್ಲಾ ಆಗುವುದಿಲ್ಲ. ಒಂದು ಕಡೆ ರೈತರ ಜಮೀನುಗಳು ಹೋಗುತ್ತವೆ. ಜನರು ನಿರ್ಗತಿಕರಾಗುತ್ತಾರೆ. Fertile land ಎಲ್ಲಾ ಇದಕ್ಕೆ ಹೊರಟು ಹೋಗುತ್ತದೆ. S.E.Z ಬೇಡವೆಂದು ಇಲ್ಲಿ ಯಾರೂ ಕೂಡ ವಾದ ಮಾಡಿಲ್ಲ. ಅಥವಾ ಕೈಗಾರಿಕೆ ಬೆಳೆಯಬಾರದೆಂದು ಯಾರೂ ವಾದ ಮಾಡಿಲ್ಲ. Unemployment problem ಹೋಗಬೇಕು, employment generate ಆಗಬೇಕು ಎಂದು ಯಾರೂ ವಿರೋಧ ಮಾಡಲಿಲ್ಲ. ಆದರೆ ನಾನು ಹೇಳಿದ್ದು ಏನೆಂದರೆ ಇಷ್ಟೆಲ್ಲಾ ಕೂಡ ನಡೆಯುತ್ತಿದ್ದರೂ ಬೆಂಗಳೂರು ಸುತ್ತಮುತ್ತಲೇ ಏತಕ್ಕೆ ಮಾಡುತ್ತಿದ್ದೀರಿ? ನಿಮ್ಮ ರಾಜೇಂದ್ರರವರು ಕೆ.ಜಿ.ಎಫ್, ನಲ್ಲಿ ಸರ್ಕಾರಿ ಭೂಮಿ 12,000 ಎಕರೆ ಇದೆ. ಅಲ್ಲಿ ಮಾಡಿ ಎಂದು argument ಮಾಡಿದರು. ಹಾಸನದಲ್ಲಿ ಮಾಡಿ ಎಂದು ನಾನು ಹೇಳಿದೆ, ಇಲ್ಲ, ಬೇರೆ ದೂರದಲ್ಲಿರುವ ಜಿಲ್ಲೆಗಳಲ್ಲಿ ಮಾಡಿ ಎಂದು ಹೇಳಿದ್ದೇವೆ ಹೊರತು ಇಲ್ಲಿ ನೀವು ಏನು ಮಾಡಲಿಕ್ಕೆ ಹೊರಟ್ಟಿದ್ದೀರಿ, Township ಆಗಲಿ, satellite towns ಆಗಲಿ ಅಥವಾ ಕೈಗಾರಿಕೆಗಳಾಗಲಿ, S.E.Z ಗಳಾಗಲಿ, ಬೆಂಗಳೂರು ಸುತ್ತಮುತ್ತ ಮಾಡುವುದನ್ನು ಕೈಬಿಟ್ಟುಬಿಡಿ, ಹಾಗೆ ಮಾಡಿದರೆ ಇಲ್ಲಿನ ರೈತರು ಉಳಿಯುತ್ತಾರೆ, ನಗರವೂ ಉಳಿಯುತ್ತದೆ. ಇಲ್ಲಿನ ಜನರ ಬವಣೆಗಳೂ ಕೂಡ ತಪ್ಪುತ್ತವೆ. ದೂರದಲ್ಲಿ ಮಾಡಿದರೆ ಅಲ್ಲಿರುವ backward regions ಕೂಡ ಅಭಿವೃದ್ಧಿಯಾಗುತ್ತವೆಂದು ಹೇಳಿದ್ದೇವೆ. ಅದಕ್ಕೋಸ್ಕರ ಬೆಂಗಳೂರು ಸುತ್ತ ಮುತ್ತ ಕೈಬಿಡಬೇಕೆಂದು ಒತ್ತಾಯ ಮಾಡಿದ್ದೇವೆ ಹೊರತು, ಹಿಂದಿನವರು ತಪ್ಪು ಮಾಡಿದರು ಎಂದರೆ ಹೇಗೆ? ಈಗ ನಾವು ತಪ್ಪು ಮಾಡುವುದಿಲ್ಲವೆಂತಲೇ assuming for argument sake ಹಿಂದಿನವರದು ತಪ್ಪು ಮಾಡಿದರು. ಎಂದರೆ ನೀವ್ಯಾಕೆ ತಪ್ಪು ಮಾಡಲಿಕ್ಕೆ ಹೋಗುತ್ತೀರಿ? ನೀವು ರೈತರ ಬಗ್ಗೆ ಮಾತನಾಡಿ ಆ ರೈತರನ್ನು ಏತಕ್ಕೆ ಒಕ್ಕಲೆಬ್ಬಿಸಲಿಕ್ಕೆ ಹೋಗುವಿರಿ? ಇದನ್ನು ನಾವು ಪ್ರಸ್ತಾಪ ಮಾಡಿದ್ದೇವೆಯೇ ಹೊರತು ಬೇರೆ ಯಾವ ಉದ್ದೇಶವು ಇಲ್ಲ. ಹಾಗಾಗಿ ಇದಕ್ಕೆ ತಾವು ಉತ್ತರ ಹೇಳಲೇ ಇಲ್ಲ. ನಾವು ಕೈಬಿಡುತ್ತೇವೆಂದಾಗಲಿ, ದೂರದಲ್ಲಿ ಮಾಡುತ್ತೇವೆಂದಾಗಲಿ ಯಾವುದೇ ಉತ್ತರವನ್ನು ಹೇಳಲಿಲ್ಲ. ಹಾಗಾಗಿ ಎಸ್.ಇ.ಜೆಡ್.ಗೆ ಕೈಗಾರಿಕಾ ಬೆಳವಣಿಗೆಗೆ ನಮ್ಮ ವಿರೋಧವಿಲ್ಲ. ಆದರೆ ಎಸ್.ಇ.ಜೆಡ್‌ನಲ್ಲಿ 5,000 ಹೆಕ್ಟೇರ್ maximum ಕ್ಯಾಪ್ ಮಾಡಿದ್ದಾರೆ. ಆದರೆ 12,500 ಎಕರೆ ಅವರಿಗೆ

ಕೊಟ್ಟುಬಿಡಬೇಕು? ನಮಗೆ ಇರುವಂಥ ಮಾಹಿತಿ ಪ್ರಕಾರ ಆ SKIL ನವರಿಗೆ ಆರು ಕೋಟಿ ಅರವತ್ತು ಲಕ್ಷ ಅವರ ವಹಿವಾಟು, ಆರು ಕೋಟಿ ಅರವತ್ತು ಲಕ್ಷ ರೂ.ಗಳು ಅವರಿಗೆ ಆದಾಯ ಬಂದಿದೆ. ಆರು ಕೋಟಿ ಅರವತ್ತು ಲಕ್ಷ ರೂ.ಗಳ ಆದಾಯವಿರುವವನು 30.00 ಕೋಟಿ ರೂ.ಗಳನ್ನು ಹೇಗೆ invest ಮಾಡುತ್ತಾರೆ. ಮತ್ತೆ ಅವರು ಬ್ಯಾಂಕ್‌ಗಳಿಂದ ಸಾಲ ತರುತ್ತಾರೆ. ಭಾರೀ ದೊಡ್ಡ ಕೈಗಾರಿಕೋದ್ಯಮಿ ಏನಲ್ಲ, ಅವರ ಹತ್ತಿರ ಬಹಳ ದೊಡ್ಡ ಬಂಡವಾಳ ಇದೆಯೆಂದು ಹೇಳಲಿಕ್ಕೆ ಬರುವುದಿಲ್ಲ. ಆ ರೀತಿಯಿರುವಾಗ ಆ ವ್ಯಕ್ತಿ ಅಸಲಿಯೇ, ನಕಲಿಯೇ ಎಂಬುದು ನಮಗೆ ಗೊತ್ತಿಲ್ಲ. ಅವರ ಬಂಡವಾಳ ನೋಡಿದರೆ ಮೇಲ್ನೋಟಕ್ಕೆ ಆ ರೀತಿ ಕಾಣಿಸುತ್ತದೆನ್ನುವ ಮಾತನ್ನು ಬಹಳ ಸ್ಪಷ್ಟವಾಗಿ ಹೇಳಿದ್ದೇವೆ. ಆದ್ದರಿಂದ ನಾನು ಈಗಲೂ ಒತ್ತಾಯ ಮಾಡುತ್ತೇನೆ. ಬೆಂಗಳೂರಿನ ಸುತ್ತಮುತ್ತ ಈಗಾಗಲೇ ಬಹಳ ಕಷ್ಟದಲ್ಲಿ, ತೊಂದರೆಯಲ್ಲಿದ್ದು ಅದರ ಮೇಲೆ ಬಹಳ ಜಾಸ್ತಿ pressure ಇದೆ. ಹಾಗಾಗಿ ನಾವು ಇದನ್ನು de-congestion ಮಾಡಬೇಕೆ ಹೊರತು ಮತ್ತೆ ಅದನ್ನು congestion ಮಾಡುವಂಥ ಕೆಲಸ ಮಾಡಬಾರದು, ಅದಕ್ಕೆ ಸರ್ಕಾರ ಕೈಹಾಕಬಾರದು ಎಂಬುದು ನಮ್ಮ ಒತ್ತಾಯವಾಗಿದೆ.

ಶ್ರೀ ವಾಟಾಳ್ ನಾಗರಾಜ್:- ಬೆಂಗಳೂರಿನಲ್ಲಿ ತಮಗೆ ಗೊತ್ತಿರುವ ಹಾಗೆ 40 ಲಕ್ಷ ವಾಹನಗಳು ಓಡಾಡುತ್ತಿವೆ. ಆದ್ದರಿಂದ ಪರಿಸರ ಸಂಪೂರ್ಣವಾಗಿ ಹಾಳಾಗಿದೆ. ಸ್ವಲ್ಪವೂ ಆರೋಗ್ಯಕರ ವಾತಾವರಣ ಉಳಿದಿಲ್ಲ. ಇವತ್ತು ಹೆಚ್ಚು ಕಡಿಮೆ 20,000 ಕ್ಕೂ ಹೆಚ್ಚು ಕಾರ್ಖಾನೆಗಳು ಬೆಂಗಳೂರಿನಲ್ಲಿವೆ. ಇದಲ್ಲದೆ ಇನ್ನೂ ಬೇಕಾದಷ್ಟು ಕಾರ್ಖಾನೆಗಳಿವೆ, ಈ ಪರಿಸ್ಥಿತಿ ಇರುವಾಗ ಬೆಂಗಳೂರಿನಲ್ಲಿ ಪರಿಸರ ವಾಯು ಮಾಲಿನ್ಯ ಸಂಪೂರ್ಣವಾಗಿ ನಾಶವಾಗುತ್ತಿದೆ. ಬೆಂಗಳೂರಿನಲ್ಲಿ ಇವತ್ತು ತಿರುಗಾಡಲಿಕ್ಕೆ ಆಗುತ್ತಿಲ್ಲ, ಇಂಥ ಪರಿಸ್ಥಿತಿ ಇರುವಾಗ ಬೆಂಗಳೂರು ಸುತ್ತ ಮುತ್ತ ಬೃಹತ್ ಬೆಂಗಳೂರು ಮಾಡಬೇಕೆಂದಿದ್ದೀರಿ. ಇನ್ನೂ ಪ್ರಾಮುಖ್ಯವಾಗಿ ನಿಮ್ಮ ಷರತ್ತಿನಲ್ಲಿ ಕುಡಿಯುವ ನೀರು ನೀವೇ ಮಾಡಿಕೊಳ್ಳಬೇಕೆಂದು ಹೇಳಿದ್ದೀರಿ. ಅವರು ಹೇಗೆ ನೀರಿನ ವ್ಯವಸ್ಥೆ ಮಾಡಿಕೊಳ್ಳುತ್ತಾರೆ? ಅಲ್ಲಿ ನೀರು ಸಿಗಲಿಲ್ಲವೆಂದರೆ ಮತ್ತೆ ಕಾವೇರಿಗೆ ಬರಬೇಕು. ಆದ್ದರಿಂದ ಕುಡಿಯುವ ನೀರು ಈಗಿರತಕ್ಕಂಥ ಬೆಂಗಳೂರು ಜನಕ್ಕೆ 2011 ನೇ ಇಸವಿಗೆ ನೀರಿನ ಪ್ರಮಾಣ ಹೆಚ್ಚು ಕಡಿಮೆ 600 ದಶಲಕ್ಷ ಲೀಟರ್ ಕಡಿಮೆ ಆಗುತ್ತದೆ. ಇನ್ನು ಮುಂದೆ ನೀರು ಕೊಡಲಿಕ್ಕಾಗುವುದಿಲ್ಲ ಈ ಪರಿಸ್ಥಿತಿ ನಿರ್ಮಾಣವಾಗುತ್ತದೆ. ಎಸ್.ಇ.ಜೆಡ್. ಬರುವ ಉದ್ದೇಶವೇನು? ಉದ್ಯೋಗ ಸೃಷ್ಟಿಯಾಗಲಿ ಎನ್ನುವುದು ಅದರ

ಉದ್ದೇಶ. ನಿಮ್ಮ ಷರತ್ತಿನಲ್ಲಿ ಸ್ಥಳೀಯರಿಗೆ ಕನ್ನಡಿಗರಿಗೆ ಉದ್ಯೋಗ ಕೊಡಬೇಕೆಂದು ನೀವು ಎಲ್ಲಿಯೂ ಹೇಳುತ್ತಿಲ್ಲ. ಮೊದಲಿನಿಂದಲೂ ಇದ್ದರೂ ಅದೇನೂ ಜಾರಿಗೆ ಬರುತ್ತಿಲ್ಲ. ಮೂಲೆಗೆ ಹೋಗಿದೆ, ಸರೋಜಿನಿ ಮಹಿಷಿ ವರದಿ ಯಾವುದೋ ಒಂದು ಕಾಲದಲ್ಲಿ ಮಾಡಿದರು, ಅದು ಎಲ್ಲಿಗೆ ಹೋಯಿತೋ? ಏನಾಯಿತೋ? ಅದರ ಬಗ್ಗೆ ಎಲ್ಲಿಯೂ ಕಾಣುತ್ತಿಲ್ಲ. ಬಹುರಾಷ್ಟ್ರೀಯ ಕಂಪನಿಗಳಿರಬಹುದು. ಯಾವುದೇ ಕಂಪನಿಗಳಿಗೂ ನಿಮ್ಮ ಷರತ್ತು ಇಲ್ಲ. ಈ ದೃಷ್ಟಿಯಿಂದ ನಂದಗುಡಿಯಲ್ಲಿರುವ ರೈತರು ಬಹಳ ಭಯಭೀತರಾಗಿದ್ದಾರೆ, ಬಹಳ ನೋವಿನಲ್ಲಿದ್ದಾರೆ. ಅವರಿಗೆ ನಾವು ಇದನ್ನು ಮಾಡುವುದಿಲ್ಲ. ನಮ್ಮ ರೈತರನ್ನು ಮೀರಿ ನಾವು ನಂದಗುಡಿಯನ್ನು ಮಾಡುವುದಿಲ್ಲವೆಂದು ಸ್ಪಷ್ಟವಾದಂಥ ನೇರವಾದಂಥ ಭರವಸೆಯನ್ನು ತಾವು ಕೊಡಬೇಕು ಎಂದು ಕೇಳಿಕೊಳ್ಳುತ್ತೇನೆ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ(ಬಾಗೇಪಲ್ಲಿ):- ಮಾನ್ಯ ಅಧ್ಯಕ್ಷರೇ ನಾನು ಒಂದು clarification ಹಾಗು ಒಂದು ಸಲಹೆಯನ್ನು ಕೊಡುತ್ತೇನೆ. ನಾನು land use ಬಗ್ಗೆ SEZ Act ಅನ್ನು clarify ಮಾಡಿಲ್ಲವೆಂದು ಹೇಳಿದೆ, ನೀವು ಮಾಡಿಲ್ಲವೆಂದು ನಾನು ಹೇಳಿಲ್ಲ. Act ಏನು ಮಾಡಿದ್ದೀರಿ, ಅದರಲ್ಲಿ land use ಬಗ್ಗೆ perfect ಆಗಿ ಮಾಡಬೇಕೆಂಬುದರ ಬಗ್ಗೆ 2005 original act ನಲ್ಲಿ ಮಾಡಿಲ್ಲ, ಅದನ್ನು ಸೇರಿಸಬೇಕೆಂದು ನಾನು ಹೇಳಿದ್ದೇನೆ ವಿನಃ ನೀವು ಮಾಡಿಲ್ಲವೆಂದು ಹೇಳಿಲ್ಲ, ಇದೊಂದು clarification. ಎರಡನೆಯದಾಗಿ ಪ್ರತ್ಯೇಕವಾಗಿ ನಂದಗುಡಿಯಲ್ಲಿ S.E.Z. ಮಾಡಿದರೆ ಜಮೀನುಗಳು ಹೋಗುತ್ತದೆ. ಎನ್ನುವ ಕಾರಣಕ್ಕಾಗಿ ಬೇಡವೆಂದು ಹೇಳುವುದನ್ನು ಎಲ್ಲರೂ ಒಪ್ಪುತ್ತಾರೆ. ಅಲ್ಲದೆ ಅಲ್ಲಿ 4,700 ಎಕರೆ ಸರ್ಕಾರಿ ಭೂಮಿ ಇದೆ ಎಂದು ಹೇಳುತ್ತಿದ್ದಾರೆ, ಅದು ಬಹುರೂಪಿ ಸಾಗುವಳಿ ಆಗಿದೆ. ಅಲ್ಲಿ ಬಡವರು ಇರುವುದರಿಂದ ನೀವು ಸ್ವಲ್ಪ consider ಮಾಡಬೇಕಾಗುತ್ತದೆ. K.G.F.ನಲ್ಲಿ with all infrastructure 12,000 ಎಕರೆ ಭೂಮಿ ಇದೆ, ಅಲ್ಲಿ ಎಲ್ಲಾ ಸೌಲಭ್ಯಗಳು ಇವೆ, ನೀವು ರಸ್ತೆಯನ್ನು ಮಾಡುವ ಅವಶ್ಯಕತೆ ಇಲ್ಲ. Airportಗೆ ಕೇವಲ 75 ಕಿ.ಮೀ. ದೂರದಲ್ಲಿದೆ. ಅಲ್ಲಿಗೆ ನೀವು ಹೋದರೆ ಒಂದು ಹಿಂದುಳಿದ ಪ್ರದೇಶವನ್ನು ಅಭಿವೃದ್ಧಿಗೊಳಿಸಿದಂತಾಗುತ್ತದೆ, ಇಲ್ಲಿ ರೈತರು ಉಳಿಸಿದಂತಾಗುತ್ತದೆ. ಹಾಗಾಗಿ ಇದಕ್ಕೆ ನಿಮಗೆ ಯಾವುದೇ ವಿರೋಧ ಬರುವುದಿಲ್ಲ. 12,000 ಎಕರೆ ಭೂಮಿಯನ್ನು ಕೊಡಲಿಕ್ಕೆ ನಾವು ತಯಾರಿದ್ದೇವೆ. ಎಲ್ಲಾ infrastructure ಇದೆ. ಅದು ಮೈನಿಂಗ್‌ನಲ್ಲಿ ಇರತಕ್ಕಂಥಹದು. ಮೈನ್ ಒಳಗೆ ನೀರು ಇದೆ. ಆ ನೀರನ್ನು ಕೋಲಾರ ಜಿಲ್ಲೆಗೆ ಉಪಯೋಗಿಸಬೇಕೆಂದು ಸಂಶೋಧನೆ ನಡೆದಿತ್ತು. ಅದು

ಇನ್ನೂ ಸಂಶೋಧನೆ ಹಂತದಲ್ಲಿಯೇ ಇದೆ. ಅದು ಆಗಿಲ್ಲ. ಅದೆಲ್ಲಾ ಉಪಯೋಗಿಸಿಕೊಂಡು ಕೆಜಿಎಫ್‌ನಲ್ಲಿ ಮಾಡುವುದರಿಂದ ನಿಮ್ಮ ಮೇಲೆ ಬರತಿರತಕ್ಕಂತಹ ಟೀಕೆಗಳು ಮತ್ತು ರೈತರ ಬಗ್ಗೆ ಈ ಎಲ್ಲಾ ಸಮಸ್ಯೆಗಳು ಪರಿಹಾರ ಆಗುತ್ತದೆ. ಮತ್ತೆ North Karnataka ಕ್ಕೆ ಅಲ್ಲಿ ಡೆವಲಪ್ ಮಾಡಿ. ಏಕೆಂದರೆ ಅಮಾರ್ತ್ಯ ಸೇನ್ ವಿಚಾರ ನಾನು ಹೇಳಬೇಕೆಂದು ಇದ್ದೆ. ತಾವು ಹೇಳಿದಿರಿ. industry ಬೆಳೆದೇ ಬೆಳೆಯುತ್ತದೆ, ನೀವು ಯಾರು ವಿರೋಧ ಮಾಡಿದರೂ, ನೀವು ಯಾರು ಒಪ್ಪಿದರೂ, ಒಪ್ಪದಿದ್ದರೂ industry ಬೆಳದೇ ಬೆಳೆಯುತ್ತದೆ. It will fight against aggrerian sector and grow it. Finally, ನಾನು ಒಂದು ವಿಚಾರ ಹೇಳುತ್ತೇನೆ. ನೀವು ಒಪ್ಪಿದರೂ, ನಾವು ಒಪ್ಪದೇ ಇದ್ದರೂ, ಯಾರು ಒಪ್ಪದೇ ಇದ್ದರೂ, ಬಂಡವಾಳ ಇವತ್ತೂ ಎಲ್ಲಿದೆ ಗೊತ್ತೆ ಸಾರ್? ಎಲ್ಲಿ ಅವರಿಗೆ ಲಾಭ ಬರುತ್ತದೆ? ಅಲ್ಲಿಗೇ ಹೋಗುತ್ತದೆ ಹೊರತು ನೀವು ನಾವು ಹೇಳಿದ ಕಡೆಗೆ ಕ್ಯಾಪಿಟಲ್ ಹೋಗುವುದಿಲ್ಲ. ಇದು ಸ್ಪಷ್ಟ.

ಶ್ರೀ ಎಸ್.ರಾಜೇಂದ್ರನ್:- ಅಧ್ಯಕ್ಷರೆ. ಮಾನ್ಯ ಮುಖ್ಯಮಂತ್ರಿಗಳು ನಮ್ಮ ಮೇಲೆ ಕರುಣೆ ಇಟ್ಟುಕೊಂಡಾದರೂ ಉತ್ತರ ಕೊಡಿ ಸ್ವಾಮಿ. ನಾನು ಭಾಷಣ ಮಾಡಿದೆ, ಮಾನ್ಯ ಹೆಗ್ಡೆಯವರು ಮಾತನಾಡಿದರು. ಮಾನ್ಯ ವಾಟಾಳ್ ಅವರು ಮಾತನಾಡಿದರು, ಮಾನ್ಯ ಮಾಧುಸ್ವಾಮಿ ಅವರು ಮಾತನಾಡಿದರು. ಶ್ರೀನಿವಾಸ ಗೌಡರೂ ಮಾತನಾಡಿದರು. ನಾವೆಲ್ಲರೂ ಕೆ.ಜಿ.ಎಫ್. ಬಗ್ಗೆ ತಮಗೆ ಹೇಳಿದ್ದೇವೆ. It is available land. Cheap labour available ತಾವೂ ಮಾತನಾಡಿದಿರಿ. Labour is cheap. Power ಇದೆ. Shivanasamudram to KGF direct power. ಅದನ್ನು ಈಸಿಯಾಗಿ ತೆಗೆದುಕೊಂಡರು. ಅದನ್ನು ಯಾರು ಡೆವಲಪ್ ಮಾಡಿದರೂ ಎಂದರೆ Jhon Tailor Company ಅವರು. ಅದನ್ನು ತಕ್ಷಣ ತೆಗೆದುಕೊಂಡರೂ ನಿಮಗೆ ಬೆನಫಿಟ್ ಇದೆ ಎಂದು. ಚಿನ್ನ ತೆಗೆದುಕೊಂಡರು, ತಕ್ಷಣ ನಿಮ್ಮ ರಾಯಲ್ಟಿ ಎಲ್ಲಾ ತೆಗೆದುಕೊಂಡರು. ಈ ದೇಶವನ್ನೇ ತಗೆದುಕೊಂಡರು. ಈಗ ಪವರ್ ಇದೆ, ರೋಡ್ ಇದೆ, Railway station ಇದೆ. All infrastructure is possessing in KGF. ತಾವು ಖಂಡಿತವಾಗಿ ನಮ್ಮ ಮೇಲೆ ಕರುಣೆ ಇಟ್ಟೋ ಅಥವಾ yongstares ಅನ್ನು ತಮ್ಮ ಮುಂದೆ ತೋರಿಸಿದ್ದೇವೆ. ಸುಮಾರು ಲಕ್ಷಾಂತರ ಯುವಕರು they are waiting. 16 thousand graduates, all yongstares. ತಾವು ಅಲ್ಲಿ ಒಂದು industry shift ಮಾಡಿದರೆ

ನಮ್ಮ ಜನಕ್ಕೆ ಅನುಕೂಲ ಆಗುತ್ತದೆ. ತಾವು ಅದರ ಭರವಸೆ ಕೊಡಬೇಕೆಂದು ನಾನು ಕೇಳುತ್ತೇನೆ.

ಅಧ್ಯಕ್ಷರು:- ಸಾಕು, ಸಾಕು. ಸಾಕಷ್ಟು front benches ನವರು ಕೇಳುತ್ತಿದ್ದಾರೆ. ಏನ್ರಿ, ಸುಮ್ಮನೇ. ಎಲ್ಲಾ ಕೇಳಿದರೆ what is the time? ಇನ್ನು ಬೇರೆ ವಿಷಯಗಳು ಇಲ್ಲವಾ? ಎಲ್ಲಾ ಸುಮ್ಮನೇ ತಮಾಷೆ ಮಾಡಿಕೊಂಡು ಬಿಟ್ಟಿದ್ದೀರಿ. ಇಲ್ಲಿ ನಿಮ್ಮ ನಾಯಕರು ಸರಿಯಾದ ರೀತಿಯಲ್ಲಿ control ಮಾಡುವುದಿಲ್ಲ.

ಶ್ರೀ ಕೆ. ಜಯ ಪ್ರಕಾಶ್ ಹೆಗ್ಡೆ:- ಅಧ್ಯಕ್ಷರೆ, ಈಗ 4700 ಎಕರೆ ಸರ್ಕಾರಿ ಜಮೀನು ಎಂದು ಏನು ಹೇಳುತ್ತಾರೆ? ಬಗರ್‌ಹುಕುಂ ಅರ್ಜಿ ಇದ್ದರೆ ಅದು ಸರ್ಕಾರಿ ಆಗುತ್ತದೆ. ಅರ್ಜಿ ಪೆಂಡಿಂಗ್ ಇದ್ದರೆ ನೀವು ತೀರ್ಮಾನವನ್ನು ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲ. ಅಪ್ಲಿಕೇಶನ್ ತೀರ್ಮಾನ ಆಗಬೇಕಾಗುತ್ತದೆ. ಆಗುವುವರೆಗೆ ಕಾಯಿದೆಯಲ್ಲಿ ಅವರಿಗೆ ಅರ್ಜಿ ಹಾಕಲು ಅವಕಾಶ ಕೊಟ್ಟಿದ್ದೇವೆ. ಅವರು ಇಂತಹ ತಾರೀಖಿನಂದು ಇದ್ದರೆ ಅವರಿಗೆ ಗ್ರಾಂಟ್ ಮಾಡುವುದು ಎಂದು ತೀರ್ಮಾನ ಆಗಿದೆ. ಅದಕ್ಕೋಸ್ಕರ ಅದನ್ನು ನೀವು ಆಲೋಚನೆ ಮಾಡಬೇಕಾಗುತ್ತದೆ. ಕೇವಲ ಸರ್ಕಾರಿ ಜಮೀನು ಆದರೆ ನೀವು ತೀರ್ಮಾನ ತೆಗೆದುಕೊಳ್ಳುವುದಕ್ಕೆ ಆಗುತ್ತದೆ. Pending application, ಅದನ್ನು ನೀವು ತೀರ್ಮಾನ ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲ. ತಾವೇನೋ ಮಾಡುವುದಿಲ್ಲವೆಂದು ನೇರವಾಗಿ ಇಲ್ಲಿ ಹೇಳಿ ಬಿಟ್ಟರೆ ಅದರ ಬಗ್ಗೆ ಚರ್ಚೆ ಆಗಬೇಕು ಮತ್ತೆ Board of Approval will not approve any SEZ where the State Governaments have carried out or proposed to carry out compulsory acquisition of lands for such SEZ after 5th April ಎಂದು ಇದೆ. ನೀವು Compulsory application ಮಾಡುವುದಕ್ಕೆ ಆಗುವುದಿಲ್ಲ. ಅದಕ್ಕೆ ಬದಲಾವಣೆ ಆಗಬೇಕು. ಅಲ್ಲಿ ಡ್ರಾಪ್ ಮಾಡಿದರೆ ನಾವ್ಯಾರೂ ಮಾಡುವಂತಹ ಪ್ರಶ್ನೆ ಬರುವುದಿಲ್ಲ. ಇಲ್ಲದೇ ಇದ್ದರೆ ನೀವು ಲೋಕಲ್ ರೈತರ ಹತ್ತಿರ ಚರ್ಚೆ ಮಾಡಬೇಕಾಗುತ್ತದೆ. ಅಲ್ಲಿ ಕೇಳಬೇಕಾಗುತ್ತದೆ. ಕೇಳದೇ ತೀರ್ಮಾನ ತೆಗೆದುಕೊಳ್ಳುವುದಂತೂ ಬೇಡ. ಏಕೆಂದರೆ ಮುಂದೆ ಸಮಸ್ಯೆಗಳು ಬಹಳ ಬೃಹದಾಕಾರವಾಗಿ ಬೆಳೆಯಬಹುದು. ಎಲ್ಲಿ ಜಾಗ ಇದೆ? ವೇಸ್ಟ್ ಲ್ಯಾಂಡ್ Governament ದು 12 ಸಾವಿರ ಎಕರೆ ಜಾಗ ಇದೆ, ಎಲ್ಲಾ infrastrure ಇದ್ದರೆ ಅಲ್ಲಿಗೆ ಇನ್‌ವೆಸ್ಟ್ ಮಾಡುವವರನ್ನು ಕಳುಹಿಸಿ ಅಥವಾ ಬೇರೆ ಬೇರೆ ಕಡೆಗೆ ಕಳುಹಿಸಿ. ನಮ್ಮ ಕಡೆಗೂ ಕಳುಹಿಸಿ. We welcome investments. ಆದರೆ ಬೆಂಗಳೂರಿನ ಸುತ್ತ ಮುತ್ತ ಪುನಃ

ಇನ್‌ವೆಸ್ಟ್ ಮಾಡುವುದು ಮತ್ತೆ ಅದರಿಂದ ತೊಂದರೆ ಆಗುವುದು ಬೇಡ ಎಂದು ತಮ್ಮ ಮುಖೇನ ಅವರಿಗೆ ಹೇಳುತ್ತೇನೆ.

ಶ್ರೀ ಪಿ.ಜಿ.ಆರ್.ಸಿಂಧ್ಯಾ:- ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳು ಉತ್ತರವನ್ನು ಕೊಡತಕ್ಕಂಥ ಸನ್ನಿವೇಶದಲ್ಲಿ ನಾನು ಹೇಳಿರತಕ್ಕಂತಹ ಒಂದು ಪ್ರಮುಖವಾದಂಥ ಅಂಶವನ್ನು ಅವರು ಗಮನಿಸಲಿಲ್ಲ. ನಾನು ಈ BDA, Housing Board, Satellite Towns, ಇದರ acquisition ಬಗ್ಗೆ ಎಲ್ಲಾ ಮಾತನಾಡಿದ್ದೀರಿ. KIADB Rules ಬಗ್ಗೆನೂ ಮಾತನಾಡಿದ್ದೀರಿ. Agency clearance ಬಗ್ಗೆನೂ ತಾವು ಹೇಳಿದ್ದೀರಿ. ಮತ್ತೆ ಈ ಸದನದಲ್ಲಿ ಸಂಬಂಧ ಇಲ್ಲದೇ ಇರತಕ್ಕಂಥ, ಉತ್ತರ ಕೊಡುವುದಕ್ಕೆ ಆಗದೇ ಇರುವವರ ಬಗ್ಗೆನೂ ಪ್ರಸ್ತಾಪ ಮಾಡಿ, ಅವರ ಕಾಲದಲ್ಲಿ ಹೀಗೆ ಆಯಿತು. ಇವರ ಕಾಲದಲ್ಲಿ ಹೀಗೆ ಆಯಿತು ಎಂದು ಉತ್ತರವನ್ನು ತೆಗೆದುಕೊಂಡು ನೀವು protection ತೆಗೆದುಕೊಂಡಿದ್ದೀರಿ. ಜೆ.ಹೆಚ್.ಪಟೇಲ್ ಅವರು ಸತ್ತು ಹೋಗಿದ್ದಾರೆ. ಅವರ ಪರವಾಗಿ ಯಾರೂ ಉತ್ತರ ಕೊಡಲು ಆಗುವುದಿಲ್ಲ. I am a party to decision ನಾನು ಇಲ್ಲವೆಂದು ಹೇಳುವುದಿಲ್ಲ. I am proud of what I was ಅದನ್ನೂ ತಾವು protection ಗೆ ತಗೆದುಕೊಂಡಿದ್ದೀರಿ. ಶ್ರೀ ಎಸ್.ಎಂ. ಕೃಷ್ಣ ಅವರು ರಾಜ್ಯಪಾಲರಾಗಿದ್ದಾರೆ. ಈ ಹೌಸ್‌ನಲ್ಲಿ ಅವರು ಬಂದು ಉತ್ತರ ಕೊಡುವುದಕ್ಕೆ ಆಗುವುದಿಲ್ಲ. ಅದನ್ನೂ ಸಹಿತ ತಾವು ಪ್ರೊಟೆಕ್ಷನ್ ತೆಗೆದುಕೊಂಡಿದ್ದೀರಿ. ಈಗ ಆಯಿತು ಬಿಡಿ ನೀವು ಉತ್ತರವನ್ನು ಕೊಟ್ಟಿದ್ದೀರಿ. ಏನೋ ಒಂದು ಆಗುತ್ತದೆ. ನಾನು ನಿಮಗೆ ಮನವಿ ಮಾಡಿಕೊಳ್ಳುವುದು ಏನು ಎಂದು ಹೇಳಿದರೆ 2001ರಲ್ಲಿ NDA ಸರ್ಕಾರ ಇದ್ದಂತಹ ಸಂದರ್ಭದಲ್ಲಿ ಈ Special Economic Zoneನ conceptಗಳು ಬಂದವು. ತಾವೇನು ಓದಿದ್ದೀರಿ? 1965 ರಿಂದ ಬಂದಿರತಕ್ಕದ್ದು, you are in a very, very important position ನೀವು ಒಬ್ಬ ರಾಜ್ಯದ ಮುಖ್ಯಮಂತ್ರಿಯಾಗಿದ್ದೀರಿ ನೀವು ಅವರು, ಇವರು ಹೇಳತಕ್ಕಂಥ ಮಾತುಗಳನ್ನು ಕೇಳುವುದಕ್ಕೆ ಹೋಗಬೇಡಿ. ಕೆಲವರೆಲ್ಲಾ ಅಧಿಕಾರಿಗಳು ಇದಕ್ಕೋಸ್ಕರನೇ ಇರುತ್ತಾರೆಂದು ನಿಮಗೆ ಗೊತ್ತಿದೆ. ಎಲ್ಲರ ಕಾಲ್ಲದಲ್ಲೂ ಇದ್ದವರೇ ನಿಮ್ಮ ಸುತ್ತ ಮುತ್ತಲೂ ಇರುವವರು. ಹೊಸದಾಗಿ ಏನೂ ಮಾಡಿಕೊಳ್ಳುವುದಕ್ಕೆ ಆಗುವುದಿಲ್ಲ. ನಾನು ಆ ಸ್ಥಾನಕ್ಕೆ ಬಂದರೂ ಇವರೇ ಇರುತ್ತಾರೆ. ಅವರ ಮಾತುಗಳನ್ನು ಕೇಳುವುದಕ್ಕೆ ಹೋಗಬೇಡಿ. ನಮ್ಮದೂ ತಪ್ಪಾಗಿದೆ ಎಂದು ಹೇಳಿದ್ದೇನೆ. ಗೋಕುಲ್ ದಾಸ್ ಅವರಿಗೆ ಹಾರೋಹಳ್ಳಿಯಲ್ಲಿ Special Economic Zone ಅನ್ನು ಮಾಡಬೇಕು ಎಂದು ಹೇಳಿಬಿಟ್ಟು 400 ಎಕರೆ ಜಮೀನು ಕೊಡಬೇಕೆಂದು

HCLನಲ್ಲಿ resolution ಅನ್ನು ನಾನು ಮಾನ್ಯ ಧರ್ಮಸಿಂಗ್ ಅವರ ಕಾಲದಲ್ಲಿಯೇ ಮಾಡಿದ್ದೇನೆ. ಶ್ರೀ ಧರ್ಮಸಿಂಗ್ ಅವರು ಅಧ್ಯಕ್ಷರಾದಂತಹ ಸಮಿತಿಯಲ್ಲಿ 18,500 ಎಕರೆ ಜಮೀನನ್ನು ಕೊಡಬೇಕೆಂದು ಸಹಿತ ತಾವು ತೀರ್ಮಾನ ಮಾಡಿದ್ದೇವೆ. ನಾವು ಮಾಡಿರುವುದೆಲ್ಲಾ ಸರಿ ಎಂದು ಹೇಳುವುದಿಲ್ಲ. ಆಗಿದೆ. ನಿಮಗೆ ಏನೊಂದು ಮನವಿಯನ್ನು ಈ ಸದನದಲ್ಲಿ ಮನವಿ ಮಾಡಿಕೊಳ್ಳುತ್ತೇನೆಂದರೆ Special Economic Zone ಇದೆ. ಇದು Economic Development Zone ಅಲ್ಲ. ಇದು Special Exploitation Zone ಅಲ್ಲಿರತಕ್ಕಂಥ ಕಾರ್ಮಿಕರಿಗೆ ಒಂದು ದಿವಸ ಕೆಲಸ ಕೊಟ್ಟು ನಾಳೆ ಒದ್ದೋಡಿಸಬಹುದು. ಅಂತಹ ಪರಿಸ್ಥಿತಿ ಇದೆ. ಲೇಬರ್ ಲಾಸ್ ಆಗಲೀ ಬೇರೆ ಯಾವುದೇ ಲಾಸ್ ಇಂಪ್ಲಿಮೆಂಟ್ ಆಗುವುದಿಲ್ಲ. ಎಷ್ಟು Foreign Direct Investment India ಗೆ ಬಂದಿದೆ? ಕರ್ನಾಟಕಕ್ಕೆ ಬಂದಿದೆ ಹೇಳಿ ದಯವಿಟ್ಟು? ತಾವು ತರಿಸಿ ನೋಡಿ? Surface Transport Ministryದು, Information Department ದು, Foreign Direct Investment ಎಲ್ಲಾ ಬರೀ ತಮಿಳುನಾಡಿಗೆ ಹೋಗಿದೆ. ಯಾವ ರಾಜ್ಯಕ್ಕೂ ಸಹ ಬರುತ್ತಿಲ್ಲ. ಅದೂ ಸಹಿತ ತಮಗೆ ಗೊತ್ತಿರುವ ವಿಚಾರನೇ. ನಾನೇನು ಹೇಳುತ್ತಿದ್ದೇನೆ? ಇದನ್ನು ಸೆಂಟ್ರಲ್ ಗರ್ವನಮೆಂಟ್ ನವರು ಸ್ಟೇಟ್ ಗರ್ವನಮೆಂಟ್ ಮೇಲೆ ಇಂಪೋಸ್ ಮಾಡುತ್ತಿದ್ದಾರೆ, Special Economic Zone ದು. ನಮಗೆ ಒಬ್ಬರು IAS officer ಬಂದು ಹೇಳಿದರು, ನೋಡಿ ಸಾರ್, ಅಪ್ರೂವ್ ಮಾಡಿ ಕಳುಹಿಸಿದ್ದಾರೆ. ನಿಮಗೆ ಒಂದು ಫಾರ್ಮಾಲಿಟೀಸ್‌ಗೋಸ್ಕರ ಎಂದು ನಮ್ಮ Industry Secretary ಹೇಳಿದರು. ತಪ್ಪು ಮಾಡಿದರೆ ಏನು ಮಾಡುವುದು ಸಾರ್ ಎಂದರು. ಆದ್ದರಿಂದ Industry Minister, Chief Minister, Post Office ಅಲ್ಲ. Industry Minister, Chief Minister ಗಳು ಪೋಸ್ಟ್ ಮ್ಯಾನ್‌ಗಳಲ್ಲ. ನಾನು ನಿಮಗೆ ಏನು ಮನವಿ ಮಾಡುತ್ತೇನೆಂದರೆ Special Economic Zone ಮಾಡುತ್ತಿರತಕ್ಕದ್ದು, ದೇಶಕ್ಕೆ ನಮ್ಮನ್ನು ಶೋಷಣೆ ಮಾಡಲಿಕ್ಕೆ ವಸಾಹತುಗಳನ್ನು ನಿರ್ಮಾಣ ಮಾಡಲಿಕ್ಕೆ, Globlization, Privatisation ಹೆಸರಿನಲ್ಲಿ ನಡೆಯುತ್ತಿರತಕ್ಕಂಥ ಬಂಡವಾಳ ಶಾಹಿಗಳ ಕುತಂತ್ರ. ಚುನಾವಣೆಗೆ ದುಡ್ಡು ಬೇಕು, ಪಾರ್ಟಿಗಳು, assumption ಅದೆಲ್ಲಾ ಬೇರೆ ವಿಚಾರ. ಆದರೆ ಈ ಬಂಡವಾಳ ಶಾಹಿಗಳಿಗೆ ನಾವು ನಮ್ಮ ಭೂಮಿಗಳನ್ನು ಕೊಡುವುದಕ್ಕೆ ಆಗುವುದಿಲ್ಲ. ಆದ್ದರಿಂದ ದಯಮಾಡಿ ಎಷ್ಟೇ ಆಗಿರಲಿ. ಅವರ ಕಾಲದಲ್ಲಿ ಆಯಿತು, ಸತ್ಯ ಶೋಧನೆ ಆಯಿತು. ಇವರ ಕಾಲದಲ್ಲಿ ಆಯಿತು ಎಂದು ಅದನ್ನು ತಾವು ತಲೆ ಕೆಡಿಸಿಕೊಳ್ಳದೇ, ಸ್ಥಗಿತ ಮಾಡಿ ಸೆಂಟ್ರಲ್ ಗರ್ವನಮೆಂಟ್ ನವರ ಹತ್ತಿರ ಇದನ್ನು ತೆಗೆದುಕೊಳ್ಳಿ. ಈ ಇಶ್ಯೂವನ್ನು ರೈಸ್ ಮಾಡಿ. Who are

they to decide? ಅವರೇನು ಹೇಳುವುದಕ್ಕೆ ಎಂದು ನಾನು ಕೇಳುತ್ತೇನೆ. Special Economic Zone ವಿಚಾರದಲ್ಲಿ ನಿಮಗೆ ಗೊತ್ತಿದೆ. ನಾನು ಹಾಸನದಲ್ಲಿ ಎಷ್ಟು ಪ್ರಯತ್ನ ಮಾಡಿದೆ ಎಂದು ಗೊತ್ತಿದೆ. ಏಕೆ ಅದನ್ನು ಅಪ್ರೂವಲ್ ಕೊಡುವುದಕ್ಕೆ ಅಷ್ಟು ದಿವಸ ತೆಗೆದುಕೊಂಡರು? ಏಕೆ ಮಾಡುವುದಕ್ಕೆ ಆಗಿರಲಿಲ್ಲ? ಮಂಗಳೂರಿನಲ್ಲಿ Special Economic Zone ಇದೆ. Government Land ಇತ್ತು ಆಗಿದೆ. ಅಲ್ಲಿ ದೆಹಲಿಯಲ್ಲಿ ಕುಳಿತುಕೊಳ್ಳುತ್ತಾರೆ. Sign ಮಾಡಿ, Sign ಮಾಡಿ Special Economic Zone ಎಂದು ಕಳುಹಿಸುತ್ತಾರೆ. ಕಲ್ಕತ್ತಾದಲ್ಲಿ ಒಂದು ದೊಡ್ಡ ಬಿಲ್ಡಿಂಗ್‌ಗೆ ಒಂದು Special Economic Zone ಎಂದು ಹೇಳಿಬಿಟ್ಟಿದ್ದಾರೆ. ಹೇಳುವವರೂ, ಕೇಳುವವರೂ ಯಾರೂ ಈ ದೇಶದಲ್ಲಿ ಇಲ್ಲವಾ? This is a plat form for us. ಅದರಿಂದ ದಯಮಾಡಿ ಈ Special Economic Zone ಗೆ ತಾವು ಎಲ್ಲಾ Front Leader ಗಳನ್ನು ಕರೆಸಿ. ಇದನ್ನು ಸ್ಥಗಿತ ಮಾಡಿ. ನಮ್ಮ ರಾಜ್ಯಕ್ಕೆ Special Economic Zone, ನನ್ನ ಅಭಿಪ್ರಾಯದಲ್ಲಿ ಬೇಕಾಗಿಲ್ಲ. ಇದರಿಂದ ಕಾರ್ಮಿಕರಿಗೆ ಉಪಯೋಗ ಇಲ್ಲ. ಸರ್ಕಾರದ ಬೊಕ್ಕಸಕ್ಕೆ ಒಂದು ರೂಪಾಯಿ ದುಡ್ಡು ಬರುವುದಿಲ್ಲ. ಅದರಿಂದ ದಯಮಾಡಿ ಇದನ್ನು ನಿಲ್ಲಿಸಬೇಕೆಂದು ಹೇಳಿ ನಾನು ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ವಿ.ಸೋಮಣ್ಣ: ಒಂದೇ ಒಂದು clarification ಅಷ್ಟೇ ಅಧ್ಯಕ್ಷರೆ.

ಅಧ್ಯಕ್ಷರು:- ನಮ್ಮ ಅಧ್ಯಕ್ಷರು ನಿಮ್ಮೆಲ್ಲರ ಪರವಾಗಿ ಕೇಳುತ್ತಾರೆ. ಏಕೆಂದರೆ 5 ಗಂಟೆ ಆಯಿತು, ಬೇರೆ ಬೇರೆ ವಿಚಾರಗಳು ಇವೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ:- ನಾನು ಇರಲಿಲ್ಲ. ನಿನ್ನೆ ಪತ್ರಿಕೆಯಲ್ಲಿ ಮಾನ್ಯ ಮುಖ್ಯಮಂತ್ರಿಗಳ reaction ನೋಡಿದೆ. ಮೇಲ್ಮನೆಯಲ್ಲಿ ಅವರು ಈ SEZ ವಿಚಾರ ಚರ್ಚೆ ಮಾಡುವಾಗ, ಉತ್ತರ ಕೊಡುವಾಗ ಹೇಳಿದ್ದಾರೆ. ಕಾಂಗ್ರೆಸ್‌ನವರು ಸತ್ಯಶೋಧಕ ಸಮಿತಿ ಮಾಡಿ ಏನು ಸಾಧನೆ ಮಾಡಿದ್ದಾರೆ? ನನ್ನ ಮೇಲೆ ಏನೋ ಒಂದು ಆಪಾದನೆ ಮಾಡಲಿಕ್ಕೆ ಸಮಿತಿ ಮಾಡಿ ಎಲ್ಲಾ ಹಿರಿಯ ಶಾಸಕರನ್ನು, ಮುಖಂಡರನ್ನು ಕಳುಹಿಸಿ ಒಂದು ರಿಪೋರ್ಟ್ ತರಿಸಿಕೊಂಡು ಪ್ರಚಾರ ಗಿಟ್ಟಿಸಿಕೊಳ್ಳಬೇಕು ಎನ್ನತಕ್ಕ ರೀತಿಯಲ್ಲಿ ಮಾತನಾಡಿದ್ದಾರೆ. ನಾವು ಎಲ್ಲಾ ಭಾಗದಲ್ಲಿ ಹೋಗಿ ಆಳವಾಗಿ ಅಧ್ಯಯನ ಮಾಡಿದ್ದೇವೆ. ರಿಪೋರ್ಟ್ ತರಿಸಿಕೊಂಡು ಮಾತನಾಡಿದ್ದೇವೆ. ನಾವು ವಸ್ತುಸ್ಥಿತಿ ವಿಚಾರ ಮಾತನಾಡಿದರೆ ನಿಮ್ಮಲ್ಲಿ ಏನು ಇದೆ? ನೀವು ನೋಡಿದ್ದೀರೇನು ಎಂದು ಕೇಳುತ್ತಾರೆ. ನಾವು ಅಲ್ಲಿ ವಿಶೇಷವಾದಂತಹ ಸ್ಥಿತಿ ಏನು ಇದೆ? ಅಲ್ಲಿನ ರೈತರ

ಪರಿಸ್ಥಿತಿ ಏನಿದೆ, ನಿಜವಾಗಿಯೂ ಅವರು ಏನು ಹೇಳುತ್ತಾರೋ, ಅದನ್ನು ಕೇಳಬೇಕೆಂಬ ದೃಷ್ಟಿಯಿಂದಲೇ 21 ಸದಸ್ಯರ ಸಮಿತಿ ರಚಿಸಿ ನಾವು ಕಳುಹಿಸಿದ್ದೇವೆ. ಅಲ್ಲಿ ಏನೇನು reactions ಬಂದಿದೆಯೋ, ಬೇಕಾದರೆ, record ಆಗಿರುವ ಟೇಪ್ ಸಹ ಇದೆ, ಅದರ ಬಗ್ಗೆಯೂ ಪ್ರಸ್ತಾಪಿಸೋಣ. ಅದೇ ರೀತಿ ಅಲ್ಲಿಗೆ ಹೋದಾಗ ಪತ್ರಿಕೆಯವರೂ ಇದ್ದರು. ಮತ್ತು ಮಾಧ್ಯಮದ ಮುಖಾಂತರ ಜನರು ಏನು ಹೇಳಿದ್ದಾರೆಂಬುದೂ ಇದೆ. ಅವರು ಏನೂ ಶಿಫಾರಸ್ಸು ಮಾಡಿದ್ದಾರೆ, ನಿಮ್ಮ ಮೇಲೆ ಏನಾದರೂ ಅನವಶ್ಯಕವಾಗಿ ಏನಾದರೊಂದು ಮಾತುಗಳನ್ನು ಹೇಳಿ, ಗೂಬೆ ಕೂರಿಸುವುದನ್ನು ಮಾಡಿದ್ಧಾರೆಯೇ? ಅವರು ಹೇಳಿದ್ದು ಏನೆಂದರೆ, ಅವರ ಮೊದಲನೇ ಶಿಫಾರಸ್ಸು satellite towns ಬಗ್ಗೆ ಇದೆ. ನೀವು satellite towns ಅನ್ನು ಬೆಂಗಳೂರು ಸುತ್ತಮುತ್ತಲೂ ಮಾಡಿದರೆ, ಹೆಚ್ಚಿನ ಒತ್ತಡವಾಗಿ ನೀರು, elecetrcity, communication ಆಗಲಿ, ಅಥವಾ ಈಗಾಗಲೇ every year 10% growth ಈ ಸಿಟಿಯಲ್ಲಿ ಏನಿದೆ, ಇದು ಹೆಚ್ಚಾಗಿ ಪುನಃ ಮೂಲಭೂತ ಸೌಕರ್ಯಗಳಿಂದ ನಾಗರೀಕರು ವಂಚಿತರಾಗುತ್ತಾರೆ. ಇದನ್ನು ತಪ್ಪಿಸುವುದಕ್ಕೋಸ್ಕರ ಈ ನಗರದಿಂದ ಸುಮಾರು 60 ಕಿ.ಮೀ. ಅಥವಾ 70 ಕಿ.ಮೀ. ಅಥವಾ ದೂರದ ಸ್ಥಳಗಳಲ್ಲಿ satellite towns ಮಾಡಬೇಕು, ಸಮೀಪದಲ್ಲಿ satellite towns ಮಾಡಬಾರದು. ಸಮೀಪದಲ್ಲಿ satellite towns ಮಾಡಿದಲ್ಲಿ ಜನರು ಫಲವತ್ತಾದ ಭೂಮಿ ಕಳೆದುಕೊಳ್ಳುತ್ತಾರೆ. ಅದಕ್ಕೋಸ್ಕರ, ಇದನ್ನು ತಪ್ಪಿಸಬೇಕು ಕುಡಿಯುವ ನೀರಿಗೂ ತೊಂದರೆ ಇದೆಯೆಂಬ ಮಾತನ್ನು ಒಂದನೇ ಶಿಫಾರಸ್ಸಿನಲ್ಲಿ ಹೇಳಿದ್ದಾರೆ. ಇದರಿಂದ ನಿಮ್ಮ ಮೇಲೆ ಗೂಬೆ ಕೂರಿಸಿದಂತಾಯಿತೇ? 2ನೇ ಶಿಫಾರಸ್ಸಿನಲ್ಲಿ ಅವರು ಕೈಗಾರಿಕೆ ಬಗ್ಗೆ ಹೇಳಿದ್ದಾರೆ. ಕೈಗಾರಿಕಾ ವಲಯದಲ್ಲೂ KIADB ನವರು ಭೂಮಿ acquire ಮಾಡುತ್ತಾರೆ. ಅದರ ಬಗ್ಗೆಯೂ ಅವರು ಏನು ಹೇಳಿದ್ದಾರೆಂದರೆ, ನೀವು ಕೈಗಾರಿಕೆಗಳನ್ನು ಒಂದೇ ಕಡೆಯಲ್ಲಿ concentrate ಮಾಡುವುದರಿಂದ ಬೇರೆಯವರಿಗೆ ಉದ್ಯೋಗಾವಕಾಶ ಸಿಗುವುದಿಲ್ಲ. ನಮ್ಮ ರಾಜ್ಯದಲ್ಲಿ ಈಗಾಗಲೇ ಸುಮಾರು ಶೇ 13 ರಷ್ಟು ಜನರು unemployed ಇರುವುದರಿಂದ, ಅವರೆಲ್ಲರಿಗೂ ಇವತ್ತು ನೌಕರಿಗಳು ಸಿಗಬೇಕೆಂದರೆ, ರಾಜ್ಯದ ವಿವಿಧ ಭಾಗಗಳಲ್ಲಿ ನೀವು ಕೈಗಾರಿಕೆಗಳನ್ನು ಸ್ಥಾಪಿಸಬೇಕು. ಮತ್ತು ಬೇರೆ ಬೇರೆ ಜಿಲ್ಲೆಗಳಲ್ಲೂ ಸ್ಥಾಪಿಸಬೇಕೆನ್ನುವ ಮಾತುಗಳನ್ನು ಅವರು ಹೇಳಿದ್ದಾರೆ. ಸರ್ಕಾರದ ಪರಿಷ್ಕೃತ ಕೈಗಾರಿಕಾ ನೀತಿಯಲ್ಲಿ ರಾಜ್ಯದ ವಿವಿಧ ಭಾಗಗಳಲ್ಲಿ ಕೈಗಾರಿಕಾ ವಲಯಗಳನ್ನು ಸ್ಥಾಪಿಸಿ ತೆರಿಗೆಯಲ್ಲಿ ರಿಯಾಯಿತಿ ನೀಡಿ ಮೂಲಭೂತ ಸೌಕರ್ಯಗಳನ್ನು ಒದಗಿಸಲು ಆದ್ಯತೆ ನೀಡಿ,

ಕೈಗಾರಿಕಾ ಸ್ಥಾಪನೆಗೆ ಉತ್ತೇಜನ ನೀಡುವ ಕಾರ್ಯ ಯೋಜನೆ ಜಾರಿಯಲ್ಲಿದೆ. ಅದಕ್ಕೋಸ್ಕರ ನೀವು ಕೈಗಾರಿಕೆಗಳನ್ನು ಅಲ್ಲಿಗೆ ತೆಗೆದುಕೊಂಡು ಹೋಗಬೇಕೆಂದು ಹೇಳಿದ್ದಾರೆ. ಇದು ನಿಮ್ಮ ಮೇಲೆ ಆಪಾದನೆ ಮಾಡಿದಂತಾಯಿತೇ? ಮೂರನೆಯದು ಅವರು ವಿಶೇಷ ಆರ್ಥಿಕ ವಲಯದ ಬಗ್ಗೆ ಹೇಳಿದ್ದಾರೆ. ಏಕೋ ಸಿಂಧ್ಯರವರು ಮಾತನಾಡುತ್ತಾ, ಏನೇನೋ ಹೇಳಿದರು. ನನಗೆ ಅದು ಗೊತ್ತಿಲ್ಲ. ಅವರಿಗೆ ತಿಳಿದಿರುವಂಥಾದ್ದನ್ನು ಅವರು ಹೇಳಿದ್ದಾರೆ, ನನಗೆ ತಿಳಿದಿರುವುದನ್ನು ನಾನು ಹೇಳುತ್ತೇನೆ. ವಿಶೇಷ ಆರ್ಥಿಕ ವಲಯದ ಬಗ್ಗೆ ರಾಜ್ಯ ಸರ್ಕಾರ ಕಾನೂನಿನ ಪ್ರಕಾರ ನನಗೆ ತಿಳಿದಂತೆ, ನಾನು ಸ್ವಲ್ಪ ಮಟ್ಟಿಗೆ ಏನು ಓದಿದ್ದೇನೆಂದರೆ, ರಾಜ್ಯ ಸರ್ಕಾರ ಭೂಮಿಯನ್ನು ಗುರ್ತಿಸಿ, ಇಂತಹ ಕಡೆ ನೀವು Special Zone ಮಾಡಬೇಕೆಂದು ಆ ಸಮಿತಿಯು ಶಿಫಾರಸ್ಸು ಮಾಡಿದರೆ, ಅದನ್ನೇ ಅವರು ಒಪ್ಪಿಕೊಂಡು approve ಮಾಡಿ ಕಳುಹಿಸುತ್ತಾರೆ.

ಶ್ರೀ ಪಿ.ಜಿ.ಆರ್.ಸಿಂಧ್ಯಾ: ಸರ್, actually, rules ಪುಸ್ತಕದಲ್ಲಿ ಇರುವುದು ಹಾಗೆಯೇ. ನಾನು industries Minister ಆಗಿ duties ಅನ್ನು discharge ಮಾಡುವ ಸನ್ನಿವೇಶದಲ್ಲಿ ಕೇಂದ್ರ ಸರ್ಕಾರದಿಂದ ಬಂದಿರುವ ಪತ್ರಗಳು ನನ್ನ ಕಾರ್ಯದರ್ಶಿಗಳು ನನ್ನೊಂದಿಗೆ ಮಾತನಾಡಿರುವಂತೆ ಕಡತದಲ್ಲಿರುವುದನ್ನು ನಾನು ಹೇಳಲೇಬೇಕಾಗುತ್ತದೆ.

ಶ್ರೀ ಕಟ್ಟಾ ಸುಬ್ರಮ್ಮಣ್ಯನಾಯ್ಡು: ಅದರ ಬಗ್ಗೆ ನಾನು clarify ಮಾಡುತ್ತೇನೆ. Establishment of Special Economic Zone ಬಗ್ಗೆ ಬೆಳಗ್ಗೆ ತಾವು ಓದಿದಿರಲ್ಲ, ಓದಿದ್ದರಲ್ಲಿ 2ನೇ chapter 3ನೇ para ದಲ್ಲಿ ಏನಿದೆ ಎಂಬುದನ್ನು ತಾವು ನೋಡಿ ಸರ್, ಗೊತ್ತಾಗುತ್ತದೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ನಮ್ಮಲ್ಲೂ ಪುಸ್ತಕ ಇದೆ. ನಾನು ಅದನ್ನೇ ಹೇಳುತ್ತಿದ್ದೇನೆ.

ಶ್ರೀ ಕಟ್ಟಾ ಸುಬ್ರಮ್ಮಣ್ಯನಾಯ್ಡು: ತಾವು ಹೇಳುತ್ತಿರುವುದು ಇದಕ್ಕೆ ಸಂಬಂಧವಿಲ್ಲ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ನನ್ನ ಮಾತನ್ನು ಕೇಳಿ. ಅನಂತರ, ಮೂರನೆಯದು, ಇದು Special Economic Zone ಆಗಿರುವುದರಿಂದ ಎಲ್ಲಿ ಮಾಡಬೇಕು, ಹೇಗೆ ಮಾಡಬೇಕೆಂಬ ಬಗ್ಗೆ ರಾಜ್ಯ ಸರ್ಕಾರದ consent ಇಲ್ಲದೆ, proposal ಇಲ್ಲದೆ, Suo-moto ಅವರಿಗೆ ಯಾವುದೇ land ಅನ್ನು

ಗುರುತಿಸುವುದಕ್ಕಾಗುವುದಿಲ್ಲ. ಯಾವ land fertile ಇದೆ, ಯಾವ land ಬಂಜರು ಇದೆ, ಯಾವ land ಎಲ್ಲಿದೆ ಎಂಬ ಎಲ್ಲ records ಅನ್ನು ರಾಜ್ಯ ಸರ್ಕಾರಕ್ಕೆ ಕೊಡಬೇಕು. ಗೋಮಾಳ ಯಾವುದು, Government land ಯಾವುದು, private land ಯಾವುದು, ಭಾಗಯತ್ ಯಾವುದು, ಇವೆಲ್ಲವನ್ನೂ ಇವರೇ ಗುರ್ತಿಸಬೇಕು. ಇವರೇ ಗುರುತಿಸಿ ಹೇಳಿಕೊಟ್ಟರೆ, ಅವರು ಅದನ್ನು ಒಪ್ಪುತ್ತಾರೆ. ಇಲ್ಲದಿದ್ದರೆ, ಇಲ್ಲ. ಇದು ಮೂರನೆಯ ಸಿದ್ಧಾಂತ ನಿಮ್ಮ ಮೇಲೆ ಏನು ಗೂಬೆ ಕೂರಿಸಿದರು? ನಮ್ಮ ಪಕ್ಷದವರು ಮಾಡಿದ 4ನೇ ಶಿಫಾರಸ್ಸನ್ನು ರಾಜ್ಯದ ಹಿತದೃಷ್ಟಿಯಿಂದ ಅವರು ತಿರುಗಾಡಿ, ಸುತ್ತಾಡಿ ಮಾಡಿದರೆ, ಇವರು ಏನಾದರೊಂದು ಹೇಳಿ ಅದನ್ನು ನೋಡುವುದಿಲ್ಲ, ಅದರಲ್ಲಿ ಏನೂ ಇಲ್ಲ. ಪುಸ್ತಕವನ್ನು ಓದುವುದಿಲ್ಲ, ನಾವು ಕೊಟ್ಟದ್ದನ್ನು ನೋಡುವುದೂ ಇಲ್ಲ, ಮತ್ತೆ ಏನು ಬೇಕೋ, allegation ಮಾಡುವುದು, ಹೊರಟು ಹೋಗುವುದು, Hit and run ಎನ್ನುತ್ತಾರಲ್ಲ. ಹಾಗೆ ಕೆಲವು ಕಡೆ ಹುಡುಗರು ಏನು ಮಾಡುತ್ತಾರೆಂದರೆ, ಮೋಟಾರ್ ಬೈಕ್‌ನಲ್ಲಿ ಬರುತ್ತಾರೆ. ತಮಗೆ ಬೇಕಾದವರಿಗೆ ತಟ್ಟನೆ ಹೊಡೆದು, ಬೈಕ್‌ನಲ್ಲಿ ಹೊರಟು ಬಿಡುತ್ತಾರೆ. ಇಂತಹ ನಂಬರಿನ ಮೋಟಾರ್ ಬೈಕಿನವನು ಹೀಗೆ ಹೊಡೆದನೆಂದು ಅವರನ್ನು ಮುಂದಿನ ಪೋಲಿಸ್ ಸ್ಟೇಷನ್‌ನಲ್ಲೇ ಹಿಡಿದುಕೊಳ್ಳಬೇಕು. ಇವರು ಮಾಡುವುದು ಹಾಗೆಯೇ. ಏನಾದರೊಂದು ಹೇಳುವುದು, ಓಡಿ ಹೋಗುವುದು. ನಾವು ನಿಮಗೆ ಇನ್ನೊಂದು ಮಾತು ಹೇಳಿದೆವು. ಇದರಲ್ಲಿ ಇರುವುದಾದರೂ ಏನಿದೆ? ಖಾಸಗಿ ಅಭಿವೃದ್ಧಿದಾರರಿಗೆ ಭೂಮಿಯ ಮಾಲೀಕತ್ವವನ್ನು ಹಸ್ತಾಂತರಿಸುವ ಬದಲು ಗುತ್ತಿಗೆ ಆಧಾರದ ಮೇಲೆ ನೀಡಬೇಕು. ಅಂದರೆ, ownership ಕೊಡುವುದಕ್ಕಿಂತಲೂ lease ಕೊಡಬೇಕೆಂಬುದು. ಏನಾಯಿತು ಸ್ವಾಮಿ? ಇದು ಒಳ್ಳೆಯ ಸಲಹೆಯಲ್ಲವೇ? ಕೇಂದ್ರ ಸರ್ಕಾರವು ಖಾಸಗಿ ಅಭಿವೃದ್ಧಿದಾರರಿಗೆ ನೀಡುವ ಭೂಮಿಗೆ ಗರಿಷ್ಟ ಮಿತಿ ಹಾಕಿ, 2,000 ಹೆಕ್ಟೇರ್ ಮಿತಿಯನ್ನು ನಿಗದಿಪಡಿಸಬೇಕು. ಇದೇನು ಸ್ವಾಮಿ? ಈಗ 5,000 ಹೆಕ್ಟೇರ್‌ವರೆಗೆ ಇದೆ. ಅದನ್ನು 2,000 ಹೆಕ್ಟೇರ್‌ವರೆಗೆ ಇಳಿಸಬೇಕೆಂಬುದಿದೆ. ಇದರಿಂದ ಇವರಿಗೇನು ತೊಂದರೆ? ಮೂರನೆಯದು, ಯಾವ ವಿಶೇಷ ಆರ್ಥಿಕ ವಲಯದ ಭೂಮಿ ನಿಗದಿತ ಮಿತಿಗಿಂತಲೂ ಹೆಚ್ಚಾಗಿದೆಯೋ, ಅಲ್ಲಿ ರಾಜ್ಯ ಸರ್ಕಾರವೇ ಯೋಜನೇಯನ್ನು ಕೈಗೆತ್ತಿಕೊಳ್ಳಬೇಕು ಅಥವಾ ಜಂಟಿ ಸಹಭಾಗಿತ್ವದಲ್ಲಿ ಸಾರ್ವಜನಕ ವಲಯದ ಹೆಚ್ಚಿನ ಪಾಲುದಾರಿಕೆಯಲ್ಲಿ ಯೋಜನೆಯನ್ನು ಕೈಗೆತ್ತಿಕೊಳ್ಳಬೇಕು. ಎಲ್ಲಿಯಾದರೂ 2,000 ಹೆಕ್ಟೇರ್‌ಗಿಂತಲೂ ಹೆಚ್ಚಿಗೆ ಭೂಮಿ ಇದ್ದರೆ, ಸರ್ಕಾರದವರೇ ನೇರವಾಗಿ

ಮಾರಬೇಕೆಂಬ ಸಲಹೆ ಇದೆ. ವಿಶೇಷ ಆರ್ಥಿಕ ವಲಯ ಅಧಿನಿಯಮ 2005ರಲ್ಲಿ ಬಹು ಬೆಳೆ ಕೃಷಿ ಪ್ರದೇಶವನ್ನು ಸ್ವಾಧೀನಪಡಿಸಿಕೊಳ್ಳುವ ಅವಕಾಶಕ್ಕೆ ಮಿತಿ ಹಾಕಬೇಕು. ವಿಶೇಷ ಆರ್ಥಿಕ ವಲಯದ ಭೂಮಿಗೆ ಪರಿಹಾರ ನಿಗದಿಪಡಿಸುವ ಸಂದರ್ಭದಲ್ಲಿ ಬದಲಿ ಭೂಮಿಯನ್ನು ಕೊಳ್ಳಲು ಅವಶ್ಯವಿರುವ ಮೊತ್ತವನ್ನು ನಿಗದಿಪಡಿಸಬೇಕು ಮತ್ತು ಸವಕಳಿ ನಿಯಮವನ್ನು ಅನುಸರಿಸಬಾರದು. ಯಾವುದೇ ಕಾರ್ಯ ಯೋಜನೆಯನ್ನು ಕೈಗೊಳ್ಳುವ ಮೊದಲು ಪುನರ್ವಸತಿಯು ಸ್ಥಳಾಂತರಿಸುವುದಕ್ಕಿಂತಲೂ ಮುಂಚಿತವಾಗಿ ಆಗಬೇಕು. ಬಾಧಿತರು ಉದ್ಯೋಗ ಪಡೆಯಲು ಪ್ರಥಮ ಹಕ್ಕುದಾರರಾಗಬೇಕು. ಅಂತಹವರಿಗೆ ಅಗತ್ಯವಾಗಿ ಬೇಕಾದ ನಿಪುಣತೆ ಒದಗಿಸುವ ಮೂಲಕ ಆ ಜನರಿಗೆ ನೌಕರಿ ಕೊಡಬೇಕು. ಇದರಲ್ಲಿ ಏನು ತಪ್ಪಿದೆ? ಹೀಗೆ ಅನೇಕ ಸಲಹೆಗಳನ್ನು ಕೃಷಿ ಮತ್ತು ತೋಟಗಾರಿಕೆ ಇಲಾಖೆಯು ಇವೆಲ್ಲನ್ನು ಸೇರಿಸಿ, 10–15 ಸಲಹೆಗಳನ್ನು ಕೊಟ್ಟಿದ್ದಾರೆ. ಇದಲ್ಲದೆ, ನಮ್ಮವರು ಏನು ಹೇಳಿದ್ದಾರೆಂದರೆ, ನಾವೆಲ್ಲರೂ ಸೇರಿಕೊಂಡು ಇದರ ಬಗ್ಗೆ Prime Minister ಅವರನ್ನು apprise ಮಾಡಬೇಕೆಂಬ ಮಾತನ್ನೂ ಹೇಳಿದ್ದಾರೆ. ಅಂದರೆ, ನಾವು ಇದರ ಬಗ್ಗೆ Prime Minister ಅವರನ್ನು ಕೂಡ apprise ಮಾಡಬೇಕು. ಕೆಲವು ಅಡೆತಡೆಗಳೇನಿವೆ, ತೊಂದರೆಗಳೇನಿವೆ, ಅದನ್ನೂ ಹೇಳಿಕೊಡಬೇಕು, ಮತ್ತು ಸರ್ಕಾರಕ್ಕೂ ಈ ಸಲಹೆಗಳನ್ನು ಕೊಟ್ಟರೆ, ನಿಮ್ಮ ರಿಪೋರ್ಟ್ ಏನಿದೆ? ನೀವು ಸತ್ಯಶೋಧನೆ ಏನು ಮಾಡಿದ್ದೀರಿ ಎಂದರೆ ಏನೆಂದು ಹೇಳಬೇಕು? ನೀಡಿ, ಓದಿ. ಓದಿದ ಮೇಲೆ ನೀವು ಕೊಟ್ಟ ವರದಿಯಲ್ಲಿ ಇಂತಿಂಥಾದ್ದು ತಪ್ಪುಗಳಿವೆ ಎಂದರೆ, ನಮ್ಮ ರಿಪೋರ್ಟ್, ನಮ್ಮ ಪಾರ್ಟಿ. ನಮ್ಮದು National Congress Party. ನೀವು ಅದನ್ನು study ಮಾಡಬೇಡಿ. SEZ scheme ಏನು? KIADB scheme ಏನು? satellite towns ಏನು? Communication ಏನು? ಇವೆಲ್ಲವನ್ನು ತಿಳಿದುಕೊಳ್ಳಬೇಡಿ ಎಂದರೆ, ನನ್ನನ್ನು ಕೇಳಬೇಕಾದರೆ, ನೀವ್ಯಾರು ಹೇಳುವವರು? ನಿಮಗೇನು ಸಂಬಂಧ? ಇದನ್ನೂ ನಾನು ಕೇಳಬೇಕಾಗುತ್ತದೆ. ಅದಕ್ಕೋಸ್ಕರ, ದಯವಿಟ್ಟು ಇಂತಹ ಮಾತುಗಳನ್ನು ಆಡಲು ಹೋಗಬೇಡಿ. ನಾವು ತಿಳಿದುಕೊಂಡು ಇದರ ಬಗ್ಗೆ ನಮ್ಮ ಸದಸ್ಯರುಗಳಿಗೆ ತಿಳಿಸಬೇಕೆಂಬ ದೃಷ್ಟಿಯಿಂದಲೇ ಇದನ್ನು ಮಾಡಿರುವಂಥಾದ್ದು. ಇದೊಂದು. ನಿಮಗೆ ಈಗಲೂ ನಾನು ಸ್ಪಷ್ಟವಾಗಿ ಹೇಳುವುದೇನೆಂದರೆ, ಇದನ್ನು ನಾವು ಕೊಟ್ಟಿದ್ದೇವೆ. ಇದರಲ್ಲಿ ಸರಿ ಇರುವುದನ್ನು ನೀವು ಒಪ್ಪಿಕೊಳ್ಳಿ. ಸರಿ ಇಲ್ಲವೆಂದರೆ ಮುಂದೆ ನೋಡೋಣ, ಯಾವ ರೀತಿಯಾಗಿ ನಾವು ತೆಗೆದುಕೊಳ್ಳಬೇಕೋ, ತೆಗೆದುಕೊಳ್ಳೋಣ. ಅದಕ್ಕೋಸ್ಕರ, ಈಗಾಗಲೇ ವಿರೋಧ

ಪಕ್ಷದ ನಾಯಕರಾದಿಯಾಗಿ ಎಲ್ಲರೂ ಡಿಮ್ಯಾಂಡ್ ಮಾಡಿದ್ದಾರೆ. ಇದರ ಬಗ್ಗೆ ನಿಮಗೆ ಸಂಶಯ ಇತ್ತೆಂದರೆ ಈಗಾಗಲೇ ನಾವು ಡಿಮ್ಯಾಂಡ್ ಮಾಡಿದ್ದೇವೆ. House Committee ಮಾಡಿ. ಎಲ್ಲ ಕಡೆಗಳಿಗೂ ಹೋಗಲಿ Where it is neccessary , whether it is in need, whether the real people are acquiring the land or fraud or bogus companies are coming let them find out ಅದಕ್ಕಾಗಿ ಒಂದು ಕಮಿಟಿ ಮಾಡಿ. ಬಾಕಿ ವಿಷಯಕ್ಕೆ ಕಮಿಟಿ ರಚಿಸಲು ತಾವು ಒಪ್ಪಿಕೊಳ್ಳುತ್ತೀರಿ, ಇದಕ್ಯಾಕೆ ತಾವು ಒಪ್ಪಿಕೊಳ್ಳಬಾರದು? ಇದನ್ನು ರಚಿಸುವುದರಿಂದ ನಿಮಗೇನೂ ತೊಂದರೆಯಿಲ್ಲ. ನೀವಂತೂ ಇದರಲ್ಲಿ involve ಆಗಿಲ್ಲ. ಅವರು ಅಷ್ಟು ಮಾಡಿದ್ದಾರೆ, ಇವರು ಇಷ್ಟು ಮಾಡಿದ್ದಾರೆಂದು ನೀವು ಹೇಳುತ್ತಿದ್ದೀರಿ, ಅದೇನೆ ಇರಲಿ. ಈಗ ಯಾರು ಮಾಡಿದ್ದಾರೆ? ಎಷ್ಟು ಮಾಡಿದ್ದಾರೆ? ಎಂಬುದು ಗೊತ್ತಾಗಲಿ. ಅದಕ್ಕಾಗಿ ಸಮಿತಿ ರಚಿಸಿ. ಹಿಂದಿನವರೂ ಮಾಡಿದ್ದು ಅದರ ವ್ಯಾಪ್ತಿಗೆ ಬರುತ್ತದೆ. ಅವರು ಬೋಗಸ್ ಕಂಪನಗಳಿಗೆ promote ಮಾಡಿದ್ದರೆ, ಅವರದೂ ಅದರ ವ್ಯಾಪ್ತಿಗೆ ಬರುತ್ತದೆ. ಈಗಿನವರು ಬೋಗಸ್ ಕಂಪನಿಗಳಿಗೆ encourage ಮಾಡಿದ್ದರೆ ಅಥವಾ notify ಮಾಡುವುದಕ್ಕೆ ಪ್ರಚೋದನೆ ಮಾಡಿದ್ದರೆ, ಪ್ರಸ್ತಾವನೆ ಇದ್ದರೆ, ಅವರದೂ ಹೊರಗೆ ಬರುತ್ತದೆ. ಆದುದರಿಂದ ತಾವು ದಯವಿಟ್ಟು House Committee ರಚಿಸಲಿಕ್ಕೆ ಒಪ್ಪಿಕೊಳ್ಳಿ. ಈ report ಬಗ್ಗೆ ದಯವಿಟ್ಟು ಲಘುವಾಗಿ ಮಾತನಾಡಬೇಡಿ. ಮಾನ್ಯ ಕಾಗೋಡು ತಿಮ್ಮಪ್ಪನವರ ಅಧ್ಯಕ್ಷತೆಯ ಸಮಿತಿ ಬಹಳ serious ಆಗಿ ಇದನ್ನು ಸಿದ್ಧಪಡಿಸಿದೆ. 76 ವರ್ಷ ವಯಸ್ಸಿನ ಮತ್ತು ಈ ಭೂಮಿಯ ಹೋರಾಟದಲ್ಲಿ ತನ್ನದೇ ಆದಂತಹ ಛಾಪು ಮೂಡಿಸಿರುವ, ಆಗಿನ ಕಾಲದ ಕಾಗೋಡು ಚಳುವಳಿಯಲ್ಲಿ, ಆಗಿನ್ನೂ ನಾವ್ಯಾರು ಹೆಚ್ಚಾಗಿ ರಾಜಕೀಯದಲ್ಲಿ ಇರಲಿಲ್ಲ. ಹೋರಾಟ ಮಾಡಿದಂತಹ ಒಬ್ಬ ವ್ಯಕ್ತಿಯಾದ ಮಾನ್ಯ ಕಾಗೋಡು ತಿಮ್ಮಪ್ಪನವರ ಅಧ್ಯಕ್ಷತೆಯಲ್ಲಿ ಅನೇಕ ಜನ ನಮ್ಮ ಶಾಸಕರು, ಅನಭವಸ್ಥರು, Chamber of Commerce representatives ಇವರೆಲ್ಲರಿಗೂ ಸೇರಿಸಿ ನಾವು ಕಳುಹಿಸಿದ್ದೆವು. ಅದರಲ್ಲಿ ಯಾವುದಾದರೂ ಸರಿಯಿಲ್ಲವೆಂದರೆ, ಇಂಥಾದ್ದು ಸರಿಯಿಲ್ಲವೆಂದು ಹೇಳಿ. ಆದರೆ ಸಾರಾಸಗಟಾಗಿ ಆ report ನಲ್ಲಿ ಏನೂ ಇಲ್ಲವೆಂದು ಹೇಳುವುದಕ್ಕೆ ಹೋಗಬೇಡಿ. ಈ ವರದಿಗೂ ನಿಮಗೂ ಸಂಬಂಧವಿಲ್ಲ. ಇದು ಅವರು KPCC ಅಧ್ಯಕ್ಷನಾದ ನನಗೆ submit ಮಾಡಿದಂತಹ report ಆಗಿದೆ. ಇದರ ಬಗ್ಗೆ ಗೇಲಿ ಮಾಡತಕ್ಕ ಮತ್ತು ಹೇಳತಕ್ಕಂಥ ನೈತಿಕ ಹಕ್ಕು ನಮಗಿಲ್ಲ. SEZ ವಿಷಯಕ್ಕೊಂದಕ್ಕೆ ಅಲ್ಲ, 3-4 ವಿಷಯಗಳನ್ನು ಸೇರಿಸಿ ಸಮಿತಿ ರಚಿಸಿ

ಎಂದು ನಾವು ಕೇಳುತ್ತಿದ್ದೇವೆ. SEZ ಜೊತೆಗೆ Satellite Town ನಿರ್ಮಾಣ KIADB Industrial policy ಇದೆಲ್ಲವನ್ನೂ ಕೂಡ ಸೇರಿಸಿ ಒಂದು ಸದನ ಸಮಿತಿ ಮಾಡಿ. ಎಲ್ಲರೂ ಆ ಸದನ ಸಮಿತಿ ಮೂಲಕ ಹೋಗಿ report ತಂದ ಮೇಲೆ ಮುಂದಿನ ಕ್ರಮವನ್ನು ಜರುಗಿಸಿ.

ಶ್ರೀ ಬಸವರಾಜ್ ರಾಯರೆಡ್ಡಿ:- ಸನ್ಮಾನ್ಯ ಅಧ್ಯಕ್ಷರೆ, ನಾನು ಮಾತನಾಡುವಂತಹ ಸಂದರ್ಭದಲ್ಲಿ...

ಅಧ್ಯಕ್ಷರು:-ಎಲ್ಲರೂ clarification ಕೇಳುತ್ತಾ ಕುಳಿತರೆ ಹೇಗೆ? ನಾನು ನಿಮ್ಮ ಹೆಸರನ್ನು ಕರೆದೆನೇ?

ಶ್ರೀ ಬಸವರಾಜ್ ರಾಯರೆಡ್ಡಿ:- ತಾವು ಮೌನವಾಗಿದ್ದಿರಿ. ತಮ್ಮ ಮೌನವನ್ನು ನಾನು ಸಮ್ಮತಿ ಎಂದು ಭಾವಿಸಿಕೊಂಡು ಮಾತನಾಡುತ್ತಿದ್ದೇನೆ. ಒಂದೇ ಒಂದು ಸಣ್ಣ clarification ಕೇಳಬಯುಸುತ್ತೇನೆ.

ಅಧ್ಯಕ್ಷರು:- ಆಯಿತು, ಕೇವಲ ಒಂದೇ ಒಂದು clarification ಕೇಳಿ. ಸುಮ್ಮನೆ ಭಾಷಣ ಮಾಡಬೇಡಿ.

ಶ್ರೀ ಬಸವರಾಜ್ ರಾಯರೆಡ್ಡಿ:- ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳನ್ನು ಒಂದು clarification ಕೇಳಬಯಸುತ್ತೇನೆ. ತಾವು ಸಿಲ್ಕ್ ಕಂಪನಿಗೆ ನಂದಗುಡಿಯಲ್ಲಿ SEZಗಾಗಿ ಅನುಮತಿ ಕೊಡಲಿಕ್ಕೆ ಹೊರಟಿದ್ದೀರಿ. ಯಾವ ಉದ್ದೇಶಕ್ಕಾಗಿ ಅವರಿಗೆ ಕೊಡುತ್ತಿದ್ದೀರಿ ಎಂಬ ಬಗ್ಗೆ specific purpose ಇರಬೇಕಲ್ಲವೇ? ಸುಮ್ಮನೆ Multi purpose ಎಂದರೆ ಆಗುವುದಿಲ್ಲ. 12,000 ಎಕರೆಯನ್ನು ಯಾವ purposeಗಾಗಿ ನೀವು ಕೊಡಲಿಕ್ಕೆ ಹೊರಟಿದ್ದೀರಿ ಎಂಬುದನ್ನು ದಯಮಾಡಿ ಸ್ಪಷ್ಟಪಡಿಸಬೇಕು. ಇನ್ನೊಂದು ಮುಖ್ಯವಾಗಿ ಕಾನೂನಿನ ವಿಚಾರವನ್ನು ಕೇಳಬಯಸುತ್ತೇನೆ. ನಾವು land acquisition ಮಾಡುವುದಿಲ್ಲ, ರೈತರಿಂದಲೇ ಅವರು ನೇರವಾಗಿ ಖರೀದಿ ಮಾಡಲಿ ಎಂದು ತಾವು ಹೇಳುತ್ತೀರಿ. Land Reforms Act, Section 79ರ ಪ್ರಕಾರ ಕೃಷಿಕರಲ್ಲದಿರುವವರು ಕೃಷಿ ಜಮೀನನ್ನು ಖರೀದಿ ಮಾಡುವುದಕ್ಕಾಗುವುದಿಲ್ಲ. ಅವರು ಜಮೀನು ಖರೀದಿಸುವಂತಿದ್ದರೆ, ಆದಕ್ಕೆ ಸರ್ಕಾರ permission ಕೊಡಬೇಕಾಗಿರುತ್ತದೆ. Non-agriculturist ಆಗಿದ್ದು, ಯಾರ income 2 ಲಕ್ಷ ರೂ.ಗಳಿಗಿಂತ ಜಾಸ್ತಿಯಿದೆಯೋ ಅವರು ಒಂದು ಎಕರೆ ಕೃಷಿ ಜಮೀನನ್ನೂ ಸಹ ಖರೀದಿ ಮಾಡಲಿಕ್ಕೆ ಬರುವುದಿಲ್ಲ. ಅಂದರೆ ಇವರು 7 ಸಾವಿರ ಎಕರೆ

ಖರೀದಿಸಲು prior permission ಕೊಡಬೇಕಾಗುತ್ತದೆ. With the prior permission of the Government, they have to purchase the land. ಅದರ ಅರ್ಥ ಅಲ್ಲಿ ಎಲ್ಲ ತರಹದ ವ್ಯವಹಾರಗಳು ನಡೆಯುಂತಹ ಶಂಕೆ ಇದೆ. ಆದ್ದರಿಂದ ಈ ವಿಚಾರದಲ್ಲಿ ನಾನು ಮಾನ್ಯ ಮುಖ್ಯಮಂತ್ರಿಗಳಿಗೆ, ಇದನ್ನು ಕೈ ಬಿಡಿ ಎಂದು ಹೇಳುತ್ತೇನೆ. 7 ಸಾವಿರ ಎಕರೆ ಖರೀದಿಸಲು ನೀವು ಅವರಿಗೆ permission ಕೊಡತಕ್ಕಂಥ ಅವಶ್ಯಕತೆ ಇಲ್ಲ. ಇದನ್ನು ಕೈ ಬಿಟ್ಟು ಬೇರೆ ಕಡೆ ಅವರಿಗೆ ಮಾಡಿಕೊಡಿ ಎಂದು ನಾನು ಕೇಳುತ್ತಿದ್ದೇನೆ.

ಶ್ರೀ ಡಿ.ಕೆ.ಶಿವಕುಮಾರ್:- ಮಾನ್ಯ ಅಧ್ಯಕ್ಷರೆ,..

ಅಧ್ಯಕ್ಷರು:- ಒಂದು ನಿಮಿಷ.

ಶ್ರೀ ಎಂ.ಪಿ.ವೆಂಕಟೇಶ್:- ಮಾನ್ಯ ಅಧ್ಯಕ್ಷರೆ, ನಮ್ಮ ಹಳ್ಳಿಯಲ್ಲಿ ನಾಟಕ ಆಡಿದಾಗ, 'ಪಟೇಲರು ಬಂದರು, ಶುರು ಮಾಡು', 'Chairman ಬಂದರು, ಶುರು ಮಾಡು' ಅಥವಾ 'ಇನ್ನೊಬ್ಬರು ಬಂದರು ಶುರು ಮಾಡು' ಎಂದು ಹೇಳಲಾಗುತ್ತಿರುತ್ತದೆ. ಅದರಂತೆ ನಿನ್ನೆಯಿಂದ ಇದೆ ಕಥೆಯಾಗಿ ಬಿಟ್ಟಿದೆ. ಒಬ್ಬರಾದ ನಂತರ ಮೇಲೋಬ್ಬರು ಹೇಳಿದ್ದನ್ನು ಕೇಳಿಸಿಕೊಂಡು ನಮಗೆ ಕಿವಿಯೇ ಕೆಟ್ಟುಹೋಗುತ್ತಿದೆ. ಅದೇ ಜನ, ಅದೇ ಹಾಡು, ಅದೇ ಕಥೆ. ಅದನ್ನೆ ನಾವು ಎಷ್ಟು ಸಲ ಕೇಳುವುದು? ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಟ್ಟ ಮೇಲೂ ಮತ್ತೆ ಅದೇ ಕಥೆ...

ಶ್ರೀ ಡಿ.ಕೆ.ಶಿವಕುಮಾರ್:- ಅವರಿಗೆ ಏನೋ ಒಂದು ಸ್ಥಾನ ಕೊಟ್ಟುಬಿಡಿ.

ಅಧ್ಯಕ್ಷರು:- ಆಯಿತು, ಇವರೊಂದು ಕ್ಲಾರಿಫಿಕೇಷನ್ ಕೇಳಲಿ ಬಿಡಿ.

ಶ್ರೀ ಡಿ.ಕೆ.ಶಿವಕುಮಾರ್:- ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳು ತಮ್ಮ ಉತ್ತರದಲ್ಲಿ acquisition ಬಗ್ಗೆ ತಮ್ಮದೆ ಆದಂತಹ ಪಾಲಿಸಿಯೊಂದನ್ನು ರಾಜ್ಯಕ್ಕೆ ಕೊಡುತ್ತಾರೆಂದು ನಾವು ಅಂದುಕೊಡಿದ್ದೆವು. SEZ ಆಗಿರಬಹುದು, KIADB ಆಗಿರಬಹುದು, BMRDA ಆಗಿರಬಹುದು, ಯಾವುದೇ ಆಗಿರಲಿ, ಅವುಗಳಿಂದ acquisition ಏನು ನಡೆಯುತ್ತಿದೆ, ಅದರ ಬಗ್ಗೆ ಈ ಸರ್ಕಾರ ಈ ರೀತಿ ಬದ್ಧವಾಗಿದೆ. ಎಂದು ಮಾನ್ಯ ಮುಖ್ಯಮಂತ್ರಿಗಳು ಹೇಳುತ್ತಾರೆಂದು ನಾವು ಅಂದುಕೊಂಡಿದ್ದೆವು. ನಮಗಿಂತ ತಾವು ಸ್ವಲ್ಪ forward ಹೋಗಿದ್ದೀರಿ ಎಂದು ನಾವು ಮಾತನಾಡುವಂತಹ ಸಂದರ್ಭದಲ್ಲಿ ಅವರಿಗೆ ಹೇಳಿದ್ದೆವು. 8 ಸಾವಿರ ಅಡಿ ಕೊಡುವುದು, ಸ್ವಲ್ಪ ದುಡ್ಡನ್ನು ಜಾಸ್ತಿ ಮಾಡುವುದರ ಬಗ್ಗೆ ಚಿಂತನೆ

ಮಾಡಿದ್ದೇವೆಂದು. You have gone on record. ಇದಲ್ಲದೆ ನಮ್ಮ ಚಿಂತನೆ ಏನೆಂದರೆ, ಬೆಂಗಳೂರು (ಗ್ರಾಮಾಂತರ) ಜಿಲ್ಲೆಯಲ್ಲಿ ಇಷ್ಟು ವ್ಯಾಪಕವಾಗಿ ಏನು ಚಿಂತನೆ ನಡೆಯುತ್ತಿದೆಯಲ್ಲಾ, ಇದನ್ನು ಕೈ ಬಿಡುತ್ತೀರಾ? ಇಲ್ಲವೇ ಇದನ್ನು ಮುಂದುವರೆಸುತ್ತೀರಾ? ಇದರ ಬಗ್ಗೆ ನಿಖರವಾದಂತಹ policy ಏನು ಎನ್ನುವುದನ್ನು ಅವರು ಘೋಷಣೆ ಮಾಡಬೇಕು.

ಶ್ರೀ ಕೆ.ಶ್ರೀನಿವಾಸಗೌಡ:- ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳು ಮಾತನಾಡುವಾಗ...

ಅಧ್ಯಕ್ಷರು:- ಇಷ್ಟೊಂದು ಜನ clarification ಕೇಳಬೇಕೆಂದರೆ ಹೇಗೆ? Too much of clarifications.

(ಗೊಂದಲ)

ಶ್ರೀ ಹೆಚ್.ಡಿ.ಬಸವರಾಜ್:- ... ಈ ರೀತಿ ಎಲ್ಲರೂ clarification ಕೇಳುತ್ತಾ ಹೊರಟರೆ ಹೇಗೆ?...

(ಗೊಂದಲ)

ಅಧ್ಯಕ್ಷರು:- ಅವರ ನಾಯಕರುಗಳು ಅವರನ್ನು ನಯಂತ್ರಣ ಮಾಡುವಂತಹ ಸ್ಥಿತಿಯಲ್ಲಿಲ್ಲ. ನಾಯಕರೂ ಅವರನ್ನು ನಯಂತ್ರಣ ಮಾಡುವುದಿಲ್ಲ, ನನ್ನ ಮಾತನ್ನೂ ಅವರು ಕೇಳುವುದಿಲ್ಲ. ನಾನೇನು ಮಾಡಲಿ? ನಾಯಕರು ಎಂದು ಮಾಡಿರುವುದು ಏತಕ್ಕೆ? ಅವರು ತಮ್ಮ ಸದಸ್ಯರನ್ನು ನಯಂತ್ರಣ ಮಾಡಬೇಕು.

(ಗೊಂದಲ)

ಶ್ರೀ ಕೆ.ಶ್ರೀನಿವಾಸಗೌಡ:- ಒಂದೇ ಒಂದು clarification ಕೇಳುತ್ತೇನೆ.

ಅಧ್ಯಕ್ಷರು:- ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದೇನೆ. ಈಗ ಬೇಡಿ, ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಕೆ. ಶ್ರೀನಿವಾಸಗೌಡ:– ಒಂದೇ ಒಂದು clarification ಅನ್ನು ಕೇಳುವುದಕ್ಕೆ ಅವಕಾಶ ಕೊಡಿ.

ಅಧ್ಯಕ್ಷರು:– ಎಷ್ಟು ಜನ clarification ಕೇಳುವುದು?...

(ಗೊಂದಲ)

ಶ್ರೀ ಹಚ್.ಡಿ. ಬಸವರಾಜ್:– ಮಾನ್ಯ ಅಧ್ಯಕ್ಷರೆ, ಇವರು ಮಾತ್ರ ಜನಪರರು, ನಾವೇನು ಜನ ವಿರೋಧಿಗಳೇ?...

(ಗೊಂದಲ)

ಅಧ್ಯಕ್ಷರು:– ನನಗೂ ಸಾಕಾಗಿ ಹೋಗಿದೆ.

(ಗೊಂದಲ)

ಶ್ರೀ ಕೆ. ಶ್ರೀನಿವಾಸಗೌಡ:– ಮಾನ್ಯ ಅಧ್ಯಕ್ಷರೆ, Special Economic Zone ಮಾಡುವ ಬದಲು ಅಲ್ಲಿ Agricultural Economic Zone ಮಾಡಿ ಎಂದು ನಾನು ಹೇಳಿದ್ದರ ಬಗ್ಗೆ, ಮಾನ್ಯ ಮುಖ್ಯಮಂತ್ರಿಗಳು ಅದರ ಬಗ್ಗೆ ಕೇಂದ್ರದ ಕಡೆ ಬೆರಳು ತೋರಿಸಿದರು. ತಾವು ರೈತರ ಹಿತಚಿಂತಕರಾಗಿರುವುದರಿಂದ Special Agricultural Economic Zone ಮಾಡಲು ರಾಜ್ಯದಿಂದಲೇ ಪ್ರಸ್ತಾವನೆ ಕಳುಹಿಸಿ. ನಂದಗುಡಿಯಲ್ಲಿ ಅದನ್ನೇ ಮಾಡಿ. ಸ್ವಾಮಿ, export ಬೇಕಾದಷ್ಟು ಇದೆ, ಇವತ್ತು ಬೇಕಾದಷ್ಟು...

(ಗೊಂದಲ)

ಮಾನ್ಯ ವೆಂಕಟೇಶ್‌ರವರೆ, ಒಂದು ನಿಮಿಷ. ತಾವು ಆಮೇಲೆ ಮಾತನಾಡಿ. ರೈತ ಚಿಂತಕರಾದ ನೀವು SEZ ಬದಲು Special Agricultural Economic Zone ಮಾಡಿ ರೈತರಿಗೆ value addition ಮಾಡಿಕೊಡಿ. ಅದಕ್ಕಾಗಿ ನೀವು ಕೇಂದ್ರ ಸರ್ಕಾರವನ್ನು ನೋಡಬೇಕಾಗಿಲ್ಲ, ರಾಜ್ಯ ಸರ್ಕಾರವೇ ಅದನ್ನು ಮಾಡಬಹುದು.

ಅಧ್ಯಕ್ಷರು:– ಆಯಿತು. ಈಗ ಉತ್ತರ ಹೇಳಿ.

ಶ್ರೀ ಗೋಪಾಲಕೃಷ್ಣ ಬೇಲೂರು:– ಮಾನ್ಯ ಅಧ್ಯಕ್ಷರೆ,...

ಅಧ್ಯಕ್ಷರು:- ನೀವು ಚರ್ಚೆಯಲ್ಲಿ participate ಮಾಡಿಲ್ಲ. ಮತ್ತೇನು clarification ಕೇಳುತ್ತೀರಿ?

ಶ್ರೀ ಗೋಪಾಲಕೃಷ್ಣ ಬೇಲೂರು:- ಮಾನ್ಯ ಅಧ್ಯಕ್ಷರೆ, ಒಂದು ನಿಮಿಷ. ಕಾಗೋಡು ಸತ್ಯಾಗ್ರಹದ ಬಗ್ಗೆ ಆಗಲೇ ಮಾತನಾಡಿದರು. ಕಾಗೋಡು ಸತ್ಯಾಗ್ರಹ ನಡೆಸಿದವರ ಕುಟುಂಬದಿಂದಲೇ ನಾನೂ ಬಂದಿದ್ದೇನೆ. ಕಾಗೋಡು ಸತ್ಯಾಗ್ರಹವನ್ನು ಮಾಡಿದವರೇ ಸತ್ಯ ಶೋಧನ ಸಮಿತಿಯ ಅಧ್ಯಕ್ಷರೆಂದು ಹೇಳುತ್ತಿದ್ದಾರೆ.. ಅವರ ಕುಟುಂಬದಿಂದಲೇ ನಾನೂ ಬಂದಿದ್ದೇನೆ. ಯಾರು ಕಾಗೋಡು ಹೋರಾಟವನ್ನು ಮಾಡಿದ್ದಾರೆ ಎಂಬುದು ನನಗೆ ಗೊತ್ತಿದೆ. ಅದರ ಬಗ್ಗೆ ಹಿರಿಯರು ಮಾಹಿತಿಯನ್ನು ಕೊಡಬೇಕು.

ಅಧ್ಯಕ್ಷರು:- ಆಯಿತು, ಮಾನ್ಯ ಮುಖ್ಯಮಂತ್ರಿಗಳೇ, ಉತ್ತರ ಕೊಡಿ.

ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು:- ಮಾನ್ಯ ಅಧ್ಯಕ್ಷರೆ,...

ಅಧ್ಯಕ್ಷರು:- ತಾವು ಉತ್ತರ ಹೇಳುತ್ತೀರಾ? ಆಯಿತು, ಹೇಳಿ.

ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು [ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು]:- ಮಾನ್ಯ ಅಧ್ಯಕ್ಷರೆ, ನಿನ್ನೆಯಿಂದ ಮತ್ತು ಇವತ್ತು ಬೆಳಿಗ್ಗೆಯಿಂದಲೂ ಕೂಡ ಸನ್ಮಾನ್ಯ ವಿರೋಧ ಪಕ್ಷದ ನಾಯಕರುಗಳೆಲ್ಲರೂ ಕೂಡ SEZಗಳ ಬಗ್ಗೆ ವಿಸ್ತಾರವಾದ ಚರ್ಚೆಯನ್ನು ಮಾಡಿದ್ದಾರೆ. ಸನ್ಮಾನ್ಯ ಅಧ್ಯಕ್ಷರೆ, ಬೆಂಗಳೂರನ್ನು ಬಿಟ್ಟು ತುಮಕೂರು, ಶಿವಮೊಗ್ಗ, ಉತ್ತರ ಕರ್ನಾಟಕ, ಮಂಗಳೂರು ಈ ಭಾಗಗಳಲ್ಲಿ ನೀವು SEZಗಳನ್ನು ಸ್ಥಾಪನೆ ಮಾಡಬೇಕು, ಇಲ್ಲಿ ಮಾಡಬಾರದು ಎಂಬ ಉದ್ದೇಶದಿಂದ ಇವತ್ತು ಎಲ್ಲರೂ ಕೂಡ ತಮ್ಮ ಚರ್ಚೆಯನ್ನು ಮುಂದಿಟ್ಟಿದ್ದಾರೆ. ಮೊಟ್ಟ ಮೊದಲನೆಯದಾಗಿ SEZ ಬಗ್ಗೆ ಹೇಳುವುದಾದರೆ, ಇಲ್ಲಿ real estate, estate business, developers business ನಡೆಯುತ್ತಿದೆ ಎಂದು ಹೇಳಿದರು. ಆದರೆ 2005ನೇ ವರ್ಷದಲ್ಲಿ ತಂದಂತಹ SEZ Actನಲ್ಲೇ ಅವರು mention ಮಾಡಿದ್ದಾರೆ. Actನಲ್ಲಿ Co-Developer, Developer ಪದಗಳ ಬಗ್ಗೆ ಹೇಳಿದ್ದಾರೆ. ಅದರಲ್ಲಿ user ಎಂದು ಎಲ್ಲಿಯು ತಂದಿಲ್ಲ.

"Co-Developer means a person who, or a State Government which, has been granted by the Central Government a letter of approval under sub section (12) of section 3 ."

ಇದು ಒಂದು. ಎರಡನೆಯದಾಗಿ,

"Developer means a person who, or a State Government which, has been granted by the Central Government a letter of approval under sub section (10) of section 3 and includes an authority of Co-Developer." ಇಲ್ಲಿ user ಎಂದು ಎಲ್ಲಿಯೂ ತಂದಿಲ್ಲ. ಇನ್ನೊಂದು ಮಾನ್ಯ ಖರ್ಗೆ ಸಾಹೇಬರು ಹೇಳಿದರು, ಎಲ್ಲಾ ರಾಜ್ಯ ಸರ್ಕಾರಕ್ಕೆ ಅಧಿಕಾರ ಇರುವುದು, ನೀವು ಎಲ್ಲವೂ proposasl approve ಮಾಡಿದ ಮೇಲೆ ಕೇಂದ್ರ ಸರ್ಕಾರ ಅದಕ್ಕೆ ಅನುಮೋದನೆ ಕೊಡುತ್ತದೆ ಎಂದು. ಸ್ವಾಮಿ, ಇಲ್ಲಿ

"Establishment of Special Economic Zone- procedure for making proposal to establish Special Economic Zone.

(1) A Special Economic Zone may be established under this act, either jointly or severally by the Central Government, State Government, or any person for manufacture of goods or rendering services or for both or a Free Trade and Warehousing Zone."

ಎರಡನೆಯದಾಗಿ,

"Any person, who intends to set up a Special Economic Zone, may, after identifying the area, make proposal to the State Government concerned for the purpose of setting up the Special Economic Zone."

ಎಂದು ಇದೆ. ಆದರೆ next paraದಲ್ಲಿ,

"Notwithstanding anything contain in sub -section (2), any person, who intends to set up a Special Economic Zone, may, after identifying the area, at his option, make a proposal directly to the board for the purpose of setting up the Special Economic Zone."

ನೇರವಾಗಿ ನಮ್ಮ ಅನುಮತಿ ಇಲ್ಲದೇ, ರಾಜ್ಯ ಸರ್ಕಾರದ ಅನುಮತಿ ಇಲ್ಲದೇ ಕೇಂದ್ರ ಸರ್ಕಾರಕ್ಕೆ ಅನುಮತಿಗೋಸ್ಕರ ಅವರು ಅರ್ಜಿಯನ್ನು ಹಾಕಬಹುದು. ಅದಾದ ಮೇಲೆ,

"provided that where such a proposal has been received directly from a person under sub-section, the board may grant approval and after receipt of such approval, the person concerned shall obtain the cocurrence of the State Government within the period, as may be prescribed."

ಅದರ ಅರ್ಥ ಏನೆಂದರೆ, ಅವರು ಅಲ್ಲಿ ಅನುಮತಿಯನ್ನು ಕೊಟ್ಟು, ಮಾನ್ಯ ಸಿಂಧ್ಯಾ ಸಾಹೇಬರು correct ಆಗಿ ಹೇಳಿದರು,...

(ಗೊಂದಲ)

ಶ್ರೀ ಕಟ್ಟಾ ಸುಬ್ರಹ್ಮಣ್ಯನಾಯ್ಡು:- ಮಾನ್ಯ ಸಿದ್ದರಾಮಯ್ಯ ಸಾಹೇಬರೆ, ತಾವು ಮಾತನಾಡುವಾಗ ನಾನು ಸುಮ್ಮನಿದ್ದೆ.

ಶ್ರೀ ಸಿದ್ದರಾಮಯ್ಯ:- ಮೇಲೆಯೇ ಬೀಳಲಿಕ್ಕೆ ಬರುತ್ತೀರಲ್ಲಾ?

ಶ್ರೀ ಕಟ್ಟಾ ಸುಬ್ರಹ್ಮಣ್ಯನಾಯ್ಡು:- ಹೌದು.

ಶ್ರೀ ಸಿದ್ದರಾಮಯ್ಯ:-concurrence ಕೊಡಬೇಕು ಎಂದು ಎಲ್ಲಿದೆ? ಸರ್ಕಾರದ ಮೇಲೆ mandatory ಇದೆಯೇ?

ಶ್ರೀ ಕಟ್ಟಾ ಸುಬ್ರಹ್ಮಣ್ಯನಾಯ್ಡು:- ಏತಕ್ಕಾಗಿ ನಾನು ಕೊಡಬೇಕೆಂದು ಹೇಳತ್ತೇನೆ. ಎಲ್ಲವೂ ಬೇರೆ ರಾಜ್ಯಕ್ಕೆ ಹೋದರೂ ಪರವಾಗಿಲ್ಲ, ಕೈಗಾರಿಕೆಗಳು ನಮ್ಮಲ್ಲಿಗೆ ಬರುವುದು ಬೇಡ ಎಂದು ನೀವೆಲ್ಲಾ ತೀರ್ಮಾನ ಮಾಡುವುದಾದರೆ, O.K. ಹಾಗೆಯೇ ಮಾಡೋಣ concurrence ಕೊಡುವುದೇ ಬೇಡ. ಅದು ಆಮೇಲಿನ ಪ್ರಶ್ನೆ.

ಶ್ರೀ ಸಿದ್ದರಾಮಯ್ಯ:- ಕೈಗಾರಿಕೆಗಳು ಬರುವುದು ಬೇಡವೆಂದು ನಾವೆಲ್ಲಿ ಹೇಳಿದ್ದೇವೆ. SEZಗಳು ಬರಬಾರದೆಂದು ಎಲ್ಲಿ ಹೇಳಿದ್ದೇವೆ?

ಶ್ರೀ ಕಟ್ಟಾ ಸುಬ್ರಹ್ಮಣ್ಯನಾಯ್ಡು:- ಇಲ್ಲೇ ಬರಬೇಕೆಂದು ಅವರಿಗೆಲ್ಲಿ ಕಡ್ಡಾಯವಿದೆ?

(ಗೊಂದಲ)

ಅಧ್ಯಕ್ಷರು:- ಮಾನ್ಯ ಸಿದ್ದರಾಮಯ್ಯನವರೆ, ಅವರು ಏನು ಹೇಳುತ್ತಾರೋ, ಕೇಳೋಣ ಇರಿ.

(ಗೊಂದಲ)

ಶ್ರೀ ಸಿದ್ದರಾಮಯ್ಯ:- ... State Government concurrence ಕೊಡಬೇಕು. Without the concurrence of the State Government he can't start the SEZ.

(ಗೊಂದಲ)

ಶ್ರೀ ಕಟ್ಟಾ ಸುಬ್ರಹ್ಮಣ್ಯನಾಯ್ಡು:- ಇಡೀ ದೇಶದಲ್ಲಿ ಒಂದು ನೀತಿ, ಕರ್ನಾಟಕ್ಕೆ ಮತ್ತೊಂದು ನೀತಿ ಆಗುವುದಿಲ್ಲ ಸ್ವಾಮಿ. ಇಲ್ಲಿ ಕೂಡ ರೈತರ ಮಕ್ಕಳೇ ಉದ್ಯೋಗಕ್ಕೆ ಬರುವುದು. ಇಲ್ಲಿ ಕೂಡ ರೈತರ ಮಕ್ಕಳೇ ವಿದ್ಯಾವಂತರಾಗುತ್ತಿರುವುದು. ಪ್ರತಿ ವರ್ಷ 8 ಲಕ್ಷ 25 ಸಾವಿರದಷ್ಟು ಮಕ್ಕಳು ಶಾಲಾ ಕಾಲೇಜುಗಳಿಂದ ಹೊರಗೆ ಬರುತ್ತಿದ್ದಾರೆ. ಹೊಲ ಗದ್ದೆಗಳಲ್ಲಿ ಕೆಲಸ ಮಾಡಲಿಕ್ಕೆ ಯಾರೂ ಹೋಗುತ್ತಿಲ್ಲ. ಇಲ್ಲಿ ಕೂಡ ರೈತರ ಮಕ್ಕಳಿಗೆ ಕೆಲಸವನ್ನು ಕೊಡುವುದು. ಸ್ವಾಮಿ, ದೇಶಕ್ಕೆಲ್ಲಾ ಒಂದು ನೀತಿ, ಕಾಂಗ್ರೆಸ್ ಪಾರ್ಟಿ ಅಧಿಕಾರದಲ್ಲಿ ಇಲ್ಲದಿರುವ ಕಡೆಗಳಲ್ಲಿ ಮಾತ್ರ ಮತ್ತೊಂದು ನೀತಿ ಎಂದರೆ ಆಗುವುದಿಲ್ಲ. ದೇಶಕ್ಕೆಲ್ಲಾ ಒಂದೇ ನೀತಿಯನ್ನು ಮಾಡಿ. ನಾವು ಕೇಂದ್ರ ಸರ್ಕಾರಕ್ಕೆ ಬರದಿದ್ದೇವೆ, ಏನು ಬರದಿದ್ದೇವೆ ನೋಡಿ. ನಾನು Industries Minister ಆದ ಕೂಡಲೇ Commerce Minister ಗೆ ರಾಜ್ಯ ಸರ್ಕಾರದ ವತಿಯಿಂದ letter ಬರೆದೆ. ಅದರ contents ಅನ್ನು ನಾನಲ್ಲಿ ಓದಿ ಹೇಳುತ್ತೇನೆ.

"SEZ Act, 2005: Rules, Regulations, Circulars, and acquisition, Rehabilitation package etc,. Dear Sri Kamalnathji Hon'ble Commerce Minister, Government of India, The SEZ Act while formatting the rules should also take into account the available resources of each State, geographical area and contours of the State, type of specialized human resources available in each State, Population of State, available waste lands in most backward ares of each State, optimum number of SEZ's required in all sectors in the country, equitable distribution of SEZ's in each State through out the country on the strength of the population. Mushrooming of SEZ's and their consequential closure because of being uneconomical will be waste of resources of the Country. A Uniform Central Policy wherein the land acquisition, in so far as it relates to SEZ independent of State industrial and geaeral Land

Acquisition Act should be adopted. This land acquisition policy should also contain a rehabilitation policy for the land losers, methodology fix fair compensation for acquired land, possible ways of making the former land owner as stake owner in the SEZ. In the back drop of huge demand of formation of SEZ and around important Metro cities…"

ಶ್ರೀ ಧರ್ಮಸಿಂಗ್:- ಇದೇನು ಇವರು clarification ಕೊಡುತ್ತಿದ್ದಾರೆಯೇ? ಹೇಗೆ?

ಶ್ರೀ ಕಟ್ಟಾ ಸುಬ್ರಹ್ಮಣ್ಯನಾಯ್ಡು:- ಹೌದು ಸಾರ್, ನಾನು clarification ಅನ್ನೇ ಕೊಡುತ್ತಿದ್ದೇನೆ.

(ಗೊಂದಲ)

ಅಧ್ಯಕ್ಷರು:- ಆಯಿತು, ತಾವು ಹೇಳಿ. He is the concerned Minister.

(ಗೊಂದಲ)

ಶ್ರೀ ಕಟ್ಟಾ ಸುಬ್ರಹ್ಮಣ್ಯನಾಯ್ಡು:- ... ತಾವು ಸ್ವಲ್ಪ ತಾಳ್ಮೆಯಿಂದ ನಾನು ಹೇಳುವುದನ್ನು ಕೇಳಿ. ನಾವು ತಮ್ಮ ಮಾತನ್ನು ಕೇಳಿದ್ದೇವೆ..

(ಗೊಂದಲ)

ಅಧ್ಯಕ್ಷರು:- ನೀವು lengthy clarification ಕೇಳಿದಿರಲ್ಲಾ, ಅದಕ್ಕೆ ಅವರು ಉತ್ತರ ಕೊಡುತ್ತಿದ್ದಾರೆ.

(ಗೊಂದಲ)

ಶ್ರೀ ಕಟ್ಟಾ ಸುಬ್ರಹ್ಮಣ್ಯನಾಯ್ಡು:- ... Metro Citiesನಲ್ಲಿ ಬೇಡ ಎಂದು ನಾನು ಹೇಳಿದ್ದೆ. ಆದರೆ ಅವರು ban ಮಾಡಲಿಲ್ಲ. ಇಡೀ ದೇಶಕ್ಕೆ ಒಂದು ಪಾಲಿಸಿ, ಕರ್ನಾಟಕಕ್ಕೆ ಒಂದು ಪಾಲಿಸಿ ಆಗುವುದಿಲ್ಲ ಸ್ವಾಮಿ...

(ಗೊಂದಲ)

ಶ್ರೀ ಡಿ.ಕೆ.ಶಿವಕುಮಾರ್:- ಮಾನ್ಯ ನಾಯ್ಡುರವರೇ, ನೀವು ಹೇಳಿರುವುದನ್ನು ಮಾಡಿ...

(ಗೊಂದಲ)

ಶ್ರೀ ಕಟ್ಟಾ ಸುಬ್ರಹ್ಮಣ್ಯನಾಯ್ಡು:-

"the back drop of huge demand of SEZ in and around important Metro Cities, which are already getting chocked due to excessive exploitation, because of concentration of industries, haphazared growth of residential areas, high land prices, the proposed policy should aim at encouraging formation of SEZ's in most backward areas of each State through out the Country."

Bring a policy through out the Country. Bring a policy from the Central Government. We will accept it.

(ಗೊಂದಲ)

ಶ್ರೀ ಆರ್.ವಿ.ದೇಶಪಾಂಡೆ:- When SEZ Act was passed ... ಅದನ್ನು ತಾವು ತಿಳಿದುಕೊಳ್ಳಿ.

ಶ್ರೀ ಕಟ್ಟಾ ಸುಬ್ರಹ್ಮಣ್ಯನಾಯ್ಡು:- Why are you blaming NDA Government? You formed this SEZ policy. You brought these rules and regulations. You brought this act.

(ಗೊಂದಲ)

ಅಧ್ಯಕ್ಷರು:- Concerned Minister ಏನೋ ಹೇಳುತ್ತಿದ್ದಾರೆ, ಕೇಳೋಣ ಇರಿ. ದಯವಿಟ್ಟು ಎಲ್ಲರೂ ಸುಮ್ಮನೆ ಕುಳಿತುಕೊಳ್ಳಿ. ಅವರು ಏನು ಹೇಳುತ್ತಾರೆಂದು First ತಿಳಿದುಕೊಳ್ಳಿ. ಅವರೇನಾದರೂ ಸರಿಯಾಗಿ ಹೇಳದಿದ್ದರೆ, ನೀವು ಆ ಬಗ್ಗೆ ಕೇಳುವಿರಂತೆ.

(ಗೊಂದಲ)

ಶ್ರೀ ಕಟ್ಟಾ ಸುಬ್ರಹ್ಮಣ್ಯನಾಯ್ಡು:- Central Government ಬಗ್ಗೆ ನಾವು ಮಾತನಾಡಿದರೆ ಅವರಿಗೆಲ್ಲಾ ಉರಿಯಾಗುತ್ತಿದೆ. ಅದಕ್ಕೆ ನಾನೇನು ಮಾಡಲಿ? ಆದ್ದರಿಂದಲೇ ಅವರು ನನ್ನನ್ನು ಮಾತನಾಡಲು ಬಿಡುತ್ತಿಲ್ಲ. ಈ ಪಾಲಿಸಿ ಸರಿಯಿಲ್ಲವೆಂದು ಹೇಳಿದಕ್ಕೆ ಅವರಿಗೆ ಉರಿ ಹತ್ತಿಕೊಂಡಿದೆ...

(ಗೊಂದಲ)

ಅಧ್ಯಕ್ಷರು:- ದಯವಿಟ್ಟು Concerned Minister ಹೇಳುವುದನ್ನು ಕೇಳಿ. ನೀವು ಕೇಳದೇ ಏಕೆ ಈ ರೀತಿ ಮಾಡುತ್ತಿದ್ದೀರಿ? ಯಾವುದೇ ಪಾರ್ಟಿ ವಿಚಾರ ಪ್ರಸ್ತಾಪಿಸಿದರೆ ಅದನ್ನೇ ಎಲ್ಲರೂ ಕೇಳಿದರೆ ಹೇಗೆ? ಅದೇನು ಹೇಳುತ್ತಿದ್ದಾರೆ, ಸತ್ಯ ಹೇಳುತ್ತಿದ್ದಾರೋ, ಅಸತ್ಯ ಹೇಳುತ್ತಿದ್ದಾರೋ? ಎಂಬುದನ್ನು ಕೇಳಿ. ಪಾರ್ಟಿ ವಿಚಾರ ಇದ್ದೇ ಇದೆ. ಸತ್ಯ ಹೊರಗೆ ಬರಬೇಕು. ಅವರೇನು ಹೇಳುತ್ತಾರೋ, ಅದನ್ನು ಕೇಳಿ.

(ಗೊಂದಲ)

This is not correct. Concerned Minister ಆಗಿರುವ ಅವರು ಹೇಳುವುದನ್ನು ಕೇಳಿ.

(ಗೊಂದಲ)

ಶ್ರೀ ಕಟ್ಟಾ ಸುಬ್ರಹ್ಮಣ್ಯನಾಯ್ಡು:- ಸನ್ಮಾನ್ಯ ಅಧ್ಯಕ್ಷರೆ, Central SEZ policyಯಲ್ಲಿ, Actನಲ್ಲಿ ಇರುವಂತಹ lacunas ಬಗ್ಗೆ ನಾನು ಹೇಳಿದೆ. ಅಲ್ಲಿ Developer and Co-developer ಎಂದು ಹೇಳಿದ್ದಾರೆ. ಅವರೇ ಅಲ್ಲಿ real estate ಮಾಡಲಿಕ್ಕೆ ಅವಕಾಶ ಮಾಡಿಕೊಟ್ಟಿದ್ದಾರೆ. ಮಾನ್ಯ ಶ್ರೀರಾಮರೆಡ್ಡಿಯವರು ಏನು ಹೇಳಿದರೋ, ಅದು ಸತ್ಯವಾದ ಸಂಗತಿ. ಮಾನ್ಯ ಸಿಂಧ್ಯಾ ಸಾಹೇಬರು ಏನು ಹೇಳಿದ್ದಾರೋ, ಅದು ಸತ್ಯವಾದಂತಹ ವಿಚಾರ. ಇವತ್ತು ರಾಜ್ಯ ಸರ್ಕಾರದ ವತಿಯಿಂದ ನಾವೂ ಕೂಡ ನಮ್ಮ ಪ್ರಯತ್ನವನ್ನು ಮಾಡಿದೆವು. ಕೇಂದ್ರ ಸರ್ಕಾರಕ್ಕೆ ನಾವು request ಮಾಡಿಕೊಂಡಿದ್ದೆವು. ಎರಡು ಬಾರಿ ಕಾಗದವನ್ನು ಬರೆದಿದ್ದೆವು. ಖುದ್ದಾಗಿ, personal ಆಗಿ ಅವರನ್ನು ಭೇಟಿ ಆಗಿದ್ದೆವು. ತಾವು ಯಾವುದೇ ಕಾರಣಕ್ಕೆ SEZ ನ್ನು ಮಾಡುವಾಗ, satellite imaginary ಮುಖಾಂತರ ಹಿಂದುಳಿದಂತಹ ತಾಲ್ಲೂಕುಗಳಲ್ಲಿ, ಹಿಂದುಳಿದಂತಹ ಜಿಲ್ಲೆಗಳಲ್ಲಿ infrastructure ಅನ್ನು develop ಮಾಡಿ ಕೊಟ್ಟು, ಆ ಜಾಗದಲ್ಲಿ investors ಹೋಗುವ ಹಾಗೆ ಮಾಡಬೇಕೆಂಬ ಮನವಿಯನ್ನು ನಾವು ಮಾಡಿದ್ದೆವು. ಹಿಂದೆ ಸರ್ಕಾರಗಳು infrastructures ಕೊಡಲಿಲ್ಲವೆಂದು ನಾನು ಹೇಳಲಿಲ್ಲ. ಆ ಮಾತು ಹೇಳಿದರೆ ಇವರಿಗೆ ಕೋಪ ಬರುತ್ತದೆ. ನಾನು ಅದನ್ನೇನಾದರೂ ಹೇಳಿದರೆ, ನೀವು ಮಾಡಿ ನಾವು ಮಾಡಲಿಲ್ಲ ಎನ್ನುತ್ತಾರೆ. ನಾನು ಅದನ್ನು ಹೇಳಲಿಲ್ಲ. ಇವತ್ತು ಗುಲ್ಬರ್ಗಾ ಸಾಹೇಬರಿಗೆ ಕೋಪ ಬರುತ್ತದೆ, ಅಲ್ಲಿ ತಾವು ಇನ್ನು aerodrome ಮಾಡಿಲ್ಲವೆಂದು ಹೇಳಿದರೆ ತಮಗೆ ಕೋಪ ಬರುತ್ತದೆ. ನಾನೇನು ಮಾಡಲಿ, ಹೇಳಿ. ಅಲ್ಲಿ industry ಬಾ ಎಂದರೆ ಹೇಗೆ

ಬರುತ್ತದೆ? ತಾವು ಮೈಸೂರಿನಲ್ಲಿ ಇಷ್ಟು ದಿವಸ ಇದ್ದಿರಿ. ತಾವು ಅಲ್ಲಿ Air port ಮಾಡಲಿಲ್ಲ. ಅದಕ್ಕೆ ನಾನೇನು ಮಾಡಲಿ? ಅಲ್ಲಿಗೆ industry ಹೋಗುವುದಿಲ್ಲ. Industry ಎಲ್ಲಿ ಹೋಗುತ್ತದೆ ಸ್ವಾಮಿ? ಎಲ್ಲಿ infrastructure ಇರುತ್ತದೋ, ಎಲ್ಲಿ facilities ಇರುತ್ತದೋ, ಅಲ್ಲಿಗೆ industry ಹೋಗುತ್ತದೆ. ವಿಶೇಷವಾದಂತಹ ಪ್ರಯತ್ನ ನಾವು ಮಾಡಿದ್ದೇವೆ, ಮಾಡಲಿಲ್ಲವೆಂದಿಲ್ಲ. ಇವತ್ತು ಶಿವಮೊಗ್ಗದಲ್ಲಿ SEZ ಅನ್ನು ತಂದಿಲ್ಲವೇ? ಮಾನ್ಯ ದೇಶಪಾಂಡೆ ಸಾಹೇಬರು ಮಾಡಿದರು, ಅದನ್ನು ಒಪ್ಪಿಕೊಳ್ಳುತ್ತೇನೆ. ಮಂಗಳೂರಿನಲ್ಲಿ ಮಾಡಿದೆವು, ಮೈಸೂರಿನಲ್ಲಿ ಮಾಡಿದೆವು, ಅಲ್ಲೆಲ್ಲಾ ಕೈಗಾರಿಕೆಗಳಿಗೆ ಭೂಮಿ ಕೊಡಲಿಲ್ಲವೇ? ಅಲ್ಲೆಲ್ಲಾ SEZ ಬಂದಿಲ್ಲವೇ? ಬೆಳಗಾಂನಲ್ಲಿ 3 ಸಾವಿರ ಎಕರೆ ಪ್ರದೇಶದಲ್ಲಿ Multi purpose SEZಅನ್ನು ಕೊಡುತ್ತಿದ್ದೇವೆ. ಬೀದರ್‌ನಲ್ಲಿ Textile SEZ ಗೆ approval ಮಾಡಿ, ಅದಕ್ಕೆ ಅನುಮೋದನೆ ಕೊಡುವಂತಹ ಪ್ರಯತ್ನವನ್ನು ನಾವು ಮಾಡುತ್ತಿದ್ದೇವೆ. ನಾಲ್ಕು ಬಾರಿ ಹುಬ್ಬಳ್ಳಿ–ಧಾರವಾಡಕ್ಕೆ ನಾವು ಭೇಟಿ ಕೊಟ್ಟಿದ್ದೆವು. ಮಾನ್ಯ ಸಿದ್ದರಾಮಯ್ಯನವರೆ, ಅಲ್ಲಿ SEZ ಅನ್ನು ಮಾಡಿ ಎಂದು ಎಲ್ಲಾ ಕೈಗಾರಿಕೋದ್ಯಮಿಗಳಿಗೂ ವಿನಂತಿಸಿಕೊಂಡೆವು. ಆದರೆ ತಾವು ನಾವು ಉತ್ತರ ಕರ್ನಾಟಕಕ್ಕೆ ಹೋಗುತ್ತಿಲ್ಲವೆಂದು ಹೇಳುತ್ತೀರಿ. ನಾವು ರಾಯಚೂರಿಗೆ ಹೋಗಿದ್ದೆವು. ರಾಯಚೂರಿನಲ್ಲಿ 12 ಸಾವಿರ ಕೋಟಿ ರೂ.ಗಳ ಬಂಡವಾಳ ಬರುತ್ತದೆಂದು ಹೇಳಿದರು. ನಾವು ಅಲ್ಲಿಗೆ ಹೋದೆವು. ನಾವು ಅಲ್ಲಿಗೆ ಹೋಗಲಿಲ್ಲ, ಪ್ರಯತ್ನ ಮಾಡಲಿಲ್ಲವೆಂದಲ್ಲ. ನಾವು ಎಲ್ಲಾ ಕಡೆಗೂ ಹೋಗಿದ್ದೆವು. ಆ ಭಾಗದಲ್ಲಿಯೂ ಕೂಡ ನಾವು ಪ್ರಯತ್ನ ಮಾಡುತ್ತಿದ್ದೇವೆ. ಬೆಂಗಳೂರು ಸುತ್ತಮುತ್ತವೇ ಮಾಡಬೇಕೆನ್ನುವ ಉದ್ದೇಶ ಖಂಡಿತಾ ನಮ್ಮದಲ್ಲ.

(ಗೊಂದಲ)

ಮಾನ್ಯ ಶ್ರೀನಿವಾಸ ಗೌಡರು, ಕೃಷ್ಣಭೈರೇಗೌಡರು ಮತ್ತು ಸುದರ್ಶನ್ ಅವರು ಬಂದು ಕೋಲಾರ ಜಿಲ್ಲೆಯಲ್ಲಿ ಕೈಗಾರಿಕೆಗಳನ್ನು ಮಾಡಿ ಎಂದರು. ಇವತ್ತು ಬೆಂಗಳೂರು ಸುತ್ತಮುತ್ತ ಜಮೀನನ್ನು ಅಕ್ವೈರ್ ಮಾಡುತ್ತಿದ್ದಾರೆಂದು ನಮ್ಮನ್ನು ಆಪಾದನೆ ಮಾಡುತ್ತಿದ್ದಾರೆ. ಮಾನ್ಯ ಸದಸ್ಯರಾದ ರಾಜೇಂದ್ರರವರು ಇವತ್ತು ಕೆಜಿಎಫ್‌ನಲ್ಲಿ ಕೈಗಾರಿಕೆಯನ್ನು ತರಬೇಕೆಂದು ಹೇಳಿದ್ದಾರೆ.

ಶ್ರೀ ಡಿ.ಕೆ.ಶಿವಕುಮಾರ್:– ನಂದಗುಡಿಯಲ್ಲಿ ಮಾಡಬೇಕೆಂದಿರುವುದನ್ನೆ ಕೆಜಿಎಫ್‌ಗೆ ಶಿಫ್ಟ್ ಮಾಡಿ.

ಶ್ರೀ ಕಟ್ಟಾ ಸುಬ್ರಹ್ಮಣ್ಯನಾಯ್ಡು:- ಬೊಂಬಾಯಿ ಪಕ್ಕದಲ್ಲಿ SEZ ಬೇಕು, ತಮಿಳುನಾಡಿನಲ್ಲಿ ಚೆನ್ನೈ ಪಕ್ಕದಲ್ಲಿ ಬೇಕು, ಕೇರಳದಲ್ಲಿ ಟ್ರಿವೆಂಡರಂನಲ್ಲಿ ಬೇಕು, ಅಲ್ಲಿ ಆ ಕಡೆ ಹರಿಯಾಣದಲ್ಲಿ ಕ್ಯಾಪಿಟಲ್ ಸಿಟಿನಲ್ಲಿ ನೀವು ಬೇಕೆಂದು ಹೇಳಿಬಿಟ್ಟು, ಕರ್ನಾಟಕದಲ್ಲಿ ಮಾತ್ರ ನೀವು ಹೊರಗಡೆ ನೂರು ಕಿ.ಮೀ. ಆಚೆಗೆ ಹೋಗಿ ಎಂದರೆ ಇನ್ವೆಸ್ಟರ್ಸ್ ಅವರದ್ದು ಯಾವ ಪರಿಸ್ಥಿತಿ ಎಂದು ತಾವು ಕೂಡ ಅನುಭವದ ಮಂತ್ರಿಗಳಾಗಿ ಕೆಲಸ ಮಾಡಿರುವವರಿಗೆ ಗೊತ್ತಿದೆ. ಹೀಗಾಗಿ ಇವತ್ತು ಹೊಸದಾಗಿ ನಮ್ಮ ಮುಖ್ಯಮಂತ್ರಿಗಳು, ಉಪಮುಖ್ಯಮಂತ್ರಿಗಳು ವಿಶೇಷವಾದ ಪ್ರಯತ್ನವನ್ನು ಮಾಡುತ್ತಿದ್ದಾರೆ. ಅವರು ಇವತ್ತು ವಿಮಾನ ನಿಲ್ದಾಣಗಳಿಗೆ ಅನುಮತಿಯನ್ನು ಕೊಟ್ಟಿದ್ದಾರೆ. ಅನೇಕ ಬಂಡವಾಳ ಹೂಡಿಕೆದಾರರಿಗೆ SEZಗೆ ನಮ್ಮ ಕೈಗಾರಿಕಾ ನೀತಿಯಲ್ಲಿ ನಾವು ಇನ್ಸೆನ್‌ಟಿವ್ಸ್ ಕೊಟ್ಟಿದ್ದೇವೆ. ಮಾನ್ಯ ಸದಸ್ಯರೊಬ್ಬರು ಸಲಹೆ ಮಾಡಿದರು, ಇವತ್ತು 75% ಕೈಗಾರಿಕೆಗೆ 25% ವಸತಿಗೆ utilization of land ಎಂದು ನಿರ್ಧಾರ ಮಾಡಿ, 2006-11ನೇ ಸಾಲಿಗೆ ಏನು ಕೈಗಾರಿಕಾ ನೀತಿಯನ್ನು ತಂದೆವು, ಅದರಲ್ಲಿ ಈಗಾಗಲೇ ಅಳವಡಿಸಿದ್ದೇವೆ, ನಮ್ಮ ರೂಲ್ಸ್ ಕ್ಲಿಯರ್ ಕಟ್ ಆಗಿದೆ. ಇವತ್ತು ಕೇಂದ್ರ ಸರ್ಕಾರ ಒಂದು ವಿಷಯವನ್ನು ಹೇಳಿದೆ. ಮೊನ್ನೆ ಮಾನ್ಯ ಖರ್ಗೆಯವರು, ಎಲ್ಲಾ ಲ್ಯಾಂಡ್ ಅನ್ನು ಅವರೇ ತರಬೇಕೆಂದು ಕೆಲವು ಗೈಡ್‌ಲೈನ್ಸ್ ಮಾಡಿದ್ದಾರೆಂದು ಹೇಳಿದರು. 21.7.2007 Group on SEZ examines land acquisition issue. ಎಂದು ನಾವು ಹಿಂದೆ ಒಂದು ತೀರ್ಮಾನವನ್ನು ತಗೆದುಕೊಂಡಿದ್ದೆವು, 90% ಆ ಡೆವಲಪರ್ ತರಬೇಕು 10% ಸರ್ಕಾರದಿಂದ ನಾವು ಅಕ್ವಿಸಿಷನ್ ಮಾಡಿಕೊಡಬಹುದೆಂದು. ಮತ್ತೆ ಹೊಸ ಯೋಜನೆಯನ್ನು ಮಾಡಿದ್ದಾರೆ, However, the revised proposal under discussion suggest that instead of 90:10 ratio a more realistic ratio would be 75:30 ಈಗಾಗಲೇ ನಾವು ಏಕಘಟಕ ಸಂಕೀರ್ಣಗಳಿಗೆ ಅನುಮತಿ ಕೊಡುವ ಕಾಲದಲ್ಲಿ 75% ಲ್ಯಾಂಡ್ ಕನ್ಸೆಂಟ್ ಅವರು ತೆಗೆದುಕೊಳ್ಳಬೇಕು. ದೇಶಪಾಂಡೆಯವರೆ, ಅವಾರ್ಡ್, ಹಾಗು ದುಡ್ಡು ಕೊಡುವ ಬಗ್ಗೆ ತಾವು ಹೇಳಿದಿರಿ. ತಾವು ಇದರ ಬಗ್ಗೆ ಏನೂ ಹೇಳಲಿಲ್ಲ, ನಾವು ಹೇಳಿರುವುದು ಕನ್‌ಸೆಂಟ್ ಅಕ್ವಿಸಿಷನ್ ಬಗ್ಗೆ, ತಾವು ಕನ್ಸೆಂಟ್ ಅವಾರ್ಡ್ ಬಗ್ಗೆ ಹೇಳಿದಿರಿ, ಕನ್ಸೆಂಟ್ ಅಕ್ವಿಸಿಷನ್ ಬಗ್ಗೆ ತಾವು ಎಲ್ಲೂ ಉಲ್ಲೇಖಿಸಲಿಲ್ಲ, ಇದನ್ನೆ ನಾನು ತಮಗೆ ಅವಾಗಲೇ ಹೇಳುವುದಕ್ಕೆ ಬಂದೆ ತಾವು ಅದನ್ನು ಕೇಳಿಸಿಕೊಳ್ಳಲಿಲ್ಲ.

ಶ್ರೀ ಆರ್.ವಿ.ದೇಶಪಾಂಡೆ:- consent ಅಕ್ವಿಸಿಷನ್ ಆದಾಗ ಕನ್ಸೆಂಟ್ ಅವಾರ್ಡ್ ಆಗುತ್ತದೆ ಅಲ್ಲವೆ?

ಶ್ರೀ ಕಟ್ಟಾ ಸುಬಮಣ್ಯನಾಯ್ಡು:- ಹೌದು.

ಶ್ರೀ ಆರ್.ವಿ.ದೇಶಪಾಂಡೆ:– ಫೈನಲ್ ಅವಾರ್ಡ್ ಆದಾಗ ಹಣ ತೆಗೆದುಕೊಳ್ಳುವುದು, There is a provision in the KIADB Act.

ಶ್ರೀ ಸಿದ್ದರಾಮಯ್ಯ: ಕನ್ಸೆಂಟ್ ಅಕ್ವಿಸಿಷನ್‌ಗೂ, ಕನ್ಸೆಂಟ್ ಅವಾರ್ಡ್‌ಗೂ ಏನು ವ್ಯತ್ಯಾಸ ಹೇಳಿ.

ಶ್ರೀ ಕಟ್ಟಾ ಸುಬ್ರಮಣ್ಯನಾಯ್ಡು:– Consent award and consent acquisition means ರೈತರ ಕನ್ಸೆಂಟ್ ಅಕ್ವಿಸಿಷನ್‌ನಂದ ಈ ಕೈಗಾರಿಕೆಗಳಿಗೆ ಮಾಡಿಕೊಳ್ಳುವುದಕ್ಕೆ ಅನುಮತಿ ಕೊಟ್ಟು ಅವಕಾಶ ಕೊಡುತ್ತಿದ್ದೇವೆ, ಇವರಿಂದ ದುಡ್ಡನ್ನು ತೆಗೆದುಕೊಂಡು ಕಾರ್ಖಾನೆ ಮಾಡಿಕೊಳ್ಳುವುದಕ್ಕೆ ಅವಕಾಶ ಕೊಡುತ್ತೇವೆಂದು ಅಗ್ರಿಮೆಂಟ್ ಕೊಡುತ್ತೇವೆ That is consent.

ಶ್ರೀ ಸಿದ್ದರಾಮಯ್ಯ: ನನಗೆ ಗೊತ್ತಿರುವಂತೆ ಕನ್ಸೆಂಟ್ ಅವಾರ್ಡ್ ಕನ್ಸೆಂಟ್ ಅಕ್ವಿಸಿಷನ್‌ಗೆ ಕೊಡುವುದೆಂದರೆ, ಅವಾರ್ಡ್‌ಗೂ ಕೂಡ ಕನ್ಸೆಂಟ್ ಕೊಡುವುದೆಂದು ಅರ್ಥ.

ಶ್ರೀ ಕಟ್ಟಾ ಸುಬ್ರಮಣ್ಯನಾಯ್ಡು: ಅಲ್ಲ, ಅಲ್ಲ..

ಶ್ರೀ ಸಿದ್ದರಾಮಯ್ಯ: ಅಕ್ವಿಸಿಷನ್ ಕೊಟ್ಟು ಅವಾರ್ಡ್‌ಗೆ ಕೊಡುವುದಿಲ್ಲವೆಂದು ಹೇಳುತ್ತಾರಾ?

(ಗೊಂದಲ)

Can anybody say like that? When he agreed for acquisition, he will agree for award also.

ಶ್ರೀ ಕಟ್ಟಾ ಸುಬ್ರಮಣ್ಯನಾಯ್ಡು: ಅದೇ ಇರುವುದು, ಇಲ್ಲಿ KIADB Act ಇದೆ, ಇದರಲ್ಲಿ ಸ್ಪಷ್ಟವಾಗಿ ಉತ್ತರವಿದೆ, ಕನ್ಸೆಂಟ್ ಅವಾರ್ಡ್ ಇದೆ, ಅಕ್ವಿಸಿಷನ್ ಇಲ್ಲ.

ಶ್ರೀ ಸಿದ್ದರಾಮಯ್ಯ: KIADB Actನಲ್ಲಿ What is consent acquisition, what is consent award ಎಂದು ಇದೆಯಾ?

ಶ್ರೀ ಕಟ್ಟಾ ಸುಬ್ರಹ್ಮಣ್ಯನಾಯ್ಡು: ಕನ್ಸೆಂಟ್ ಅವಾರ್ಡ್ ಎಂದು ಇದೆ.

ಶ್ರೀ ಸಿದ್ದರಾಮಯ್ಯ: ಕನ್ಸೆಂಟ್ ಅಕ್ವಿಸಿಷನ್ ಎಂದು ಇದೆಯಾ?

ಶ್ರೀ ಕಟ್ಟಾ ಸುಬ್ರಮಣ್ಯನಾಯ್ಡು: ಇಲ್ಲ, ನಾವೇ ಹೇಳಿದ್ದೇವೆಂದೆ.

ಶ್ರೀ ಆರ್.ವಿ.ದೇಶಪಾಂಡೆ: ನಾನು ನಿಮಗೆ ಸ್ಪಷ್ಟಪಡಿಸುತ್ತೇನೆ, ಲ್ಯಾಂಡ್ ಅಕ್ವಿಸಿಷನ್‌ನಲ್ಲಿ ಸ್ಟೇಜಸ್ ಇವೆ, ಪ್ರಿಲಿಮಿನರಿನಲ್ಲಿ ಲ್ಯಾಂಡ್ ನೋಟಿಫೈ ಮಾಡುತ್ತೀರಿ ಅದು ಪ್ರಿಲಿಮಿನರಿ ನೋಟಿಫಿಕೇಷನ್, ಅಮೇಲೆ ಎನ್‌ಕ್ವೈರಿ, ಆವಾಗ 28/4 ಆದಾಗ ಅವಾರ್ಡ್ ಕನ್ಸೆಂಟ್ ಕೊಡುತ್ತಾರೆಂದು ನೀವು ಜಮೀನು ತೆಗೆದುಕೊಂಡಿದ್ದು ಸರಿ ಎಂದ ಹಾಗೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಅಧ್ಯಕ್ಷರೆ, ಅವರ ಹೆಸರೇ ಕಟ್ಟಾಸುಬ್ರಮಣ್ಯಂ ಎಂದರೆ ಕಟ್ಟಾ ಕುಮಾರಸ್ವಾಮಿ, ಸುಬ್ರಮಣ್ಯಂ ಕುಮಾರಸ್ವಾಮಿ ಒಂದೇ ಹೆಸರಲ್ಲವೇ ಸರ್. ಏಕೆಂದರೆ ನಾನು ರಮೇಶ್ ಕುಮಾರ್ ಹತ್ತಿರ ಕೇಳಿಕೊಂಡು ಕನ್ಫರ್ಮ್ ಮಾಡಿಕೊಂಡು ಹೇಳುತ್ತಿದ್ದೇನೆ. ನಾನು ದೇಶಪಾಂಡೆಗೆ ಕೇಳಿದೆ, ನನಗೆ ಗೊತ್ತಿಲ್ಲವೆಂದರು, ಆಮೇಲೇ ಆಥಾರಿಟಿಯವರನ್ನು ಕೇಳೋಣವೆಂದು ಅವರನ್ನು ಕೇಳಿದೆ, ಯಸ್ ಅಂದರು. ಅದಕ್ಕೆ ಕಟ್ಟಾಸುಬ್ರಮಣ್ಯ ನಾಯ್ಡು ಎಂದರೆ ಕಟ್ಟಾ ಕುಮಾರಸ್ವಾಮಿ ಫಾಲೊಯರ್, ನಿಮ್ಮ[ಸಿಎಂ] ಪರವಾಗಿ ಅವರು ಹೇಳಿದ್ದಾರೆ, ನೀವು ಸುಮ್ಮನಿರಿ, ಅವರು ಏನು ಹೇಳುತ್ತಾರೆ ಹೇಳಿಕೊಂಡು ಹೋಗಲಿ.

ಶ್ರೀ ಕಟ್ಟಾಸುಬ್ರಮಣ್ಯ ನಾಯ್ಡು: ಕೇಂದ್ರ ಸರ್ಕಾರವು ಕೂಡ ಭೂಸ್ವಾಧೀನ ಮಾಡಿಕೊಳ್ಳುವಾಗ 90%–10% ರೇಷಿಯೋದಲ್ಲಿ ಮಾಡಿಕೊಳ್ಳಲು ಸಾಧ್ಯವಿಲ್ಲ, 75%–25% ರೇಷಿಯೋದಲ್ಲಿ ಮಾಡಿಕೊಳ್ಳಬೇಕೆಂದು ಈಗಾಗಲೇ ಅವರು ಕೂಡ ಮರುಚಿಂತನೆಯನ್ನು ಮಾಡುತ್ತಿದ್ದಾರೆ. SEZ Act ತಂದಿರುವುದರಲ್ಲಿ ಲೋಪದೋಷಗಳಿವೆ ಎನ್ನುವುದನ್ನು ತಾವು, ನಾವು ಒಪ್ಪಿಕೊಳ್ಳಬೇಕಾಗುತ್ತದೆ. ಅದನ್ನು ಸರಿಪಡಿಸಬೇಕಾ, ಹೌದು. ಹಾಗಾಗಿ ನಮ್ಮ ರಾಜ್ಯದಲ್ಲಿ ಈಗಾಗಲೇ ನಮ್ಮ ಏಕಘಟಕ ಸಂಕೀರ್ಣಗಳಿಗೆ KIADB ಅಕ್ವಿಸಿಷನ್ ಮಾಡುವಾಗ ಕೆಲವು ನೀತಿಗಳನ್ನು ಅನುಸರಿಸುತ್ತಿದ್ದೇವೆ. ಗೋಮಾಳಕ್ಕೆ, ಆಸ್ಪತ್ರೆಗೆ, ಚರ್ಚ್ ಇಂಥ ಜಾಗಗಳನ್ನು ಅಕ್ವೆರ್ ಮಾಡಲು ಸುತ್ತೋಲೆ ಹೊರಡಿಸಿರುವುದು ಈಗಾಗಲೇ ಕಾನೂನಿನಲ್ಲಿದೆ ಎಂದು ತಾವು ಈಗಾಗಲೇ ಹೇಳುತ್ತಿದ್ದಿರಿ. ಇವತ್ತು ಸಾವಿರಾರು ಉದಾಹರಣೆಗಳು ನಮ್ಮ ಕಣ್ಣ ಮುಂದಿವೆ. ಸ್ಮಶಾನವನ್ನು, ದೇವಸ್ಥಾನವನ್ನು, ಶಾಲೆಯನ್ನು ನಾವು ಅಕ್ವೈರ್ ಮಾಡಿದ್ದೇವೆ. 1997 ರಿಂದ ಇಲ್ಲಿಯವರೆಗೆ ಅಕ್ವಿಸಿಷನ್ ಆಗಿರುವ ಲ್ಯಾಂಡ್‌ಗಳು ಹಾಗೆಯೆ ಬಿದ್ದಿದ್ದಾವೆ, ನಮ್ಮ ಕೈಯಿಂದ ಅಕ್ವಿಸಿಷನ್ ಮಾಡಿಕೊಡಲಾಗಲಿಲ್ಲ. ಆ ಕಡೆ ಭೂಮಾಲೀಕರು ಉಪಯೋಗಿಸಿಕೊಳ್ಳುವಂತೆಯೂ ಈ ಕಡೆ ಸರ್ಕಾರ ತೆಗೆದುಕೊಳ್ಳುವ ಹಾಗೆಯೂ

ಇಲ್ಲ. ಹೀಗಾಗಿ ಕೆಲವು ಸೂತ್ರಗಳನ್ನು ಮುಂಬರುವ ದಿವಸಗಳಲ್ಲಿ ಎಚ್ಚರ ವಹಿಸಿ ಸರ್ಕಾರ ಸೂಸುತ್ರವಾಗಿ ಮೊದಲೆ ಜೆಎಂಸಿ ಮಾಡಿ ಮಾಡಬೇಕೆನ್ನುವ ಉದ್ದೇಶಕ್ಕೋಸ್ಕರ ಅದನ್ನು ಹೊರಡಿಸಿದ್ದೇವೆಯೆ ಹೊರತು ಆ ಕಾನೂನು ನಮಗೆ ಗೊತ್ತಿಲ್ಲವೆಂದಲ್ಲ. ಈಗಾಗಲೇ ಆ ಕಾನೂನನ್ನು ಉಲ್ಲಂಘನೆ ಮಾಡಿ ಹಿಂದೆ ಮಾಡಿದ್ದಕ್ಕೆ ಇವತ್ತು ಸುಸೂತ್ರವಾಗಿ ನಡೆಯಲೆಂದು ನಾವು ಒಂದು ಸುತ್ತೋಲೆಯನ್ನು ಹೊರಡಿಸಿದ್ದೇವೆ. ಇವತ್ತೇನು ಕೈಗಾರಿಕಾ ಪ್ರದೇಶಗಳ ಬಗ್ಗೆ ಹೇಳುತ್ತಿದ್ದೇವೆ, ನಾವು ಡಿಮಾಂಡ್‌ಗಿಂತ ಜಾಸ್ತಿ ಅಕ್ವಿಸಿಷನ್ ಮಾಡುವುದಕ್ಕೆ ಹೋಗಿಲ್ಲ. ಇವತ್ತೇನು ನಮ್ಮ ಮುಂದೆ ಅರ್ಜಿಗಳಿದ್ದಾವೆ, ಅದಕ್ಕನುಗುಣವಾಗಿಯೆ ಅಕ್ವಿಸಿಷನ್ ಮಾಡಿಕೊಳ್ಳುವ ಪ್ರಕ್ರಿಯೆಯನ್ನು ಪ್ರಾರರಿಭ ಮಾಡಿದ್ದೇವೆ. ಸುಮಾರು 40000 ಎಕರೆ ಅಷ್ಟು ಜಮೀನಗೆ ಇವತ್ತು ನಮ್ಮಲ್ಲಿ ಬೇಡಿಕೆ ಇದೆ. ಅದರ ಆಧಾರದ ಮೇಲೆ ಇವತ್ತು ನಾವು 17000 ಎಕರೆಗೆ ಪ್ರಾಥಮಿಕ ಅಧಿಸೂಚನೆಯನ್ನು ಹೊರಡಿಸಿರುವುದು. ಅದರಲ್ಲಿ ಎಲ್ಲಾ ಮೂಲಭೂತ ಸೌಕರ್ಯಕ್ಕೆಲ್ಲಾ ಹೋಗಿ ನಮಗೆ ಸುಮಾರು 12000 ಎಕರೆ ಹಂಚುವುದಕ್ಕೆ ಸಿಗುತ್ತದೆ. ನಾವೇನು ಹಾಗೆಯೆ ಹೋಗಿ ನಮಗೆ ಬೇಕೆಂದು ಬೇಕಾದವರಿಗೆ ಕೊಡುವುದಕ್ಕೋಸ್ಕರ ಅಕ್ವಿಸಿಷನ್ ಮಾಡಲಿಲ್ಲ. ನಮ್ಮಲ್ಲಿರುವ ಸಿಂಗಲ್ ವಿಂಡೊನಲ್ಲಿ, ಹೈಪವರ್‌ನಲ್ಲಿ ಯಾವ ರೀತಿ ಯೋಜನೆಗಳು ನಮ್ಮ ಮುಂದು ಬಂದಿದ್ದಾವೆ, ಅದಕ್ಕನುಗುಣವಾಗಿ ಇವತ್ತು ನಾವು ಅಪ್ರೂವಲ್ ಮಾಡಿರುವುದು. ಮಾನ್ಯ ಜಯಪ್ರಕಾಶ್ ಹೆಗ್ಡೆಯವರು ರಾಜ್ಯದಲ್ಲಿ SEZ ಎಷ್ಟು ಕೊಟ್ಟಿದ್ದೀರೆಂದು ಕೇಳಿದರು. ಇಡೀ ರಾಜ್ಯದಲ್ಲಿ ಇವತ್ತು 41 SEZ ಗಳಿಗೆ ನಾವು ಅನುಮತಿಯನ್ನು ಕೊಟ್ಟಿದ್ದೇವೆ. ವಿಶೇಷವಾಗಿ, ಬೆಂಗಳೂರು , ಬೆಂಗಳೂರು ನಗರ, ಮಂಗಳೂರು, ಹಾಸನ, ಶಿವಮೊಗ್ಗ, ಉಡುಪಿ, ಮೈಸೂರು ಈ ಭಾಗಗಳಲ್ಲಿ ಅದನ್ನು ಕೊಟ್ಟಿದ್ದೇವೆ. ರಾಜ್ಯದ ಎಲ್ಲಾ ಭಾಗದಲ್ಲಿ 2ನೇ, 3ನೇ ಹಂತದ ನಗರಗಳಿಗೆ ಕೈಗಾರಿಕೆಗಳನ್ನು ಕೊಂಡಯ್ಯಬೇಕೆನ್ನುವ ಮುಂದಾಲೋಚನೆಯನ್ನು ಸರ್ಕಾರದ ಮುಂದೆ ಇಟ್ಟುಕೊಂಡು ನಾವು ಒಂದು ಕಾರ್ಯವನ್ನು ಪ್ರಾರಂಭ ಮಾಡಿದ್ದೇವೆ. ಸನ್ಮಾನ್ಯ ಕುಮಾರಸ್ವಾಮಿಯವರು, ಯಡಿಯೂರಪ್ಪನವರು ಅಧಿಕಾರಕ್ಕೆ ಬಂದ ಮೇಲೆ ಕಳೆದ ಫೆಬ್ರವರಿಯಿಂದ ಮೇ ತಿಂಗಳವರೆಗೆ ಸಿಂಗಲ್ ವಿಂಡೊ ಕಮಿಟಿಯಲ್ಲಿ 1089 ಘಟಕಗಳಿಗೆ ನಾವು ಅನುಮೋದನೆಯನ್ನು ಕೊಟ್ಟಿದ್ದೇವೆ. ಅದೇ ರೀತಿಯಲ್ಲಿ ಹೈ ಪವರ್ ಕಮಿಟಿಯಲ್ಲಿ ಕೂಡ ನಾವು 86 ಪ್ರಾಜೆಕ್ಟ್‌ಗಳಿಗೆ ಅನುಮತಿ ಕೊಟ್ಟು, 1,29,273 ಕೋಟಿ ರೂಪಾಯಿಗಳಷ್ಟು ಬಂಡವಾಳ ಹೂಡಿಕೆದಾರರು ನಮ್ಮ ರಾಜ್ಯಕ್ಕೆ ಬರುತ್ತಿವೆ, ಬಂಡವಾಳವನ್ನು ಹೂಡುತ್ತೇವೆ,

ನಾವು ಈ ರಾಜ್ಯದಲ್ಲಿ ಕೈಗಾರಿಕೆಗಳನ್ನು ಸ್ಥಾಪನೆ ಮಾಡುತ್ತೇವೆಂದು ನಮ್ಮ ಹತ್ತಿರ ಬಂದಿದ್ದ ಕಾರಣಕ್ಕಾಗಿ ನಾವು ಅನುಮತಿಯನ್ನು ಕೊಡುತ್ತಿದ್ದೇವೆ. 2,13,765 ಜನರಿಗೆ ಕೆಲಸವನ್ನು ಕೊಡುತ್ತೇವೆಂದು ಹೇಳಿರುವಂಥಾದ್ದು, ನಮ್ಮ ಗಮನದಲ್ಲಿದೆ. ಕೆಜಿಎಫ್‌ನಲ್ಲಿ ಕೈಗಾರಿಕೆಗಳನ್ನು ಸ್ಥಾಪನೆ ಮಾಡುವ ಬಗ್ಗೆ ತಾವು ಏನು ಪ್ರಸ್ತಾವನೆ ಇಟ್ಟಿದ್ದೀರಿ, ಮುಂಬರುವ ದಿವಸಗಳಲ್ಲಿ SEZಗಳನ್ನು ಸ್ಥಾಪನೆ ಮಾಡುವುದಕ್ಕಾಗಿ ಕೇಂದ್ರ ಸರ್ಕಾರದ ಹದ್ದುಬಸ್ತಿನಲ್ಲಿರುವಂತಹ ಜಮೀನುಗಳನ್ನು ರಾಜ್ಯ ಸರ್ಕಾರ ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡಿ, ಆ ಭಾಗದಲ್ಲಿ ಕೈಗಾರಿಕೆಗಳನ್ನು ಪ್ರಾರಂಭ ಮಾಡುವಂತಹ ಪ್ರಯತ್ನವನ್ನು ನಾವು ಖಂಡಿತವಾಗಿ ಮಾಡುತ್ತೇವೆ. ಅದೇ ರೀತಿ ಇವತ್ತು ಉತ್ತರ ಕರ್ನಾಟಕದಲ್ಲಿ ಕೂಡ, ಎಲ್ಲೆಲ್ಲಿ ಕೈಗಾರಿಕೆಗಳನ್ನು ಸ್ಥಾಪನೆ ಮಾಡಬೇಕು ಆ ಭಾಗದಲ್ಲಿ ನಾವು ಪ್ರಯತ್ನವನ್ನು ಮಾಡಿದ್ದೇವೆನ್ನುವ ಮತನ್ನು ತಮಗೆ ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಸಿದ್ದರಾಮಯ್ಯ: ಮಾನ್ಯ ಅಧ್ಯಕ್ಷರೆ, ನೆನ್ನೆಯಿಂದ ಬಹಳ ಚೆನ್ನಾಗಿ ತಯಾರಿ ಮಾಡಿಕೊಂಡು ಬಂದಿದ್ದಾರೆ. ಚೆನ್ನಾಗಿ ಹೇಳಿದ್ದಾರೆ. ಅವರು ಮಾತನಾಡುವಾಗ ನಾವೆಲ್ಲಾ ಮಧ್ಯೆ ಮಧ್ಯೆ interfere ಆಗಿದ್ದೇವೆ. ಅವರು ಹೇಳಿರತಕ್ಕಂತಹ ಪ್ರಕಾರ ಕೇಂದ್ರ ಸರ್ಕಾರ ರಾಜ್ಯ ಸರ್ಕಾರದ ಮೇಲೆ ಅವರು impose ಮಾಡಿ ಮಾಡಬೇಕೆಂದು ಎಲ್ಲಿಯೂ ಇಲ್ಲ. ರಾಜ್ಯ ಸರ್ಕಾರದ concurrence ತೆಗೆದುಕೊಳ್ಳಬೇಕಾಗುತ್ತದೆ. State Government infrastructure ಎಲ್ಲಾ ಮಾಡಿಕೊಳ್ಳಬೇಕಾಗುತ್ತದೆ. ಕುಡಿಯುವ ನೀರು ಕೊಡಬೇಕಾಗುತ್ತದೆ, ಪವರ್ ಕೊಡಬೇಕಾಗುತ್ತದೆ, ಬೇರೆ ಬೇರೆ facilities ಎಲ್ಲಾ ಒದಗಿಸಿಕೊಡಬೇಕಾಗುತ್ತದೆ. ರಾಜ್ಯ ಸರ್ಕಾರದ concurrence ಇಲ್ಲದೆ ರಾಜ್ಯ ಸರ್ಕಾರವೇ impose ಮಾಡಿ ಇಂತಹ ಜಾಗದಲ್ಲಿಯೇ ನಂದಗುಡಿ ಮಾಡಿ ಎಂದು ಹೇಳುವುದಕ್ಕೆ ಬರುವುದಿಲ್ಲ. investment ಮಾಡುವುದಕ್ಕೆ ಬರುವವರು ಇಂತಹ ಜಾಗದಲ್ಲಿ ನಾವು ಮಾಡಬಹುದು ಎಂದು ಪ್ರಪೋಸಲ್ ಕೊಡಬಹುದು. ಆ ಪ್ರಪೋಸಲ್‌ನ್ನು ಒಪ್ಪಿಕೊಳ್ಳುವುದು ಬಿಡುವುದು ರಾಜ್ಯ ಸರ್ಕಾರಕ್ಕೆ ಸೇರಿದ್ದು. ನಾವೇನು ಹೇಳುತ್ತಿದ್ದೇವೆಂದರೆ, ಅವರು ಹೇಳುವ ಪ್ರಕಾರ ನಮಗೆ ಕೈಗಾರಿಕೆಗಳು ಬೇಕೇ ಬೇಕು, investment ನಮಗೆ ಬರಲೇಬೇಕು, ನಾವು ನಂದಗುಡಿಯಲ್ಲಿ ಮಾಡಲೇಬೇಕಾಗುತ್ತದೆ ಎನ್ನುವ ದಾಟಿಯಲ್ಲಿ ಅವರು ಮಾತನಾಡಿದ್ದಾರೆ. ನಂದಗುಡಿಯಲ್ಲಿ 36 ಹಳ್ಳಿಗಳು ಬರುತ್ತವೆ, 12,500 ಎಕರೆ ಯಾರು ಸ್ಕಿಲ್‌ನವರು ಕೇಳಿದ್ದಾರೆ, 12,500 ಎಕರೆ ಅವರು ಏತಕ್ಕೋಸ್ಕರ ಕೇಳಿದ್ದಾರೆ, ಅಷ್ಟು ದೊಡ್ಡ

ಪ್ರಮಾಣದ ಏರಿಯಾದಲ್ಲಿ ಅವರು ಏನು ಮಾಡುತ್ತಾರೆ, ಬೇರೆಯವರೆಲ್ಲಾ ಏಕೆ ಅದನ್ನು ಕೊಡಬೇಕೆಂದು ವಿರೋಧ ಮಾಡಿದರು? ಎನ್ನತಕ್ಕಂಥಾದ್ದು ಒಂದು, ಎರಡನೆಯದು ರೈತರು ನಿರ್ಗತಿಕರಾಗುತ್ತಾರೆ, ನಾವು ರೈತರನ್ನು ನಿರ್ಗತಿಕರನ್ನಾಗಿ ನಾವು ಮಾಡಬಾರದು, ರೈತರ ಪರವಾಗಿ ನಿಲ್ಲಬೇಕು, ಎನ್ನತಕ್ಕಂಥಾದ್ದು ಇದು ಒಂದು. ಬಹಳ fertile land ತರಕಾರಿ ಬೇಳೆಯತಕ್ಕಂಥಾದ್ದು, ಹೈನುಗಾರಿಕೆ ಮಾಡತಕ್ಕಂಥಾದ್ದು, ಭತ್ತ ಬೆಳೆಯತಕ್ಕಂಥಾದ್ದು, ನೀರಾವರಿ ಪ್ರದೇಶ ಇರತಕ್ಕಂಥಾದ್ದು, ಪಂಪ್‌ಸೆಟ್‌ಗಳು ಇರತಕ್ಕಂಥಾದ್ದು ಒಂದು. ಸಣ್ಣ ರೈತರು ಮತ್ತು ಅತಿ ಸಣ್ಣ ರೈತರು ಎರಡನೆಯದು, ಮೂರನೆಯದು, ಬಹಳ ಜನ ಅಲ್ಲಿ un-authorized ಆಗಿ ಅಲ್ಲಿ occupants ಆಗಿ ಇರತಕ್ಕಂಥಾದ್ದು. ಬಗರ್ ಹುಕುಂನಂದ ಮಾಡಿಕೊಂಡಿರುವವರು. ಇಷ್ಟೆಲ್ಲಾ ಇರುವಾಗ ಬಹಳ ಮುಖ್ಯವಾಗಿ ಬೆಂಗಳೂರು ನಗರದಲ್ಲಿ ಈಗಾಗಲೇ ನೀವು ಗ್ರೇಟರ್ ಬೆಂಗಳೂರು ಮಾಡಿಬಿಟ್ಟಿದ್ದೀರಿ, ಒತ್ತಡ ಜಾಸ್ತಿಯಾಗುತ್ತಿದೆ, ಆ ಒತ್ತಡವನ್ನು ಈಗಾಗಲೇ ತಡೆದುಕೊಳ್ಳುವುದಕ್ಕೆ ಸಾಧ್ಯವಿಲ್ಲದೆ ಇರುವಾಗ ಮತ್ತೆ ಮತ್ತೆ ಬೆಂಗಳೂರು ಸುತ್ತ ಏಕೆ ಮಾಡುತ್ತಿದ್ದೀರಿ? ಕೇಂದ್ರ ಸರ್ಕಾರದವರು ನೀವು ಬೆಂಗಳೂರು ಸುತ್ತಲೇ ಮಾಡಿ ಎಂದು ಹೇಳಲಿಲ್ಲ. investors ಒಂದು ವೇಳೆ ನಮಗೆ ನಂದಗುಡಿನೇ ಬೇಕೆಂದರೆ ನೀವು ಬರಬೇಡಿ ಎಂದು ಹೇಳಿ. ಬೇರೆ ಕಡೆ ಹೋಗಿ ಎಂದು ಹೇಳಿ. ಅವರು ಬಂದರೆ ಬರಲಿ. ಅವರು ಬೆಂಗಳೂರಿನಲ್ಲಿಯೇ ಇನ್‌ವೆಸ್ಟ್ ಮಾಡಬೇಕೆಂದರೆ, We are not ready ಎಂದು ಹೇಳಿ. You want protect interest of the farmers ಎಂದು, ಅದನ್ನು ಹೇಳಿ. ಬೆಂಗಳೂರು ಸಿಟಿ ಸುತ್ತ ಬೇಕಾದಷ್ಟು ಕೈಗಾರಿಕೆಗಳು ಬಂದಿಲ್ಲವಾ, IT/BT ಗಳು ಬಂದು ಕುಳಿತಿಲ್ಲವಾ? ಬೇರೆ ಕಡೆ ಮಾಡಿ ಎಂದು ಹೇಳಿ. ಬೆಂಗಳೂರಿನಲ್ಲಿ ಈಗಾಗಲೇ ಕೈಗಾರಿಕೆಗಳು ಜಾಸ್ತಿಯಾಗಿವೆ, ನಾವು ನೀರು ಕೊಡುವುದಕ್ಕಾಗುವುದಿಲ್ಲ, ಬೇರೇನೂ ಸವಲತ್ತುಗಳನ್ನು ಕೊಡವುದಕ್ಕಾಗುವುದಿಲ್ಲವೆಂದು ಹೇಳಿ. ನೀರು ಎಲ್ಲಿಂದ ತೆಗೆದುಕೊಂಡು ಬಂದು ಕೊಡುತ್ತೀರಿ? ಸ್ಕಿಲ್‌ನವರು ನೀರು ಅವರೇ ಏರ್ಪಾಡು ಮಾಡಿಕೊಳ್ಳಬೇಕೆಂದು ಹೇಳಬೇಕೆಂದು ಹೈ ಪವರ್ ಕಮಿಟಿಯಲ್ಲಿ ತೀರ್ಮಾನ ಮಾಡಿದ್ದೀರಿ. ಅವರು ಎಲ್ಲಿಂದ ನೀರು ತೆಗೆದುಕೊಂಡು ಬರುತ್ತಾರೆ? ನೀರು ಸೃಷ್ಟಿ ಮಾಡುವುದಕ್ಕಾಗುತ್ತಾ? ಕಾವೇರಿಯಿಂದಲೇ ನೀರು ತರಬೇಕು. ನಾವು ಎಲ್ಲಿಂದ ತರಬೇಕು ನೀರು.

ಅಧ್ಯಕ್ಷರು: it is for them. ಅವನು ತನ್ನ ಅನುಕೂಲದಲ್ಲಿಯೇ ಮಾಡಿಕೊಳ್ಳುತ್ತೇನೆಂದು ಹೇಳಿದರೆ ಮಾಡಿಕೊಳ್ಳಲಿ. ಕಂಡಿಷನ್ ಹಾಕಿದ್ದಾರೆ. ಜಲ

ಮೂಲ ಸಿಗದೇ ಹೋದರೆ ಅವರು ಹೊರಟು ಹೋಗುತ್ತಾರೆ. There is no binding of the Government.

ಶ್ರೀ ಸಿದ್ದರಾಮಯ್ಯ: ನೇರವಾಗಿ ಪರ್ಚೇಸ್ ಮಾಡಲಿ, ಏನೇ ಮಾಡಲಿ, ಸರ್ಕಾರ ಅವರಿಗೆ ಸಹಾಯ ಮಾಡುವುದು ಬೇಡ. ಬೇರೆ ಕಡೆ ಹೋಗಿ ಮಾಡಲಿ. ಇಲ್ಲದಿದ್ದರೆ ಸರ್ಕಾರಕ್ಕೆ ಕೆಟ್ಟ ಹೆಸರು ಬರುತ್ತದೆ. ಮೊದಲಿನಿಂದ ಹೇಳಿಕೊಂಡು ಬಂದಿರುವುದಕ್ಕೆ ವಿರುದ್ಧವಾಗುತ್ತದೆ.

ಅಧ್ಯಕ್ಷರು: ಇನ್ನು ಕೆಲವು ಬಹಳ ಮುಖ್ಯವಾದ ವಿಚಾರಗಳಿವೆ.

ಶ್ರೀ ಎಂ.ಪಿ.ವೆಂಕಟೇಶ್: ನೆನ್ನೆಯಲ್ಲಾ ಮಾನ್ಯ ವಿರೋಧ ಪಕ್ಷದ ನಾಯಕರು ಮಾನ್ಯ ಸಿದ್ದರಾಮಯ್ಯನವರು, ದೇಶಪಾಂಡೆಯವರು ಮತ್ತು ದೊಡ್ಡ ದೊಡ್ಡ ಮುಖಂಡರೆಲ್ಲಾ ಮಾತನಾಡಿದ್ದು ಕೇಳಿ, ಈ ಸದನದಲ್ಲಿ ನಮಗೆ ಪತ್ರಿಕೆಯವರಿಗೆ ಬಹಳ ಗಾಬರಿಯಾಗಿತ್ತು. ಇವರ ಉದ್ರೇಕ ನೋಡಿ ನಮಗೂ ತಲೆಯ ಮೇಲೆ ಇತ್ತು. ಮಾನ್ಯ ಮುಖ್ಯಮಂತ್ರಿಗಳು ಹೇಳಿದ ಮೇಲೆ ನಮಗೂ ಅರ್ಥವಾಯಿತು, ಕಾಂಗ್ರೆಸ್ ಪಕ್ಷದವರಿಗೂ ಅರ್ಥವಾಯಿತು, ಪತ್ರಿಕೆಗಳವರಿಗೂ ಎಲ್ಲಾರಿಗೂ ಗೊತ್ತಾಯಿತು ಇದರಲ್ಲಿ ಏನೂ ಇಲ್ಲವೆಂದು. ಏಕೆ ಮತ್ತೆ ಪದೇ ಪದೇ ಹೇಳಿತ್ತೀರಿ? ಅದನ್ನೆ ಹೇಳುತ್ತಿದ್ದರೆ ಹೇಗೆ?

ಅಧ್ಯಕ್ಷರು: ಆಯಿತು. Let us take supplemetary demands. ಎಲ್ಲ ಕೇಳಿದ ಮೇಲೆ ಮತ್ತೆ ಏಕೆ?

ಶ್ರೀ ವಿ.ಸೋಮಣ್ಣ: ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳು ಸಾಕಷ್ಟು ಮಾಹಿತಿಗಳನ್ನು ಕೊಟ್ಟಿದ್ದಾರೆ. ನಾನು ಮಾತನಾಡುವಾಗ ಒಂದು ಮಾತನ್ನು ಹೇಳಿದೆ, ಕೆಲವು ಕಂಪನಿಗಳು ಈಗಾಗಲೇ ಜಾಗವನ್ನು ತೆಗೆದುಕೊಂಡಿದ್ದಾರೆ. ಆ ಜಾಗವನ್ನು ಖಾಲಿ ಇಟ್ಟುಕೊಂಡಿದ್ದಾರೆ. ಮತ್ತೆ ಇನ್ನೊಂದು ಕಡೆ ಅರ್ಜಿ ಹಾಕಿಕೊಂಡು ಅವರಿಗೇ ಕೊಡತಕ್ಕಂತಹ ಪ್ರಮೇಯ ಏನದೆ? ಇವತ್ತು ಬೆಂಗಳೂರಿನಂತಹ ದೊಡ್ಡ ನಗರದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಮತ್ತು ತಾವು ಸೇರಿ ಏನೇನು ಮಾಡುತ್ತಿದ್ದೀರಿ, ರೈತರಿಗೆ ಅನಾನುಕೂಲವಾಗುವುದಿಲ್ಲ, ಅವರಿಗೆ consult ಮಾಡುವುದಿಲ್ಲ ಎನ್ನುವ ಮಾತನ್ನು ಹೇಳುವಾಗ ಹಿಂದಿನಿಂದ ನಡೆದುಕೊಂಡು ಬಂದಂತಹ ಅನೇಕ ಮಾಹಿತಿಗಳನ್ನು ಹೇಳಿದ್ದಾರೆ. ನಾನು ತಮ್ಮ ಮೂಲಕ ಸರ್ಕಾರವನ್ನು ಒತ್ತಾಯ ಮಾಡುತ್ತೇನೆ, ಯಾವ್ಯಾವ ಕಂಪನಗಳು ಇವತ್ತು ಅರ್ಜಿಗಳನ್ನು ಹಾಕಿಕೊಂಡಿದ್ದಾರೆ,

ಅದೇ ಕಂಪನಿಯಲ್ಲಿರತಕ್ಕಂತಹ ಬಹುತೇಕ ಸದಸ್ಯರು ಬೇರೆ ಬೇರೆ ಹೆಸರಿನಲ್ಲಿ ಕಂಪನಿಗಳನ್ನು ಮಾಡಿಕೊಂಡು ಸಾವಿರಾರು ಗಟ್ಟಲೆ ಜಮೀನುಗಳನ್ನು ಏನು ಪಡೆದುಕೊಂಡಿದ್ದಾರೆ, ಅಂತವರಿಗೆ ಮತ್ತೆ ಅವಕಾಶ ಕೊಡತಕ್ಕಂತಹ ಅವಶ್ಯಕತೆ ಏನಿದೆ? ಗೋಕುಲ್‌ದಾಸ್ ಎನ್ನುವವರು ಏನದ್ದಾರೆ ಬೆಂಗಳೂರು ನಗರದ ಸುತ್ತಮುತ್ತ ಅವರ ಅವ್ಯವಹಾರ ಸಾಕಷ್ಟು ಇದೆ. ಆ ರೀತಿ ಇನ್ನು ಕೆಲವರದು ಇದೆ. ಇಂತಹವರಿಗೆ ಮತ್ತೆ 400 ಎಕರೆ, 300 ಎಕರೆ ಜಮೀನನ್ನು ಕೊಡತಕ್ಕಂತಹ ಪ್ರಮೇಯ ಏನಿದೆ, ನಾನು ತಮ್ಮ ಮೂಲಕ ಸರ್ಕಾರವನ್ನು ಒತ್ತಾಯ ಮಾಡುತ್ತೇನೆ. ಈಗಾಗಲೇ ಬೃಹತ್ ಬೆಂಗಳೂರು ಮಾಡಿರುವುದರಿಂದ ಸ್ಯಾಟಲೈಟ್ ಟೌನ್ ಮಾಡುವುದು ಮರುಪರಿಶೀಲನೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ದಯಮಾಡಿ ಕೊಟ್ಟಿರುವವರಿಗೆ ಜಾಗ ಕೊಡುವಂತಹ ಅವಶ್ಯಕತೆ ಇಲ್ಲ. ಬೆಂಗಳೂರು ಸುತ್ತಮುತ್ತಕ್ಕೆ ಸಂಬಂಧಪಟ್ಟ ಹಾಗೆ ನಾವು ಏನು ತೀರ್ಮಾನ ಮಾಡಿದ್ದೀರಿ ಇದು ಪ್ರಮುಖವಾದ ತೀರ್ಮಾನ. ಎಲ್ಲಿಯಾದರೂ ಬೇರೆ ಬೇರೆ ಜಿಲ್ಲೆಗಳಿಗೆ ಹೋಗುವುದಾದರೆ ಕೊಡಿ. ಇಲ್ಲವೆಂದರೆ ತೊಂದರೆ ಇಲ್ಲ. ಮಾನ್ಯ ಕಟ್ಟಾ ಸುಬ್ರಮಣ್ಯ ನಾಯ್ಡುರವರು ಹೇಳಿದ ಹಾಗೆ ಎಲ್ಲಾ ರೀತಿಯಿಂದ ಯಾವ ದೇಶದಲ್ಲಿಯೂ ಇಷ್ಟೊಂದು ರಕ್ಷಣೆ ಇಲ್ಲ. ಕರ್ನಾಟಕದಲ್ಲಿ IT/BTಗೆ ಇರುವಷ್ಟು ರಕ್ಷಣೆ ಇಡೀ ದೇಶದಲ್ಲಿ ಎಲ್ಲಿಯೂ ಇಲ್ಲ. ನಾವು ಇಲ್ಲಿ ಕೊಡುವುದಿಲ್ಲವೆಂದರೆ ಚಿತ್ರದುರ್ಗಕ್ಕೆ ಹೋಗುತ್ತಾರೆ, ಕೋಲಾರಕ್ಕೂ ಹೋಗುತ್ತಾರೆ, ಹಾಸನಕ್ಕೂ ಹೋಗುತ್ತಾರೆ.

ಶ್ರೀ ಎನ್. ಧರ್ಮಸಿಂಗ್: ಮಾನ್ಯ ಅಧ್ಯಕ್ಷರೆ, ಎರಡು ದಿವಸಗಳಿಂದ ಬಹಳ ಚರ್ಚೆಯಾಗಿದೆ. ಆದರೆ ನೇರವಾದ ನಮ್ಮ ಪ್ರಶ್ನೆಗೆ ಮಾನ್ಯ ಮುಖ್ಯಮಂತ್ರಿಗಳು ನೇರವಾದ ಉತ್ತರ ಕೊಟ್ಟಿಲ್ಲ. ನಂದಗುಡಿಯಲ್ಲಿ ರೈತರ ಜಮೀನುಗಳನ್ನು ವಶಪಡಿಸಿಕೊಳ್ಳುವುದು ಬಿಡಬೇಕು. ಸ್ಕಿಲ್ ಕಂಪನಗೆ ಕೊಡಬಾರದು. ಇವತ್ತು ಅಲ್ಲಿ ರೈತರ ಮೇಲೆ ಅನ್ಯಾಯವಾಗುತ್ತಿದೆ, ಅದರ ಬಗ್ಗೆ ತಾವು ಸದನ ಸಮಿತಿ ಮಾಡಬೇಕೆಂದು ಹೇಳಿದ್ದೇವೆ. ಸದನ ಸಮಿತಿ ಮಾಡುವ ಬಗ್ಗೆ ಉತ್ತರ ಕೊಡಿ.

ಶ್ರೀ ಹೆಚ್.ಡಿ.ಕುಮಾರಸ್ವಾಮಿ: ಮಾನ್ಯ ಅಧ್ಯಕ್ಷರೆ, ಮಾನ್ಯ ಕಟ್ಟಾ ಸುಬ್ರಮಣ್ಯ ನಾಯ್ಡುರವರು ಉತ್ತರ ಕೊಟ್ಟ ತಕ್ಷಣ ಎಲ್ಲರಿಗೂ ಸಮಾಧಾನವಾಗಿರಬಹುದು ಎಂದು ಅಂದುಕೊಂಡೆ. ವಿಷಯ ಮುಗಿತು ಅಂದುಕೊಂಡೆ. ನನಗೆ ಗೊತ್ತಿಲ್ಲ, ಈಗ ನನಗೆ ಗೊತ್ತಾಯಿತು.

ಶ್ರೀ ಆರ್.ವಿ.ದೇಶಪಾಂಡೆ: ನಾವು ಒಪ್ಪಿಕೊಳ್ಳುತ್ತಿದ್ದೇವು. ರಾಯಲ್ಟಿ ಬದಲಾವಣೆ ಮಾಡಿ ಬಿಟ್ಟರು. ಹೇಗೆ ಒಪ್ಪಿಕೊಳ್ಳುವುದಕ್ಕಾಗುತ್ತದೆ?

ಶ್ರೀ ಕೆ.ಆರ್.ರಮೇಶ್ ಕುಮಾರ್: ಮಾನ್ಯ ಅಧ್ಯಕ್ಷರೆ, ಇನ್ನು ಯಾರಿಗಾದರೂ ಅಸಮಾಧಾನ ಇದ್ದರೆ, ಮಾನ್ಯ ರೇವಣ್ಣನವರ ಕೈಯಲ್ಲಿ ಉತ್ತರ ಕೊಡಿಸಿ.

ಶ್ರೀ ಜಯಪ್ರಕಾಶ ಹೆಗ್ಡೆ ಕೆ: ಮಾನ್ಯ ಅಧ್ಯಕ್ಷರೆ, ಮಾನ್ಯ ಕಟ್ಟಾಸುಬ್ರಮಣ್ಯ ನಾಯ್ಡುರವರು ಉತ್ತರ ಕೊಟ್ಟ ಮೇಲೆ ಒಂದು confusion ಪ್ರಾರಂಭವಾಯಿತು. ಅಲ್ಲಿ developers ಎಂದರೆ land developers ಅರ್ಥ ಮಾಡಿಕೊಂಡು ತೀರ್ಮಾನ ತೆಗೆದುಕೊಂಡರೋ ಹೇಗೆ ಎಂದು ಗೊತ್ತಾಗಲಿಲ್ಲ. SEZ alloment ಬೇರೆ, land developers ಬೇರೆ ಇದು land developers ನಂದ ಆಗಿದೆ ಎಂದು ಅಭಿಪ್ರಾಯ ಬರುತ್ತಿದೆ.

ಶ್ರೀ ಹೆಚ್.ಡಿ.ಕುಮಾರಸ್ವಾಮಿ: ಮಾನ್ಯ ಅಧ್ಯಕ್ಷರೆ, ಈಗಾಗಲೇ, ಮಾನ್ಯ ಸಚಿವರು ಸುದೀರ್ಘವಾದ ಉತ್ತರವನ್ನು ಕೊಟ್ಟ ನಂತರ ಮತ್ತೆ ಹಲವಾರು ಸದಸ್ಯರುಗಳ ಕೆಲವು ಸ್ಪಷ್ಟಿಕರಣಗಳನ್ನು ಕೇಳಿದ್ದಾರೆ. ಅದರ ಜೊತೆಗೆ ನಮ್ಮ ಹಿರಿಯ ಸದಸ್ಯರಾದ ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಕಾಂಗ್ರೆಸ್ ಪಕ್ಷದ ಸತ್ಯ ಶೋಧನ ಸಮಿತಿ ಬಗ್ಗೆ, ಅವರು ಕೊಟ್ಟಿರತಕ್ಕಂತಹ ವರದಿ ಬಗ್ಗೆ ಸರ್ಕಾರ ಲಘುವಾಗಿ ತೆಗೆದುಕೊಂಡಿದೆ ಎನ್ನುವುದು ಸೂಕ್ತವಾಗಿಲ್ಲ, ಗಂಭೀರವಾಗಿ ತೆಗೆದುಕೊಳ್ಳಬೇಕೆಂದು ಸಲಹೆ ಕೊಟ್ಟಿದ್ದಾರೆ. ನಿಮ್ಮ ಸದಸ್ಯರು ನಮಗೆ ಕೊಟ್ಟಿರತಕ್ಕಂತಹ ಸಲಹೆಗಳೇನವೆ, ರೈತರ ಹಿತವನ್ನು ಕಾಪಾಡತಕ್ಕಂತಹ ಹಿತದೃಷ್ಟಿಯಿಂದ ನಿಮ್ಮ ಸದಸ್ಯರುಗಳು ಕೊಟ್ಟಿರತಕ್ಕಂತಹ ಸಲಹೆಗಳು ಸೂಕ್ತ ಇದ್ದರೆ, ಖಂಡಿತವಾಗಿ ಆ ಸಲಹೆಗಳನ್ನು ಸ್ವೀಕಾರ ಮಾಡುವುದಕ್ಕೆ ನಾನು ಸಿದ್ದನದ್ದೇನೆ. ಇದರಲ್ಲಿ ಹಿಂದೆ ಸರಿಯತಕ್ಕಂತಹ ಪ್ರಶ್ನೆ ಇಲ್ಲ. ಅದರ ಜೋತೆಯಲ್ಲಿ ಮಾಧುಸ್ವಾಮಿಯವರು ಕೆಲವು ಸದಸ್ಯರುಗಳು SEZ ಬಗ್ಗೆ ಚರ್ಚೆ ಮಾಡತಕ್ಕಂತಹ ಸಂದರ್ಭದಲ್ಲಿ ಹಲವಾರು ಜನ ನಮ್ಮ ರೈತರು ಸರ್ಕಾರಿ ಭೂಮಿಯಲ್ಲಿ ಉಳುಮೆ ಮಾಡತಕ್ಕಂತಹ ಬಗರ್ ಹುಕುಂ ವಿಷಯವನ್ನು ಏನು ಚರ್ಚೆ ಮಾಡಿದ್ದೀರಿ. ಅಲ್ಲಿ 4000 ಎಕರೆವರಗೂ ಸರ್ಕಾರಿ ಭೂಮಿ ಇಲ್ಲ ಎನ್ನತಕ್ಕಂಥ ವಿಷಯವನ್ನು ಪ್ರಸ್ತಾಪ ಮಾಡಿದ್ದೀರಿ, ಅದು ಇಲ್ಲದಿದ್ದರೆ ನಾವು ಕೊಡುವ ಪ್ರಶ್ನೆಯೇ ಬರುವುದಿಲ್ಲ. ಆದರೆ ಬಗರ್ ಹುಕಂ ಭೂಮಿಯನ್ನು ಉಳುಮೆ ಮಾಡತಕ್ಕಂಥವರು ಏನದ್ದಾರೆ ಆ ರೈತರುಗಳ ವಿಷಯದಲ್ಲಿ ಸರ್ಕಾರ

ಯಾವುದೇ ಕಾರಣಕ್ಕೆ ಅವರಿಗೆ ಅನ್ಯಾಯವಾಗುವುದಕ್ಕೆ ಅವಕಾಶ ಕೊಡುವುದಿಲ್ಲ. ಇದನ್ನು ನಾನು ಸ್ಪಷ್ಟಿಕರಣ ಕೊಡುವುದಕ್ಕೆ ಬಯಸುತ್ತೇನೆ. ಇನ್ನು ಮಾನ್ಯ ರಾಜೇಂದ್ರನ್‌ರವರು KGFನಲ್ಲಿ SEZ ಮಾಡಬೇಕೆಂದು ಏನು ಹೇಳುತ್ತಿದ್ದಾರೆ, ಬಹಳ ಸದಸ್ಯರ ಅವರ ಪರವಾಗಿ ಬೆಂಬಲ ವ್ಯಕ್ತಪಡಿಸಿದ್ದಾರೆ. ಅದರ ಸರ್ಕಾರ ಗಂಭೀರವಾಗಿ ಚಿಂತನೆ ಮಾಡಿ SEZ ಮಾಡತಕ್ಕಂಥದಕ್ಕೆ ಪ್ರಯತ್ನ ಪಡುವುದು ಮಾತ್ರವಲ್ಲ, ಪ್ರಯತ್ನ ಪಡುವುದೇನು, ನಾವು ಮಾಡಲಿಕ್ಕೆ ತೀರ್ಮಾನ ಮಾಡತಕ್ಕಂಥದ್ದಕ್ಕೆ, ಕೆಲವರು ಬಂಡವಾಳ ಹೂಡತಕ್ಕಂಥವರನ್ನು ಅಲ್ಲಿಗೆ ಹೋಗತಕ್ಕಂಥದ್ದಕ್ಕೆ ಸಲಹೆ ಕೊಡುತ್ತೇವೆನ್ನುವುದು ಈ ಸಂಧರ್ಭದಲ್ಲಿ ಹೇಳಿ, ಬೀದರ್‌ನ ಬಗ್ಗೆ ಒಂದು ವಿಷಯವನ್ನು ಗಮನೆಕ್ಕೆ ತರಲಿಕ್ಕೆ ಬಯಸುತ್ತೇನೆ. ಬೀದರ್‌ನಲ್ಲಿ ಈಗಾಗಲೇ KIADB ಯಿಂದ ಏನು ಹಿಂದೆ ಭೂಮಿಯನ್ನು acquire ಮಾಡಿದ್ದರು, ಅಲ್ಲಿ ದೊಡ್ಡ ಮಟ್ಟದಲ್ಲಿ garment industry ತರತಕ್ಕಂಥದ್ದಕ್ಕೆ ಸುಮಾರು 15,20 ಸಾವಿರ ಜನರಿಗೆ ಅಲ್ಲಿ ಉದ್ಯೋಗ ಸೃಷ್ಟಿ ಮಾಡುವುದರ ಕಡೆಗೆ ಗಮನಹರಿಸಲಿಕ್ಕೆ ಈಗಾಗಲೇ 2-3 ದೊಡ್ಡ ಕಂಪನಿಗಳಿಗೆ ನಾನು ಮನವಿಯನ್ನು ಮಾಡಿದ್ದೇನೆ. ಈಗ ಬಿಡದಿ ಹತ್ತಿರ ಮಧುರಾ ಕೋಟ್ಸ್ ಮತ್ತು 2-3 ಕಂಪನಿಗಳು ಏನು ಬಂದಿವೆ, ಅವರು ಈಗಾಗಲೇ ಸ್ಥಳ ಪರಿಶೀಲನೆ ಮಾಡಿದ್ದಾರೆ. ಅಲ್ಲಿ ದೊಡ್ಡ ಮಟ್ಟದಲ್ಲಿ garment industry ತರತಕ್ಕಂಥದ್ದಕ್ಕೆ ಅವರು ಜಾಗ ನೋಡಿಕೊಂಡು ಬಂದು ನಮಗೆ ಒಪ್ಪಿಗೆ ಕೊಟ್ಟಿದ್ದಾರೆ. ಬೀದರ್ ಜಿಲ್ಲೆಯಲ್ಲಿ ಉದ್ಯೋಗ ಸೃಷ್ಟಿ ಮಾಡತಕ್ಕಂಥದ್ದಕ್ಕೆ ಈಗಾಗಲೇ ನಾವು ಗಮನಹರಿಸಿದ್ದೇವೆ. ಬರೀ ಬೆಂಗಳೂರು ಸುತ್ತಮುತ್ತ ಒಂದಕ್ಕೆ ಮಾತ್ರ ತೀರ್ಮಾನ ಮಾಡತಕ್ಕಂಥಾದ್ದಲ್ಲ. ಈಗಾಗಲೇ ಹೇಳಿದ ಹಾಗೆ ಯಾವುದೇ ಭೂಮಿಯನ್ನು ರೈತರಿಂದ ನೇರವಾಗಿ ಖರೀದಿ ಮಾಡಿಕೊಂಡು ಅವರು ಸರ್ಕಾರದ ಮುಂದು ಬಂದು ಅರ್ಜಿ ಹಾಕಿಕೊಂಡಿರುವ ಸಂದರ್ಭದಲ್ಲಿ ಮಾತ್ರ ಈ ಪ್ರಶ್ನೆ ಉದ್ಭವಾಗತಕ್ಕಂಥಾದ್ದು. ಅಲ್ಲಿಯೇ ಸರ್ಕಾರವೇ ನೇರವಾಗಿ ರೈತರಿಂದ ಭೂಮಿಯನ್ನು ಖರೀದಿ ಮಾಡುವ ವಿಷಯದಲ್ಲಿ ಯಾವುದೇ ಬಂಡವಾಳ ಹೂಡತಕ್ಕಂಥವರಿಗೆ ಅವಕಾಶ ಕೊಡುವುದಿಲ್ಲವೆನ್ನುವ ತೀರ್ಮಾನವನ್ನು ನಾವು ಮಾಡಿದ್ದೇವೆ. ಸಚಿವಸಂಪುಟದಲ್ಲೂ ಅದೇ ತೀರ್ಮಾನವನ್ನು ಮಾಡಿರತಕ್ಕಂಥದ್ದು ಎಂದು ಹೇಳಿ, ಸದಸ್ಯರುಗಳು ಈ ವಿಷಯದಲ್ಲಿ ರೈತರ ರಕ್ಷಣೆ ಮಾಡುವ ವಿಷಯದಲ್ಲಿ ಫಲವತ್ತಾದ ಭೂಮಿಯನ್ನು ಉಳಿಸಿಕೊಳ್ಳುವ ವಿಷಯದಲ್ಲಿ ಏನು ಹೇಳಿದ್ದಾರೆ, ಅದರ ಬಗ್ಗೆ ಸರ್ಕಾರ ಈಗಾಗಲೇ ಗಮನ ಹರಿಸಿರುವುದರಿಂದ ಈ ವಿಷಯದಲ್ಲಿ ಸದನ ಸಮಿತಿ ಮಾಡತಕ್ಕಂಥ ಯಾವುದೇ ರೀತಿಯ ಅಂಥ

ಒಂದು ದೊಡ್ಡ ತೀರ್ಮಾನಗಳು ಯಾವುದೂ ಆಗದೇ ಇರತಕ್ಕಂಥ ಸನ್ನಿವೇಶದಲ್ಲಿ ಇದರ ಅವಶ್ಯಕತೆಯೇ ಇಲ್ಲ. ಈಗಾಗಲೇ ನಿಮ್ಮದೇ ಸಮಿತಿ ನಿಮಗೇನು ಮನವಿಯನ್ನು ಕೊಟ್ಟಿದ್ದಾರೆ, ಈಗಾಗಲೇ ನಿಮ್ಮದೇ ಕಾಂಗ್ರೆಸ್ ಪಕ್ಷದ ಸಮಿತಿ ಸದಸ್ಯರು ಏನು ವರದಿಯನ್ನು ಕೊಟ್ಟಿದಾರೆ, ಆ ಒಂದು ವರದಿ ಆಧಾರದ ಮೇಲೆ ತೀರ್ಮಾನ ಮಾಡತಕ್ಕಂಥದ್ದಕ್ಕೆ ನೀವು ಕಳುಹಿಸಿಕೊಟ್ಟರೆ ಅದಕ್ಕೆ ನಾನು ಬದ್ಧನಾಗಿದ್ದೇನೆಂದು ಈ ಸಂದರ್ಭದಲ್ಲಿ ಹೇಳುತ್ತಾ ಸ್ಪಷ್ಟೀಕರಣ ನೀಡುತ್ತೇನೆ.

ಶ್ರೀ ಧರ್ಮಸಿಂಗ್: ಸದನ ಸಮಿತಿ ಮಾಡಲಿಕ್ಕೆ ಏನು ತೊಂದರೆ ಇದೆ?

ಶ್ರೀ ಹೆಚ್.ಡಿ.ಕುಮಾರಸ್ವಾಮಿ: ಅದನ್ನು ಮಾಡತಕ್ಕಂಥ ಅವಶ್ಯಕತೆಯೇ ಇಲ್ಲದಿದ್ದಾಗ ಯಾವ ವಿಷಯಕ್ಕೆಂದು ನಾವು ಸದನ ಸಮಿತಿ ಮಾಡಬೇಕು?

ಶ್ರೀ ಎನ್.ಧರ್ಮಸಿಂಗ್: ನಂದಗುಡಿಯಲ್ಲಿ ಈಗಾಗಲೇ ರೈತರಿಗೆ ಸಾಕಷ್ಟು ತೊಂದರೆಯಾಗುತ್ತಿದೆ, ದರೋಡೆಯಾಗುತ್ತಿದೆ, ಅದಕ್ಕೆ ಸದನ ಸಮಿತಿ ಆಗಬೇಕು. ಸದನ ಸಮಿತಿ ವರದಿ ಕೊಟ್ಟ ನಂತರ ಸರ್ಕಾರ ಮುಂದಿನ ಕ್ರಮ ತೆಗೆದುಕೊಳ್ಳಬೇಕು.

(ಗೊಂದಲ)

ಶ್ರೀ ಹೆಚ್..ಡಿ.ಕುಮಾರಸ್ವಾಮಿ: ಸದನ ಸಮಿತಿ ಮಾಡುವ ಅಗತ್ಯವಿಲ್ಲದಿದ್ದಾಗ ಏನು ವಿಷಯ ಚರ್ಚೆ ಮಾಡಲಿಕ್ಕೆ ಮಾಡಬೇಕು? ಈಗಾಗಲೇ ಸಚಿವ ಸಂಪುಟದಲ್ಲಿ ನಂದಗುಡಿ SEZ ಬಗ್ಗೆ ಏನು ತೀರ್ಮಾನ ಮಾಡಿದ್ದೇವೆ, ಇದರಲ್ಲಿ ರೈತರಿಗೆ ತೊಂದರೆ ಕೊಡುವ ಪ್ರಶ್ನೆ ಇಲ್ಲ. ಆ ಸಂಸ್ಥೆ 6 ಕೋಟಿ ಬಂಡವಾಳ ಹಾಕತಕ್ಕಂಥದ್ದು ಅಥವಾ 600 ಕೋಟಿ ಹಾಕುತ್ತದೋ ಅದು ನನ್ನ ಪ್ರಶ್ನೆ ಅಲ್ಲ. ಇವತ್ತು ಕೇಂದ್ರ ಸರ್ಕಾದಲ್ಲೂ ಅವರಿಗೆ ಏನು in principle ಒಪ್ಪಿಗೆ ಕೊಟ್ಟಿದ್ದಾರೆ, ಅವರ 6ಕೋಟಿ ರೂ.ಗಳ ಬಂಡವಾಳ ಅದೆಲ್ಲ ಲೆಕ್ಕಾಚಾರ ಮಾಡಿದ್ದಾರೆ. ಇದರಲ್ಲಿ ನಾವು ಆ ಒಂದು ಕಂಪನಗೆ ನೇರವಾಗಿ ಸರ್ಕಾರ ಭೂಮಿ ಕೊಡದಿರತಕ್ಕಂಥ ಒಂದು ತೀರ್ಮಾನವೇ ಆಗಿದ್ದಾಗ, ಇದರಲ್ಲಿ ಸದನ ಸಮಿತಿ ಮಾಡಿ ಇದರ ಬಗ್ಗೆ ಸತ್ಯ ಶೋಧನೆ ಮಾಡತಕ್ಕಂಥ ಅವಶ್ಯಕತೆ ಏನೂ ಬರುವುದಿಲ್ಲ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಒಪ್ಪಿಕೊಳ್ಳೋಣ, ಏಕೆಂದರೆ, ಸದನ ಸಮಿತಿ ಮಾಡುವ ಅವಶ್ಯಕತೆ ಇಲ್ಲ ಸತ್ಯಶೋಧನಾ ಸಮಿತಿಯವರು ಈಗಾಗಲೇ ಏನು ವರದಿ ಕೊಟ್ಟಿದ್ದಾರೆ ಅದನ್ನೇ ನಾನು ಅನುಷ್ಠಾನಕ್ಕೆ ತರುತ್ತೇನೆ ಎನ್ನುವ

ಮಾತು ಹೇಳಿದರು. ಅದಕ್ಕಾಗಿ ತಮ್ಮ ಮುಖಾಂತರ ಈ ಸಮಿತಿ ವರದಿಯನ್ನು ಮಾನ್ಯ ಮುಖ್ಯಮಂತ್ರಿಗಳಿಗೆ ತಾವು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. (ಗೊಂದಲ) ಓದಿಯೇ ಹೇಳಿದ್ದೇನಲ್ಲ. ಅವರ ಮುಂದೆ ಪ್ರತಿಯೊಂದನ್ನು ಬಿಚ್ಚಿ ಬಿಚ್ಚಿ ಹೇಳಿದ್ದೇನೆ. ಆ report ಅನ್ನೇ ಕೊಡುತ್ತಿದ್ದೇನೆ.

ಶ್ರೀ ಸಿದ್ದರಾಮಯ್ಯ: ಅಲ್ಲಿರುವ ಸಲಹೆಗಳನ್ನೆಲ್ಲ ಜಾರಿ ಮಾಡಿಬಿಡಿ.

(ಗೊಂದಲ)

ಶ್ರೀ ಎಂ ಮಲ್ಲಿಕಾರ್ಜುನ ಖರ್ಗೆ: With map, with photo, grievances ಎಲ್ಲವನ್ನು ಕೊಡುತ್ತಿದ್ದೇವೆ.

(ಗೊಂದಲ)

ಶ್ರೀ ಹೆಚ್.ಡಿ.ಕುಮಾರಸ್ವಾಮಿ: ಸತ್ಯಶೋಧನಾ ಸಮಿತಿಯವರು ಕೊಟ್ಟ ವರದಿಯಲ್ಲಿ ರೈತರಿಗೆ ಅನುಕೂಲವಾಗತಕ್ಕಂಥ ಏನೇನು ಸಲಹೆಗಳನ್ನು ಕೊಟ್ಟಿದ್ದಾರೆ ಅಂಥ ಸಲಹೆಗಳ ಬಗ್ಗೆ ನಾನು ಪರಿಶೀಲನೆ ಮಾಡಿ ಕ್ರಮ ತೆಗೆದುಕೊಳ್ಳುತ್ತೇನೆ. ಯಾವುದು ಒಳ್ಳೆಯ ಸಲಹೆ ಇದೆ ಅದನ್ನು ಅಳವಡಿಸಿಕೊಳ್ಳುತ್ತೇವೆ.

(ಗೊಂದಲ)

ಶ್ರೀ ಎನ್.ಧರ್ಮಸಿಂಗ್: ಅನುಷ್ಠಾನಕ್ಕೆ ತರುತ್ತೇವೆಂದು ಹೇಳಿ.

(ಗೊಂದಲ)

ಶ್ರೀ ಸಿದ್ದರಾಮಯ್ಯ: ಅವರ ಸಲಹೆಗಳನ್ನೆಲ್ಲ ಸರ್ಕಾರ ಒಪ್ಪಿಕೊಳ್ಳುತ್ತದೆಂದು ಹೇಳಿದರು. ಈಗ ಒಳ್ಳೆಯ ಸಲಹೆಗಳನ್ನು ಪರಿಶೀಲನೆ ಮಾಡುತ್ತೇವೆಂದು ಹೇಳಿತ್ತಾರೆ. It is not correct. ಪರಿಶೀಲನೆ ಮಾಡುವುದು, ಅನುಷ್ಠಾನಗೊಳಿಸುತ್ತೇನೆಂದು ಹೇಳುವ ಇವರೆಡರಲ್ಲಿಯೂ ವ್ಯತ್ಯಾಸವಿದೆ. Record ತೆಗೆದು ನೋಡಿ Record ನಲ್ಲಿ ಅವರು ಹೇಳಿದ್ದಾರೆಯೇ ಅಥವಾ ಇಲ್ಲವೇ ಎನ್ನುವುದನ್ನು ನೋಡಲಿ. ಮೊದಲು ಹೇಳಿದ್ದು ಹಾಗೆ, ಈಗ ಪರಿಶೀಲನೆ ಮಾಡುತ್ತೇವೆಂದು ಹೇಳುತ್ತಾರೆ. We cannot agree to that.

ಶ್ರೀ ಡಿ.ಟಿ.ಜಯಕುಮಾರ್: ಅದರಲ್ಲಿರುವ ಅಂಶಗಳೆಲ್ಲ ಸತ್ಯವಾಗಿದ್ದರೆ ಮಾಡಬಹುದು. ಅದು ಸತ್ಯವೋ ಅಸತ್ಯವೋ ಎಂದು ಪರಿಶೀಲನೆ ಮಾಡಬೇಕಲ್ಲವೇ?

(ಗೊಂದಲ)

ಶ್ರೀ ಎಂ ಮಲ್ಲಿಕಾರ್ಜುನ ಖರ್ಗೆ: ಅದರಲ್ಲಿ ಬೇರೆ ಏನೂ ಕೂಡ ಇಲ್ಲ. ಅದಕ್ಕಾಗಿ ದಯವಿಟ್ಟು ಪುನರ್ ಪರಿಶೀಲನೆ ಮಾಡುತ್ತೇನೆಂದು ಹೇಳುವುದಕ್ಕೆ ಹೋಗಬೇಡಿ. ಅದನ್ನು ನಾವು ಒಪ್ಪಿಕೊಳ್ಳುತ್ತೇವೆನ್ನುವ ವಾಗ್ದಾನವನ್ನು ತಾವೇನು ಮಾಡಿದ್ದೀರಿ, ದಯವಿಟ್ಟು ಅದನ್ನು ಒಪ್ಪಿಕೊಂಡು....

(ಗೊಂದಲ)

ಶ್ರೀ ಎನ್.ಧರ್ಮಸಿಂಗ್: ಮುಖ್ಯಮಂತ್ರಿಗಳು ಪ್ರಸ್ತಾಪ ಮಾಡತಕ್ಕಂಥ ಕಾಲದಲ್ಲಿ ಕಾಂಗ್ರೆಸ್ ಪಕ್ಷದ ಅಧ್ಯಕ್ಷರಾದ ಶ್ರೀ ಮಲ್ಲಿಕಾರ್ಜುನ ಖರ್ಗೆಯವರು ಮಾತನಾಡುತ್ತಾ, ಸತ್ಯಶೋಧನ ಸಮಿತಿಯ ಒಂದು ವರದಿ ಬಂದಿದೆ, ಅದನ್ನು ಕೊಡುತ್ತೇನೆಂದು ಹೇಳಿದಾಗ, ಅದರಲ್ಲಿ ಏನೇ ಇದ್ದರೂ ಕೂಡ ಅದಕ್ಕೆ ನಾನು ವಿಚಾರ ಮಾಡುತ್ತೇನೆ, ಅನುಷ್ಠಾನಕ್ಕೆ ತರುತ್ತೇನೆ ಎನ್ನುವ ರೀತಿಯಲ್ಲಿ ಹೇಳಿದ್ದಾರೆ. ಈಗ ಏನು ಹೇಳುತ್ತಿದ್ದಾರೆಂದರೆ, ಈಗ ಸ್ವಲ್ಪ deviate ಮಾಡುತ್ತಿದ್ದಾರೆ. ನಾವೇನು ಕೇಳುತ್ತಿದ್ದೇವೆಂದರೆ, ಸದನ ಸಮಿತಿ ಮಾಡಿ, ಇದಕ್ಕೆಲ್ಲ ಸತ್ಯ ಶೋಧನಾ ಸಮಿತಿ ಏನು ರಿಪೋರ್ಟ್ ಮಾಡಿದೆ, ಅದನ್ನು ಜಾರಿಗೊಳಿಸುವುದಕ್ಕೆ ನಿರ್ದಿಷ್ಟವಾದ ಉತ್ತರವನ್ನು ಕೊಡಬೇಕು.

ಶ್ರೀ ಹೆಚ್.ಸಿ.ಬಾಲಕೃಷ್ಣ: ಅದರೊಳಗಿರುವ ಸತ್ಯವನ್ನು ಅವರು ಶೋಧನೆ ಮಾಡಬೇಕಲ್ಲವೇ?

(ಗೊಂದಲ)

ಶ್ರೀ ಹೆಚ್.ಡಿ.ಕುಮಾರಸ್ವಾಮಿ: ಮಾನ್ಯ ಅಧ್ಯಕ್ಷರೆ, ಆಗಲೇ ನಾನು ಹೇಳಿರುವುದೇನೆಂದರೆ, ಇವತ್ತು ಕಾಂಗ್ರೆಸ್ ಪಕ್ಷದ ಸತ್ಯಶೋಧನಾ ಸಮಿತಿ ಕೊಟ್ಟಿರುವ ಸಲಹೆಗಳಲ್ಲಿ ರೈತರಿಗೆ ರಕ್ಷಣೆ ಒದಗಿಸತಕ್ಕಂಥ ಒಳ್ಳೆಯ ಸಲಹೆಗಳಿವೆ ಅದನ್ನು ನಾನು ಜಾರಿಗೊಳಿಸುವುದಕ್ಕೆ ಪ್ರಯತ್ನ ಪಡುತ್ತೇನೆಂದು ಹೇಳಿರತಕ್ಕಂಥದ್ದು. (ಗೊಂದಲ) ರೈತರಿಗೆ ರಕ್ಷಣೆ ಕೊಡುವ ವಿಚಾರದಲ್ಲಿ ಬಹಳ ದೊಡ್ಡ ಮಟ್ಟದಲ್ಲಿ ಚರ್ಚೆ ನಡೆಯುತ್ತಿದ್ದಾಗ ರೈತರಿಗೆ ಇಲ್ಲಿ ಕೊಟ್ಟಿರುವ ಸಲಹೆಗಳಲ್ಲಿ ರಕ್ಷಣೆ ಸಿಗತಕ್ಕಂಥದ್ದಕ್ಕೆ ಅವಕಾಶಗಳಿದ್ದರೆ ಆ ಎಲ್ಲ ಅವಕಾಶಗಳನ್ನು ಜಾರಿಗೆ ತರುತ್ತೇವೆ.

ಅಧ್ಯಕ್ಷರು: ಈಗ ವಿತ್ತೀಯ ಕಾರ್ಯಕಲಾಪಗಳು.